# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಗುರುವಾರ, ಜುಲೈ 21, 2022

ಸಂಪುಟ : 49 ಸಂಚಿಕೆ : 68 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


# ಗುರುಗಳ ಬಗ್ಗೆ ಟೀಕಿಸುವವರೆಂತಹ ಶಿಷ್ಯರು?

## ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘದ ನೂತನ ಅಧ್ಯಕ್ಷ ಹೆಚ್.ಆರ್. ಬಸವರಾಜಪ್ಪ ಪ್ರಶ್ನೆ

ದಾವಣಗೆರೆ, ಜು.20- ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಅವರ ಬಗ್ಗೆ ಕೆಲವರು ಟೀಕೆ-ಟಿಪ್ಪಣಿ ಮಾಡುತ್ತಿದ್ದಾರೆ. ಇಂತಹ ಟೀಕೆಗಳನ್ನು ನಿಕೃಷ್ಟವಾಗಿ ಕಾಣಬೇಕು. ಅಲ್ಲದೇ ಇವುಗಳಿಂದ ಸಮಾಜದ ಜನರು ವಿಚಲಿತರಾಗಬಾರದು ಎಂದು ಸಿರಿಗೆರೆಯ ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘದ ನೂತನ ಅಧ್ಯಕ್ಷ ಹೆಚ್.ಆರ್. ಬಸವರಾಜಪ್ಪ ತಿಳಿಸಿದರು.

ಅವರು, ಇಂದು ನಗರದ ಹದಡಿ ರಸ್ತೆಯಲ್ಲಿನ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪದ ಮಿನಿ ಚೌಟ್ರಿಯಲ್ಲಿ ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘದಿಂದ ಹಮ್ಮಿಕೊಳ್ಳಲಾಗಿದ್ದ ಪದಗ್ರಹಣ ಕಾರ್ಯಕ್ರಮದಲ್ಲಿ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು, ಗೌರವ ಸ್ವೀಕರಿಸಿ ಮಾತನಾಡಿದರು.

ಶ್ರೀ ತರಳಬಾಳು ಜಗದ್ಗುರುಗಳು ಕೆರೆ ತುಂಬಿಸುವ, ಫಸಲ್ ಬಿಮಾ ಯೋಜನೆ, ಯಶಸ್ವಿನಿ ಯೋಜನೆ ಹೀಗೆ ಜನಪರ, ರೈತ ಪರ ಯೋಜನೆಗಳನ್ನು ಸರ್ಕಾರದ ಹಂತದಲ್ಲಿ ಜಾರಿಗೆ ತರುವಂತಹ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿದ್ದಾರೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಗೌರವ, ಪಾವಿತ್ರ್ಯತೆ ಪಡೆದಿರುವ ಶ್ರೀಮಠವೂ ಶೈಕ್ಷಣಿಕ, ಧಾರ್ಮಿಕ ಮತ್ತು ಸಾಮಾಜಿಕವಾಗಿ ಬೇರೆ ಮಠಗಳಿಗೆ ಮಾದರಿಯಾಗಿದೆ. ಹೀಗಿರುವಾಗ, ತರಳಬಾಳು ಜಗದ್ಗುರುಗಳಿಗೆ ಮತ್ತು ಶ್ರೀಮಠಕ್ಕೆ ಸಂಬಂಧಿಸಿದಂತೆ ಕೆಲವರು ಸಾಮಾಜಿಕ ಜಾಲತಾಣಗಳ ಮೂಲಕ ಇಲ್ಲ-ಸಲ್ಲದ ಟೀಕೆ-ಟಿಪ್ಪಣಿ ಮಾಡುತ್ತಾ, ಸಮಾಜದಲ್ಲಿ ಶ್ರೀಮಠದ ಗೌರವವನ್ನು ಕುಂಠಿತಗೊಳಿಸುವ ಪ್ರಯತ್ನ ಸಮಂಜಸ ಅಲ್ಲ. ಈ ರೀತಿಯಾಗಿ ಮಾತನಾಡುವವರ ಬಗ್ಗೆ ನಿರ್ಲಕ್ಷಿಸಬೇಕು. ಈ ಬಗ್ಗೆ ಯಾರೂ ಗಮನಹರಿಸಬಾರದೆಂದು ಸಮಾಜದ ಮುಖಂಡರು, ಬಾಂಧವರು ಮಠದ ಭಕ್ತರಿಗೆ ತಿಳಿ ಹೇಳಬೇಕು. ಇಂತಹ ಸರಿ-ತಪ್ಪುಗಳಿಗೆ ಸಮಾಜವೇ ಉತ್ತರ ಕೊಡಬೇಕಿದೆ. ಜಗದ್ಗುರುಗಳ ಸಮಾಜಮುಖಿ ಕೆಲಸಗಳಿಗೆ ಕೈ ಜೋಡಿಸಬೇಕಿದೆ ಎಂದು ಹೇಳಿದರು.



**ನಮ್ಮ ಸಮಾಜ, ಮಠ, ಗುರುಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿದ್ದಾರೆ. ಹಿಂದಿನ ಗುರುಗಳು ಉತ್ತಮ ಗುರುವನ್ನು ಉತ್ತರಾಧಿಕಾರಿಯನ್ನಾಗಿ ಮಾಡಿ ಹೋಗಿದ್ದಾರೆ. ಹೀಗೆ ಹಿರಿಯ ಮತ್ತು ಈಗಿನ ಗುರುಗಳಂತೆ ಮಠದ ಶ್ರೇಯೋಭಿವೃದ್ಧಿ ಮತ್ತು ಸಮಾಜದ ಏಳಿಗೆಗೆ ತಮ್ಮನ್ನು ತಾವು ಸಮರ್ಪಿಸಿಕೊಳ್ಳುವಂತಹ ಗುರು ಶ್ರೀಮಠದ ಉತ್ತರಾಧಿಕಾರಿಯಾಗಬೇಕಿದೆ. ಈ ಹಿನ್ನೆಲೆಯಲ್ಲಿ ಉತ್ತಮ ಉತ್ತರಾಧಿಕಾರಿ ಸಿಗಲು ಕಾಯುತ್ತಿದ್ದೇವೆ. ಈ ವಿಚಾರದಲ್ಲಿ ಅವಸರ ಏಕೆ. ಉತ್ತರ್ರಾಧಿಕಾರಿ ಆಯ್ಕೆ ಮಾಡುವ ಜವಾಬ್ದಾರಿ ನಮ್ಮ ಸಮಾಜದ ನೂತನ ಅಧ್ಯಕ್ಷರ ಮೇಲಿದೆ.**

**- ಹೆಚ್.ಆರ್. ಬಸವರಾಜಪ್ಪ, ನೂತನ ಅಧ್ಯಕ್ಷರು, ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘ**

ಸಮಾಜವೆಂದರೆ ಕುಟುಂಬವಿದ್ದಂತೆ. ಈ ಕುಟುಂಬದಲ್ಲಿ ಏನೇ ಸಮಸ್ಯೆ ಇದ್ದರೂ ಸಹ ನಾಲ್ಕು ಗೋಡೆಗಳ ಮಧ್ಯೆ ಬಗೆಹರಿಸಿಕೊಳ್ಳಬೇಕು. ಆದರೆ, ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ದೊಡ್ಡ ಸಮಸ್ಯೆಯಂತೆ ಬಿಂಬಿಸಿ, ಅದರಲ್ಲಿ ಹಾಕುವುದು ಎಷ್ಟು ಸರಿ. ಗುರುಗಳ ಬಗ್ಗೆ ಟೀಕಿಸುವವರು ಎಂತಹ ಶಿಷ್ಯರು? ಎಂದು ಪ್ರಶ್ನಿಸಿದರು.

ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘದ ಅಧ್ಯಕ್ಷ ಹುದ್ದೆ ಅನಿರೀಕ್ಷಿತ ಜವಾಬ್ದಾರಿಯಾಗಿದೆ. ಕನಸಿನಲ್ಲೂ ನಾನು ಈ ಹುದ್ದೆ ಬಗ್ಗೆ ಯೋಜನೆ ಮಾಡಿರಲಿಲ್ಲ. ಆದರೆ, ಯಾವುದೇ ಅಧಿಕಾರವಿಲ್ಲದಿದ್ದರೂ ಸಮಾಜದ ಏಳಿಗೆಯ ಕೆಲಸ ಮಾಡಿರುವ ನಿನಗೆ ಅಧಿಕಾರ ನೀಡಿದ್ದೇವೆಂದು ಶ್ರೀಗಳು ಸಂಘದ ಸಭೆಯಲ್ಲಿ ನನಗೆ ಈ ಅಧಿಕಾರ ನೀಡಿ (3ನೇ ಪುಟಕ್ಕೆ)

# ಸಾಕಷ್ಟು ಆವಿಷ್ಕಾರಗಳಿದ್ದರೂ ಜನ ಸಾಮಾನ್ಯರಿಗೆ ಲಾಭವಿಲ್ಲ

**ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ**

ಬೆಂಗಳೂರು, ಜು.20- ಆರೋಗ್ಯ ರಕ್ಷಣೆ ಕ್ಷೇತ್ರದಲ್ಲಿ ಸಾಕಷ್ಟು ಆವಿಷ್ಕಾರಗಳು ನಡೆಯುತ್ತಿದ್ದರೂ, ಜನಸಾಮಾನ್ಯರಿಗೆ ಅದರ ಲಾಭ ದೊರೆಯುತ್ತಿಲ್ಲ ಎಂದು ರಾಜ್ಯದ ಎಲೆಕ್ಟ್ರಾನಿಕ್ಸ್ ಐಟಿ ಬಿಟಿ ಮತ್ತು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ವಿಷಾದ ವ್ಯಕ್ತಪಡಿಸಿದರು.

ನಗರದಲ್ಲಿಂದು ನಾಸ್ಕಾಂ ಆಶ್ರಯದಲ್ಲಿ ನಡೆದ ಹತ್ತನೇ ಆರೋಗ್ಯ ವಿಜ್ಞಾನ ಮತ್ತು ಆರೋಗ್ಯ ರಕ್ಷಣೆ ತಂತ್ರಜ್ಞಾನ ಆವಿಷ್ಕಾರ ಸಮಾವೇಶದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸುತ್ತಿದ್ದೇವೆ. ಆರೋಗ್ಯ ಕ್ಷೇತ್ರದಲ್ಲಿಯೂ ವೇಗವಾಗಿ ತಂತ್ರಜ್ಞಾನ ಅಭಿವೃದ್ಧಿಗೊಳ್ಳುತ್ತಿದೆ. ಜನಸಾಮಾನ್ಯರಿಗೆ ಕೈಗೆಟಕುವ ಬೆಲೆಯಲ್ಲಿ ಗುಣಮಟ್ಟದ ಆರೋಗ್ಯ ಸೇವೆ ದೊರೆಯಬೇಕೆನ್ನುವುದು ತಂತ್ರಜ್ಞಾನ ಅಭಿವೃದ್ಧಿ ಉದ್ದೇಶವಾಗಿದ್ದರೂ, ವಾಸ್ತವ ಹಾಗಿಲ್ಲ.

ವಿಶೇಷವಾಗಿ, ಸರ್ಕಾರದ ಪ್ರಯತ್ನಗಳ ಹೊರತಾಗಿಯೂ, ಗ್ರಾಮೀಣ ಪ್ರದೇಶಗಳ ಜನರು ಗುಣಮಟ್ಟದ ಆರೋಗ್ಯ ಸೇವೆಯಿಂದ ವಂಚಿತರಾಗುತ್ತಿದ್ದಾರೆ ಎಂದು ಅವರು ಅಭಿಪ್ರಾಯಪಟ್ಟರು. ಎಲ್ಲಕ್ಕಿಂತ ಆರೋಗ್ಯ ರಕ್ಷಣೆ ಮತ್ತು ಶಿಕ್ಷಣ ಕ್ಷೇತ್ರಗಳು ಜನಸಾಮಾನ್ಯರಿಗೆ ನೇರವಾಗಿ ಸಂಬಂಧಿಸಿದ್ದವು. ಕರ್ನಾಟಕದಲ್ಲಿ ವೈದ್ಯರು ಸೇರಿದಂತೆ ಆರೋಗ್ಯ ವೃತ್ತಿಪರರ ಪ್ರಮಾಣ ವಿಶ್ವ ಆರೋಗ್ಯ ಸಂಸ್ಥೆ ಸೂಚಿಸಿದ್ದಕ್ಕಿಂತಲೂ (3ನೇ ಪುಟಕ್ಕೆ)

# ಲಂಕಾ ಅಧ್ಯಕ್ಷರಾಗಿ ವಿಕ್ರಮಸಿಂಘೆ ಆಯ್ಕೆ

ಕೊಲಂಬೊ, ಜು. 20 – ಹಿರಿಯ ರಾಜಕಾರಣಿ ರಾಣಿಲ್ ವಿಕ್ರಮಸಿಂಘೆ ಅವರನ್ನು ಶ್ರೀಲಂಕಾ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ.

ಸಂಸತ್ತಿನಲ್ಲಿ ನಡೆದ ಚುನಾವಣೆಯಲ್ಲಿ ಪ್ರಸಕ್ತ ಹಂಗಾಮಿ ಅಧ್ಯಕ್ಷರಾಗಿರುವ ವಿಕ್ರಮಸಿಂಘೆ ಅವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಲಾಗಿದೆ.

225 ಸದಸ್ಯರ ಸದನದಲ್ಲಿ ವಿಕ್ರಮಸಿಂಘೆ ಪರವಾಗಿ 134 ಮತಗಳು ಚಲಾವಣೆಯಾಗಿವೆ. ಎದುರಾಳಿ ದುಲ್ಲಾಸ್ ಅಲಹಪ್ಪೆರುಮ ಅವರಿಗೆ 82 ಮತಗಳು ದೊರೆತಿವೆ.



ದೇಶ ಬಿಟ್ಟು ಹೋಗಿರುವ ಮಾಜಿ ಅಧ್ಯಕ್ಷ ಗೊಟಬಯ ರಾಜಪಕ್ಸೆ ಅವರ ಎಸ್.ಎಲ್.ಪಿ.ಪಿ. ಪಕ್ಷದ ಬೆಂಬಲದೊಂದಿಗೆ ವಿಕ್ರಮಸಿಂಘೆ ಆಯ್ಕೆಯಾಗಿದ್ದಾರೆ. ಇದರಿಂದಾಗಿ ರಾಜಪಕ್ಸೆ ಕುಟುಂಬ ಶ್ರೀಲಂಕಾದಲ್ಲಿ ಹೊಂದಿರುವ ಹಿಡಿತ ಮುಂದುವರೆದಂತಾಗಿದೆ.

# ಬಿಐಇಟಿ ವಿದ್ಯಾರ್ಥಿಗಳಿಂದ 64 ಬಗೆಯ ಸಂಶೋಧನೆಗಳು

ದಾವಣಗೆರೆ, ಜು.20- ನಗರದ ಬಿಐಇಟಿ ಕಾಲೇಜಿನ 10 ವಿಭಾಗಗಳ ವಿದ್ಯಾರ್ಥಿಗಳು 64 ರೀತಿಯ ಸಂಶೋಧನೆಗಳನ್ನು ಮಾಡಿದ್ದಾರೆ ಎಂದು ಪ್ರಾಂಶುಪಾಲ ಡಾ.ಅರವಿಂದ್ ಹೇಳಿದರು.

ವಿದ್ಯಾರ್ಥಿಗಳ ಸಂಶೋಧನಾ ಮಾದರಿ ಪ್ರದರ್ಶನಕ್ಕೂ ಮುನ್ನ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈ ಮಾದರಿಗಳಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಹೆಚ್ಚು ಬರುವಂಥದ್ದು ಯಾವುದು ಎಂದು ಗುರುತಿಸಲಾಗುವುದು ಎಂದು ಹೇಳಿದರು.

ಈಗ ಸಂಶೋಧನೆಗಳಿಗೆ ಆರ್ಥಿಕ ಸಂಪನ್ಮೂಲಗಳ ಕೊರತೆ ಇಲ್ಲ. ನ್ಯೂ ಏಜ್ ಇನ್‌ಕ್ಯುಬೇಷನ್ ನೆಟ್‌ವರ್ಕ್, ವಿಟಿಯು, ಕೆಎಸ್‌ಸಿಎಸ್‌ಟಿ, ಎಐಸಿಟಿಇ, ಕೆಎಸ್‌ಟಿಎಗಳು ಸಂಶೋಧನೆಗಳಿಗೆ ಹಣ ಒದಗಿಸುತ್ತಿವೆ. ಈ ಸಂಸ್ಥೆಗಳು ಆಯ್ಕೆ ಮಾಡದ ಸಂಶೋಧನೆಗಳಿಗೆ ಬಿಐಇಟಿಯೇ ಹಣ ನೀಡುತ್ತದೆ ಎಂದರು.

ಬಿಐಇಟಿಯಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಹಾಗಾಗಿ ಕ್ಯಾಂಪಸ್ ಸೆಲೆಕ್ಷನ್‌ನಲ್ಲಿ ವರ್ಷದಿಂದ ವರ್ಷಕ್ಕೆ ಇಲ್ಲಿನ ಹೆಚ್ಚು ವಿದ್ಯಾರ್ಥಿಗಳು ಆಯ್ಕೆಯಾಗುತ್ತಿದ್ದಾರೆ. 2020–21ರಲ್ಲಿ 357 ಮಂದಿ ಆಯ್ಕೆಯಾಗಿದ್ದರೆ, (3ನೇ ಪುಟಕ್ಕೆ)



# ಶೇ.40 ಕಮೀಷನ್ ಆತ್ಮಹತ್ಯೆ : ಈಶ್ವರಪ್ಪಗೆ ಪೊಲೀಸರ ಕ್ಲೀನ್‌ಚಿಟ್

ಬೆಂಗಳೂರು, ಜು. 20 – ಶೇ.40ರ ಕಮೀಷನ್ ವಿಷಯದಲ್ಲಿ ಗುತ್ತಿಗೆದಾರರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಕ್ಕೆ ಸಂಬಂಧಿಸಿದಂತೆ ಪೊಲೀಸರು ತಮ್ಮ ವಿರುದ್ಧ ಬಿ - ರಿಪೋರ್ಟ್ ದಾಖಲಿಸಿದ್ದಾರೆ ಎಂದು ಮಾಜಿ ಸಚಿವ ಹಾಗೂ ಬಿಜೆಪಿ ನಾಯಕ ಕೆ.ಎಸ್. ಈಶ್ವರಪ್ಪ ಹೇಳಿದ್ದಾರೆ.

ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ ಎಂದು ಪೊಲೀಸರು ವರದಿ ನೀಡಿದ್ದಾರೆ. ಪೊಲೀಸ್ ವರದಿಯಲ್ಲಿ ಆರೋಪ ಮುಕ್ತವಾಗಿ ಬರುತ್ತೇನೆ ಎಂದು ಮೊದಲೇ ಹೇಳಿದ್ದೆ ಎಂದು ಈಶ್ವರಪ್ಪ ತಿಳಿಸಿದ್ದಾರೆ.

ನನ್ನನ್ನು ಮತ್ತೆ ಸಚಿವನನ್ನಾಗಿ ಮಾಡುವುದು ಬಿಜೆಪಿಗೆ ಬಿಟ್ಟದ್ದು, ಪಕ್ಷದ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆ ಎಂದವರು ತಿಳಿಸಿದ್ದಾರೆ. ಆಧಾರ ರಹಿತ ಆರೋಪ ಬಂದುದರಿಂದ ನನಗೆ ನೋವಿತ್ತು. ರಾಜಕಾರಣದಲ್ಲಿ ಆರೋಪಗಳು ಸಹಜ, ಆರೋಪದಿಂದ ಮುಕ್ತನಾದ ತೃಪ್ತಿ ಇದೆ ಎಂದವರು ಹೇಳಿದ್ದಾರೆ.



ನಾನು ಮಾಡಿರುವ ಕೆಲಸಕ್ಕೆ ಹಣ ಬಿಡುಗಡೆ ಮಾಡಲು 40 ಪರ್ಸೆಂಟ್ ಲಂಚ ಕೇಳುತ್ತಿದ್ದಾರೆ. ನನ್ನ ಸಾವಿಗೆ ಈಶ್ವರಪ್ಪ ಕಾರಣ ಎಂದು ಗುತ್ತಿಗೆದಾರ ಸಂತೋಷ್ ಪಾಟೀಲ್ ಅವರು ಏಪ್ರಿಲ್ 12ರಂದು ವಾಟ್ಸ್‌ಆಪ್ ಮೆಸೇಜ್ ಮಾಡಿದ ನಂತರ ಆತ್ಮಹತ್ಯೆ ಮಾಡಿಕೊಂಡಿದ್ದರು. ನಂತರ ಈ ವಿವಾದದ ಹಿನ್ನೆಲೆಯಲ್ಲಿ ಈಶ್ವರಪ್ಪ ರಾಜೀನಾಮೆ (3ನೇ ಪುಟಕ್ಕೆ)

## ಇಂಧನ, ಕಚ್ಚಾ ತೈಲದ ಅನಿರೀಕ್ಷಿತ ಲಾಭದ ತೆರಿಗೆ ಕಡಿತ

ನವದೆಹಲಿ, ಜು. 20 – ಇಂಧನ ರಫ್ತು ಹಾಗೂ ದೇಶೀಯ ಕಚ್ಚಾ ತೈಲದ ಅನಿರೀಕ್ಷಿತ ಲಾಭಗಳ ಮೇಲೆ ವಿಧಿಸಲಾಗಿದ್ದ ತೆರಿಗೆಯನ್ನು ಕೇಂದ್ರ ಸರ್ಕಾರ ಕಡಿತಗೊಳಿಸಿದೆ.

ಲೀಟರ್ ಪೆಟ್ರೋಲ್ ರಫ್ತಿನ ಮೇಲಿದ್ದ 6 ರೂ.ಗಳ ತೆರಿಗೆ ರದ್ದುಗೊಳಿಸಲಾಗಿದೆ.. ಡೀಸೆಲ್ ರಫ್ತಿನ ಮೇಲಿದ್ದ ತೆರಿಗೆಯನ್ನು ಲೀಟರ್‌ಗೆ 2 ರೂ. ಕಡಿತಗೊಳಿಸಿ 11 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ವೈಮಾನಿಕ ಇಂಧನದ ಮೇಲಿನ ತೆರಿಗೆಯನ್ನು 2 ರೂ. ಇಳಿಸಿ 4 ರೂ.ಗಳಿಗೆ ನಿಗದಿ ಪಡಿಸಲಾಗಿದೆ.

ದೇಶೀಯವಾಗಿ ಉತ್ಪಾದಿಸುವ ಕಚ್ಚಾ ತೈಲದ ಮೇಲೆ ಪ್ರತಿ ಟನ್‌ಗೆ ವಿಧಿಸಲಾಗುತ್ತಿದ್ದ ತೆರಿಗೆಯನ್ನು (3ನೇ ಪುಟಕ್ಕೆ)

## ವಾಹನ ಹರಿಸಿ ಇಬ್ಬರು ಪೊಲೀಸರ ಹತ್ಯೆ

ನವದೆಹಲಿ, ಜು. 20 – ವಾಹನ ತಪಾಸಣೆ ಕರ್ತವ್ಯದಲ್ಲಿದ್ದ ಇಬ್ಬರು ಪೊಲೀಸರ ಮೇಲೆ ವಾಹನ ಹರಿಸಿ ಹತ್ಯೆ ಮಾಡಿದ ಪ್ರತ್ಯೇಕ ಘಟನೆಗಳು ಗುಜರಾತ್ ಹಾಗೂ ಜಾರ್ಖಂಡ್‌ಗಳಲ್ಲಿ ನಡೆದಿವೆ.

ಜಾರ್ಖಂಡ್‌ನ ತುಪುಡನ ಎಂಬಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮಹಿಳಾ ಇನ್ಸ್‌ಪೆಕ್ಟರ್ ಸಂಧ್ಯಾ ತುಪ್ನೊ ಅವರ ಮೇಲೆ ವಾಹನ ಹರಿಸಲಾಗಿದೆ. ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಒಡಿಶಾದಿಂದ ಜಾನುವಾರುಗಳನ್ನು ಸಾಗಣೆ ಮಾಡಲಾಗುತ್ತಿದೆ ಎಂಬ (3ನೇ ಪುಟಕ್ಕೆ)

# ರಾಜ್ಯದ 8,800 ಕೋಟಿ ರೂ. ಜಿಎಸ್‌ಟಿ ಬಾಕಿ ಪಾವತಿ

ಬೆಂಗಳೂರು, ಜು. 20 – ಕರ್ನಾಟಕಕ್ಕೆ ಬರಬೇಕಿದ್ದ 8,800 ಕೋಟಿ ರೂ.ಗಳ ಜಿ.ಎಸ್.ಟಿ. ಬಾಕಿಯನ್ನು ಕೇಂದ್ರ ಸರ್ಕಾರ ಪಾವತಿಸಿದೆ. ಶೀಘ್ರದಲ್ಲೇ ಉಳಿದ ಹಣ ಬರಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ರಾಜ್ಯಗಳಿಗೆ ನೀಡುವ ಜಿ.ಎಸ್.ಟಿ. ಪರಿಹಾರವನ್ನು ಇನ್ನೂ ಎರಡು ವರ್ಷ ಮುಂದುವರೆಸುವಂತೆ ನಾವು ಕೇಂದ್ರದ ಬಳಿ ಮನವಿ ಮಾಡಿಕೊಂಡಿದ್ದೆವು. ಆದರೆ, ನಿಯಮಗಳ ಕಾರಣದಿಂದಾಗಿ ಮನವಿಯನ್ನು ಕೇಂದ್ರ ಸರ್ಕಾರ ಒಪ್ಪಿಲ್ಲ ಎಂದು ತಿಳಿಸಿದ್ದಾರೆ. ಆದರೆ, 8,800 ಕೋಟಿ ರೂ.ಗಳ ಬಾಕಿಯನ್ನು ಕೇಂದ್ರ ಸರ್ಕಾರ ಪಾವತಿಸಿದೆ. ಉಳಿದ ಹಣ ಶೀಘ್ರ ಬರುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದವರು ಹೇಳಿದ್ದಾರೆ.


## ದ್ವಿತೀಯ ವರ್ಷದ ನೆನಹು



ಜನನ : 18 ಏಪ್ರಿಲ್ 1947

ಲಿಂಗೈಕ್ಯ : 21 ಜುಲೈ 2020

ದಿ|| ಶ್ರೀ ಡಿ. ಕೊಟ್ರಪ್ಪ ನಿವೃತ್ತ ಫಾರ್ಮಾಸಿಸ್ಟ್

ನೀವು ಲಿಂಗೈಕ್ಯರಾಗಿ ಇಂದಿಗೆ ಎರಡು ವರ್ಷ. ನಗುಮೊಗದ, ಸ್ನೇಹಪರತೆಯ, ಸಮಚಿತ್ತದ ನಿಮ್ಮ ಬದುಕೇ ನಮ್ಮ ಭರವಸೆಯ ಕಂದೀಲು. ನೀವು ಹೊಸೆದ ಹೊಂಗನಸುಗಳ ಹಾದಿಯಲ್ಲಿ ಪಯಣಿಸುವ ಸಂಕಲ್ಪದಲ್ಲಿ...

ಶ್ರೀಮತಿ ಎಸ್. ಲೀಲಾ, ನಿವೃತ್ತ ಮುಖ್ಯ ಶಿಕ್ಷಕರು
ಶ್ರೀಮತಿ ಸೌಮ್ಯ, ಶ್ರೀ ಕೆ. ಗಣೇಶ್, ಸಹಾಯಕ ಪ್ರಾಧ್ಯಾಪಕರು, E&C ವಿಭಾಗ, ಬಿಐಇಟಿ, ದಾವಣಗೆರೆ.
ಚಿ|| ಪ್ರಮಥ್ ಹಾಗೂ ಚಿ|| ಅನಿಕೇತ್ (ಕೊಟ್ರೇಶ್)
ಶ್ರೀಮತಿ ವಿನುತ ಕೆ, ಶ್ರೀ. ರವಿಶೇಖರ್, ಸಿವಿಲ್ ಎಂಜಿನಿಯರ್ ಚಿ|| ವೃಷಾಂಕ್
ಶ್ರೀಮತಿ ಮಮತ, ಶ್ರೀ ವಿ. ನಟರಾಜ್, ಗಣಿತ ಉಪನ್ಯಾಸಕರು, ಸಿದ್ಧಗಂಗಾ ಪ.ಪೂ. ಕಾಲೇಜು, ದಾವಣಗೆರೆ
ಚಿ|| ಚಂದ್ರಚೂಡ, ಮೊ. : 96206 59856


# ರೈತ ಸಂಘದ ಅನುಭವ ಸಮಾಜ ನಿರ್ವಹಿಸಲು ಅನುಕೂಲಕರವಾಗಿದೆ

**ಹೆಚ್.ಆರ್. ಬಸವರಾಜಪ್ಪ ಅವರು ಬುಧವಾರ ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘದಿಂದ ಹಮ್ಮಿಕೊಳ್ಳಲಾಗಿದ್ದ ಪದಗ್ರಹಣ ಕಾರ್ಯಕ್ರಮದಲ್ಲಿ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು 'ಜನತಾವಾಣಿ' ಕಾರ್ಯಾಲಯಕ್ಕೆ ಆಗಮಿಸಿದ್ದರು. ಪತ್ರಿಕಾಲಯದಲ್ಲಿ ಕೇಳಿದ ಕೆಲ ನೇರ ಪ್ರಶ್ನೆಗಳಿಗೆ ಬಸವರಾಜಪ್ಪ ಅವರು ಸಮರ್ಥವಾಗಿಯೇ ಉತ್ತರಿಸಿದರು. ಆ ವೇಳೆ ನಡೆದ ಕೆಲವು ಪ್ರಶ್ನೋತ್ತರಗಳು ಇಲ್ಲಿವೆ.**

**ವೀರಶೈವ ಸಾಧು ಸದ್ಧರ್ಮ ಸಂಘದ ಅಧ್ಯಕ್ಷ ಸ್ಥಾನಕ್ಕೆ ನಿಮ್ಮ ಹೆಸರು ಅನಿರೀಕ್ಷಿತವಲ್ಲವೇ?**

ಹೌದು, ನನ್ನ ಹೆಸರು ಅನಿರೀಕ್ಷಿತವಾಗಿಯೇ ಇತ್ತು. ತುಂಬಿದ ಸಭೆಯಲ್ಲಿ 37 ತಾಲ್ಲೂಕಿನ ಅಧ್ಯಕ್ಷರುಗಳು ಮತ್ತು ತರಳಬಾಳು ಸಮಿತಿಯ ಪದಾಧಿಕಾರಿಗಳು ಸೇರಿ ಹರಪನಹಳ್ಳಿ ತಾಲ್ಲೂಕು ಸಮಾಜದ ಅಧ್ಯಕ್ಷರು ನನ್ನ ಹೆಸರು ಪ್ರಕಟಿಸಿದ್ದರು. ಇತರೆ ಅಧ್ಯಕ್ಷರೂ ಅನುಮೋದಿಸಿದರು.

**ಸಂದಿಗ್ಧ ಪರಿಸ್ಥಿತಿಯಲ್ಲಿರುವ ಸಮಾಜವನ್ನು ಹೇಗೆ ನಿಭಾಯಿಸುವಿರಿ? ಪೂರ್ವ ಸಿದ್ಧತೆ ಏನಾದರೂ...?**

ರೈತ ಸಂಘದಲ್ಲಿದ್ದ ನಾನು ಮೊದಲಿನಿಂದಲೂ ಅನೇಕ ಕಠಿಣ ಪರಿಸ್ಥಿತಿ ನಿಭಾಯಿಸಿದ ಅನುಭವ, ಜಾಣ್ಮೆ ಇಲ್ಲಿ ಸಹಾಯಕವಾಗುತ್ತದೆ ಎಂಬ ಧೈರ್ಯವಿದೆ. ಕೆಲವರು ಏನೇನೋ ಆಸೆಗಳನ್ನಿಟ್ಟುಕೊಂಡು ಫಲ ಕೊಡದೆ ಇದ್ದ ಕಾರಣಕ್ಕಾಗಿ ಸಾಮಾಜಿಕ ಜಾಲ ತಾಣಗಳಲ್ಲಿ ಸುಳ್ಳು ಸುದ್ದಿ ಹರಡಿಸುತ್ತಿದ್ದಾರೆ. ಅಂತಹವನ್ನೆಲ್ಲಾ ನಂಬ ಬಾರದು. ಸಮಾಜದ ಮುಖಂಡರು ಅಂತವರಿಗೆ ತಿಳಿ ಹೇಳುವಂತೆ ಕೇಳಿಕೊಂಡಿದ್ದೇನೆ.

**ರೈತ ಸಂಘ ಸ್ಥಾಪನೆಯಾದಾಗಿನಿಂದಲೂ ಭಿನ್ನಾಭಿಪ್ರಾಯಗಳಿವೆ. ಸಂಘ ಬಣಗಳಾಗುತ್ತಲೇ ಬಂದಿದೆ. ಅಂತಹ ಸಂಘದಿಂದ ಬಂದ ನೀವು ವೀರಶೈವ ಸಮಾಜವನ್ನು ಹೇಗೆ ... ?**



ಎರಡೂ ಸಂಘಗಳು ಬೇರೆ ಬೇರೆ. ರೈತ ಸಂಘ ನೋಂದಾಯಿತ ಸಂಘವಲ್ಲ. ಹಾಗಾಗಿ ಅಲ್ಲಿ ವಿಘಟನೆ ಸಾಧ್ಯ. ಆದರೆ ಸಾಧು ಸದ್ಧರ್ಮ ಸಂಘ ನೋಂದಾಯಿತ ಸಂಘ. ಇಲ್ಲಿ ಅದರದ್ದೇ ಆದ ನೀತಿ-ನಿಯಮಗಳಿರುತ್ತವೆ. ಹೀಗಾಗಿ ತೊಡಕುಗಳು ಉದ್ಭವಿಸುವುದಿಲ್ಲ.

**ಸಮಾಜದ ಸಂಘಟನೆ ಹೇಗಿರಬೇಕೆಂದು ಬಯಸುವಿರಿ?**

ಕೆಲವೇ ತಾಲ್ಲೂಕುಗಳಿಗೆ ಸೀಮಿತವಾಗಿದ್ದ ಸಮಿತಿಗಳನ್ನು ಜಗದ್ಗುರುಗಳವರ ಆಶಯದಂತೆ ರಾಜ್ಯದ ನಮ್ಮ ಸಮಾಜದ ಜನರಿರುವ ಎಲ್ಲಾ ಕಡೆ ವಿಸ್ತರಿಸಿ, ತಾಲ್ಲೂಕಿನಲ್ಲಿ ಐದು ವಲಯಗಳನ್ನಾಗಿ ವಿಂಗಡಿಸಿ ಮಹಿಳೆಯರು, ಯುವಕರು, (3ನೇ ಪುಟಕ್ಕೆ)

## ಉತ್ತರಾಧಿಕಾರಿ ವಿಚಾರ ತಂತಾನೇ ಬಗೆಹರಿಯಲಿದೆ: ಅಧ್ಯಕ್ಷ ಬಸವರಾಜಪ್ಪ


**ಉತ್ತರಾಧಿಕಾರಿ ವಿಚಾರ ಸಮಯ ಬಂದಾಗ ತಂತಾನೆ ಬಗೆಹರಿಯುತ್ತದೆ ಎಂಬ ವಿಶ್ವಾಸವಿದೆ. ಎಂದು ಬಸವರಾಜಪ್ಪ ಹೇಳಿದರು.**

**ಸಮಾಜದಲ್ಲಿರುವ ಶ್ರೀಮಂತರು, ಪ್ರಭಾವಿಗಳು, ರಾಜಕಾರಣಿಗಳ ಬದಲಾಗಿ ಸಾಮಾನ್ಯ ರೈತ ಕುಟುಂಬದಿಂದ ಬಂದ ನನ್ನನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಈ ನಿರ್ಧಾರ ರೈತರ ಪರವಾಗಿರುವ ಜಗದ್ಗುರುಗಳ ನಿಲುವನ್ನು ಸ್ಪಷ್ಟಪಡಿಸುತ್ತದೆ ಎಂದು ಬಸವರಾಜಪ್ಪ ಹೇಳಿದರು.**

**ಸಮಾಜದ ಪ್ರಭಾವಿಗಳು, ಶ್ರೀಮಂತರು ಮುಂದಿನ ದಿನಗಳಲ್ಲಿ ನಿಮಗೆ ಸಹಕರಿಸುವರೇ? ಎಂಬ ಪ್ರಶ್ನೆಗೆ, ನಾನು ಎಲ್ಲರೊಟ್ಟಿಗೂ ಸಂಪರ್ಕ ಇಟ್ಟುಕೊಂಡು, ಎಲ್ಲರ ಸಲಹೆ-ಸಹಕಾರ ಪಡೆದೇ ಮುಂದುವರೆಯುತ್ತೇನೆ. ಎಲ್ಲರೂ ಸಹಕಾರ ನೀಡುವ ಭರವಸೆ ಇದೆ ಎಂದು ಹೇಳಿದರು.**


|| ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು ||

## ಗುರು-ಲಿಂಗ ಜಂಗಮಾರಾಧನೆ



ದಾವಣಗೆರೆ ವಾಸಿಗಳಾದ ಶ್ರೀಮತಿ ಎನ್.ಎಂ. ಸುವರ್ಣಮ್ಮ ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು. ದಿನಾಂಕ 17.7.2022ನೇ ಭಾನುವಾರ ಬೆಳಿಗ್ಗೆ 11.15ಕ್ಕೆ ನನ್ನ ಪೂಜ್ಯ ಪತಿಯವರಾದ ಶ್ರೀ ಎನ್.ಎಂ. ಮುರುಗೇಂದ್ರಯ್ಯ ಅವರು (ನಿವೃತ್ತ ಶಿಕ್ಷಕರು, ಶ್ರೀ ಗುರು ರೇಣುಕಾ ಹೋಟೆಲ್ ಮಾಲೀಕರು ಹಾಗು ಮಾಜಿ ಅಧ್ಯಕ್ಷರು ಶ್ರೀ ವೀರಮಹೇಶ್ವರ ಕ್ರೆಡಿಟ್ ಕೋ. ಆಪರೇಟಿವ್ ಸೊಸೈಟಿ) ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಜಂಗಮ ಶಿವಗಣಾರಾಧನೆಯನ್ನು ದಿನಾಂಕ 21.7.2022ನೇ ಗುರುವಾರ ಬೆಳಿಗ್ಗೆ 10.30ಕ್ಕೆ ಷ|| ಬ್ರ|| ಡಾ. ಸದ್ಯೋಜಾತ ಶಿವಚಾರ್ಯ ಮಹಾಸ್ವಾಮಿಗಳು, ಎಂ.ಸಿ.ಸಿ. 'ಬಿ' ಬ್ಲಾಕ್, ಶಿವಾಚಾರ್ಯ ನಿಕೇತನ ಹಿರೇಮಠ ದಾವಣಗೆರೆ, ಇಲ್ಲಿ ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಎನ್.ಎಂ ಸುವರ್ಣಮ್ಮ ಮತ್ತು ಮಕ್ಕಳು, ನೇರ್ಲಿಗಿ ಮಠದ ವಂಶಸ್ಥರು ಹಾಗೂ ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಿ.

# ಜನತೆಗೆ ಹೊರೆಯಾಗಿರುವ ತೆರಿಗೆ ನೀತಿಯನ್ನು ಸರಿಪಡಿಸಲು ಆಗ್ರಹ

## ಜನ ವಿರೋಧಿ ನೀತಿಯನ್ನು ಖಂಡಿಸಿ ಬೀದಿಗಿಳಿದು ಹೋರಾಟ ನಡೆಸಲು ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಕರೆ

ದಾವಣಗೆರೆ, ಜು. 20- ಇನ್ನೇನು ಚುನಾವಣೆ ಹತ್ತಿರದಲ್ಲಿದೆ ರಾಜ್ಯದ ಜನ ಸರ್ಕಾರವನ್ನು ತಿರಸ್ಕಾರ ಮಾಡುವ ಮೊದಲೇ ತೆರಿಗೆ ನೀತಿಯನ್ನು ಸರಿಪಡಿಸಿ ಜಾರಿಗೆ ತರುವ ಮೂಲಕ ಜನತೆ ಮೇಲಿನ ಹೊರೆ ಕಡಿಮೆ ಮಾಡುವಂತೆ ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಾಜ್ಯ ಸರ್ಕಾರದ ಜನ ವಿರೋಧಿ, ರೈತ ವಿರೋಧಿ ನೀತಿ, ಭ್ರಷ್ಟಾಚಾರದ ವಿರುದ್ಧ ಜನ ಬೀದಿಗಳಿದು ಹೋರಾಟ ಮಾಡಬೇಕಿದೆ. ರಾಜ್ಯದಲ್ಲಿ ರಸಗೊಬ್ಬರದ ಅಭಾವ ಸೃಷ್ಠಿಯಾಗಿದ್ದು, ಡಿಎಪಿ, ಯೂರಿಯಾ, ಎನ್‌ಪಿಕೆ ಗೊಬ್ಬರದ ಅಭಾವ ಹೆಚ್ಚಾಗಿದೆ. ರೈತರಿಗೆ ಸಿಟ್ಟು ಬರುವ ಮುನ್ನ ಸರಿಪಡಿಸಿ ಮುಂಗಾರು ಹಂಗಾಮಿಗೆ ಸಮರ್ಪ ಕವಾಗಿ ರಸಗೊಬ್ಬರ ಸಿಗುವಂತೆ ಮಾಡಿ ಎಂದು ಒತ್ತಾಯಿಸಿದರು.



ಜಿಎಸ್‌ಟಿ ಜಾರಿಗೊಳಿಸುವ ಮೂಲಕ ಕೇಂದ್ರ ಸರ್ಕಾರ ಜನಸಾಮಾನ್ಯರ ಮೇಲೆ ಹೊರೆ ಹೊರಿಸಿದೆ. ಜನರು ತಾವು ದುಡಿದ ಹಣವನ್ನು ತೆರಿಗೆ ರೂಪದಲ್ಲಿ ನೀಡಬೇಕಾಗಿರುವುದು ಖಂಡನೀಯ.

ಜನ ಖರೀದಿಸುವಾಗಲೂ, ಮಾರಾಟ ಮಾಡುವಾಗಲೂ ತೆರಿಗೆ ಕಟ್ಟಬೇಕು. ಇದು ಸಾಮಾನ್ಯ ಜನರ ಮೇಲೆ ಹೇರಿರುವ ಹೊರೆಯಾಗಿದೆ. ಬಂಡವಾಳ ಶಾಹಿಗಳ ಹಣ ಸರ್ಕಾರದ ಗಮನಕ್ಕೆ ಬಾರದೇ ಲೆಕ್ಕಕ್ಕೆ ಸಿಗದಷ್ಟು ಹರಿದಾಡುತ್ತಿದೆ. ಆದರೆ ಸಾಮಾನ್ಯ ಜನರನ್ನು ತೆರಿಗೆಗೆ ಒಳಪಡಿಸುತ್ತಿರುವುದು ಯಾವ ನ್ಯಾಯ? ಎಂದು ಪ್ರಶ್ನಿಸಿದರು.

ದೇಶದಲ್ಲಿ ಬಂಡವಾಳ ಶಾಹಿಗಳು ಕೈಗಾರಿಕೆ ಆರಂಭಿಸಿದರೆ 25 ವರ್ಷ ತೆರಿಗೆ ವಿನಾಯತಿ ನೀಡಲಾಗುತ್ತಿದೆ. ಜನ ಸಾಮಾ ನ್ಯರು ಮಾತ್ರ ತೆರಿಗೆಯಿಂದ ಹೊರಬರಲು ಸಾಧ್ಯವಿಲ್ಲದಂತಾಗಿದೆ ಎಂದರು.

ವಿಪಕ್ಷಗಳು ಸಹ ಜಿಎಸ್‌ಟಿ ಹೆಚ್ಚಳದ ಬಗ್ಗೆ ಚಕಾರವೆತ್ತುತ್ತಿಲ್ಲವೇಕೆ? ಎಂದು ಪ್ರಶ್ನಿಸಿದ ಅವರು, ಆಡಳಿತ ಪಕ್ಷದ ಜನ ವಿರೋಧಿ ನೀತಿಯನ್ನು ಖಂಡಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಭೈರೇಗೌಡ್ರು, ಮಲ್ಲಶೆಟ್ಟಿಹಳ್ಳಿ ಚನ್ನಬಸಪ್ಪ, ಶತಕೋಟಿ ಬಸಣ್ಣ, ಗಣೇಶ, ಚಿನ್ನಸಮುದ್ರ ಶೇಖರನಾಯ್ಕ, ಗೀತಮ್ಮ, ಚೇತನ್ ಮತ್ತಿತರರಿದ್ದರು.

### ಲಂಚ ಕೊಟ್ಟವರ್‍ಯಾರು ಸ್ಪಷ್ಟ ಪಡಿಸಲಿ

ದೆಹಲಿ ರೈತ ಹೋರಾಟ ನಿಲ್ಲಿಸಲು 3000 ಕೋಟಿ, ಕೆಎಸ್‌ಆರ್‌ಟಿಸಿ ಮುಷ್ಕರ ನಿಲ್ಲಿಸಲು 35 ಕೋಟಿ ಲಂಚ ಪಡೆದಿದ್ದೇನೆ ಎಂದು ಆರೋಪಿಸಲಾಗಿದೆ. ನನಗೆ ಲಂಚ ನೀಡಿದ್ದಾರೆ ಎಂದಾದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೇ ನೀಡಬೇಕಲ್ಲವೆ. ಹಾಗಾದರೆ ಸರ್ಕಾರಗಳೇ ಭ್ರಷ್ಟಾಚಾರ ದಲ್ಲಿ ತೊಡಗಿವೆ ಎಂದರ್ಥ ಎಂದು ಕೋಡಿಹಳ್ಳಿ ಚಂದ್ರಶೇಖರ್ ಹೇಳಿದರು.

ಆಮ್ ಆದ್ಮಿ ಪಾರ್ಟಿ ನಮ್ಮ ರಾಜಕೀಯ ಮುಖವಾಣಿ. ರೈತ ಸಂಘದ ಚಟುವಟಿಕೆಗಳು ಒಂದು ಕಡೆಯಾದರೆ, ಆಮ್ ಆದ್ಮಿ ಪಾರ್ಟಿಯ ಮುಖವಾಣಿಯಾಗಿ ಕೆಲಸ ಮಾಡುತ್ತೇನೆ ಎಂದರು. ಸೆಪ್ಟಂಬರ್ ನಂತರ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಲಾಗುವುದು. ಅಭ್ಯರ್ಥಿಗಳ ಆಯ್ಕೆ, ಎಲ್ಲಿ ಸ್ಪರ್ಧಿಸಬೇಕು ಎಂಬುದು ನಮ್ಮ ತೀರ್ಮಾನವಾಗಿರುತ್ತದೆ. ಇದರಲ್ಲಿ ಮೂರನೇಯವರ ಅಭಿಪ್ರಾಯ ಬೇಕಾಗಿಲ್ಲ ಎಂದು ಹೇಳಿದರು.

# ಬೇಡ ಜಂಗಮಕ್ಕೆ ಸಂವಿಧಾನ ಬದ್ಧ ಹಕ್ಕಿಗೆ ಒತ್ತಾಯಿಸಿ ಬೃಹತ್ ರ್‍ಯಾಲಿ




ಕೊಟ್ಟೂರು, ಜು.20- ಕೊಟ್ಟೂರು ಪಟ್ಟಣದ ತಾಲ್ಲೂಕು ಬೇಡರ ಜಂಗಮದ ವತಿಯಿಂದ ಸಂವಿಧಾನ ಬದ್ಧ ಹಕ್ಕಿಗೆ ಒತ್ತಾಯಿಸಿ ಬೃಹತ್ ರ್‍ಯಾಲಿಯನ್ನು ಕೈಗೊಳ್ಳಲಾಯಿತು. ಬಯಲು ಬಸವೇಶ್ವರ ದೇವಸ್ಥಾನದಿಂದ ತಾಲ್ಲೂಕು ಆಡಳಿತದವರೆಗೆ ಬೃಹತ್ ರ್‍ಯಾಲಿಯನ್ನು ಕೈಗೊಳ್ಳಲಾಯಿತು.

ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯದ ಸಮಸ್ತ ಬೇಡರ ಜಂಗಮ ಸಮಾಜದವರು, ರಾಜ್ಯ ಬೇಡ ಜಂಗಮ ಒಕ್ಕೂಟದ ಅಧ್ಯಕ್ಷ ಹಿರೇಮಠ ಅವರ ನೇತೃತ್ವದಲ್ಲಿ ಸತ್ಯ ಪ್ರತಿಪಾದನೆ ಹೋರಾಟವನ್ನು ಹಮ್ಮಿಕೊಂಡು ಸತ್ಯಾಗ್ರಹದಲ್ಲಿ ಎಲ್ಲಾ ಜಿಲ್ಲೆಯ ಮುಖಂಡರು, ಮಠಾಧೀಶಗಳು ಭಾಗವಹಿಸಿದ್ದರು.

ಕರ್ನಾಟಕ ಸಮಗ್ರ ಬೇಡ ಜಂಗಮದವರಿಗೆ ಸರ್ಕಾರದಿಂದ ಬೇಡ ಜಂಗಮ ಜಾತಿ ಪ್ರಮಾಣ ಪತ್ರವನ್ನು ನೀಡುವಂತೆ ಒತ್ತಾಯಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸಚಿವರು ಭರವಸೆ ಈಡೇರಿಸದ ಕಾರಣಕ್ಕಾಗಿ ಹಿರೇಮಠ ಅವರು ಮುಖ್ಯಮಂತ್ರಿಗಳ ಬಳಿ ಮನವಿ ಪತ್ರ ಸಲ್ಲಿಸಲು ಸತ್ಯಾಗ್ರಹ ಮಾಡಬೇಕೆಂಬ ಉದ್ದೇಶ ಹೊಂದಿ ಕಾಲ್ನಡಿಗೆಯಲ್ಲಿ ತೆರಳುತ್ತಿರುವಾಗ ಅವರನ್ನು ಬಂಧಿಸಿದ್ದಾರೆ. ಅವರನ್ನು ಬಂಧಿಸಿದ್ದಕ್ಕೆ ಸಚಿವ ಕೋಟಾ ಶ್ರೀನಿವಾಸ್ ಪೂಜಾರಿ, ಸಚಿವರು ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿ ತಹಶೀಲ್ದಾರ್ ಕುಮಾರಸ್ವಾಮಿ ಅವರಿಗೆ ಮನವಿ ಪತ್ರವನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಶಂಕರ್ ಸ್ವಾಮೀಜಿ ಮಹಲ್ ಮಠ ಕೊಟ್ಟೂರು, ಚಿರಂತೇಶ್ವರ ಸ್ವಾಮೀಜಿ ನಂದಿಹಳ್ಳಿ. ಪಂಚಾಕ್ಷರಿ ಸ್ವಾಮೀಜಿ ಬೆಣ್ಣೆಹಳ್ಳಿ, ಶ್ರೀ ಸಿದ್ಧಲಿಂಗ ಶಿವಾಚಾರ್ಯ ಡೋಣೂರು ಚಾನುಕೋಟಿ ಮಠ ಕೊಟ್ಟೂರು, ಬೇಡ ಜಂಗಮದ ತಾಲ್ಲೂಕು ಅಧ್ಯಕ್ಷರಾದ ಮಂಜುನಾಥಯ್ಯ, ಸಂತೋಷ, ಜಗದೀಶ್. ಪ್ರತಿಭಾ, ಕೊಟ್ರಮ್ಮ, ಸುವರ್ಣಮ್ಮ ಹಾಗೂ ಪ್ರಮುಖ ಮುಖಂಡರು ಇತರರು ಉಪಸ್ಥಿತರಿದ್ದರು

# ಕೋಕೋ ಅಂತರ ಬೆಳೆ : ಮಣ್ಣಿನ ಫಲವತ್ತತೆ ಜೊತೆಗೆ ರೈತರಿಗೆ ಉತ್ತಮ ಆದಾಯ ತರಲಿದೆ

## ತೋಟಗಾರಿಕೆ ಉಪ ನಿರ್ದೇಶಕ ಜಿ.ಸಿ. ರಾಘವೇಂದ್ರ ಪ್ರಸಾದ್



ಕೊಮಾರನಹಳ್ಳಿ, ಜು.20- ಅಡಿಕೆ ಮತ್ತು ತೆಂಗು ಜೊತೆಗೆ ಕೋಕೋ ಬೆಳೆಯನ್ನು ಅಂತರ ಬೆಳೆಯಾಗಿ ಬೆಳೆಯುವುದರಿಂದ ಉತ್ತಮ ಆದಾಯ ಪಡೆಯ ಬಹುದಲ್ಲದೇ, ಮಣ್ಣಿನ ಫಲವತ್ತತೆ ಸುಧಾರಣೆಗೂ ಸಹಾಯವಾಗುತ್ತದೆ ಎಂದು ತೋಟಗಾರಿಕೆ ಉಪ ನಿರ್ದೇಶಕ ಜಿ.ಸಿ. ರಾಘವೇಂದ್ರ ಪ್ರಸಾದ್ ತಿಳಿಸಿದರು.

ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ತೋಟಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್ ಹಾಗೂ ನಿಟ್ಟೂರು ತರಳಬಾಳು ಅಮೃತ ತೋಟಗಾರಿಕೆ ರೈತ ಉತ್ಪಾದಕ ಕಂಪನಿಯ ಸಂಯುಕ್ತಾಶ್ರಯದಲ್ಲಿ ಹರಿಹರ ತಾಲ್ಲೂಕು ಕೊಮಾರನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡ ಪ್ರಮುಖ ರೈತರ ತರಬೇತಿ ಹಾಗೂ ಕೋಕೋ ಬೆಳೆಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತೀ ವರ್ಷ ಭಾರತ ಸುಮಾರು 5 ಸಾವಿರ ಕೋಟಿ ರೂಪಾಯಿ ಮೌಲ್ಯದ ಕೋಕೋ ಬೀನ್ಸ್‌ಗಳನ್ನು ಆಮದು ಮಾಡಿಕೊಳ್ಳುತ್ತಿದೆ. ಇಲಾಖೆಯಿಂದ ಪ್ರತೀ ಹೆಕ್ಟೇರ್ ಕೋಕೋ ಅಂತರ ಬೆಳೆಗೆ 16,600/-ರೂ.ಗಳನ್ನು ಸಹಾಯ ಧನವಾಗಿ ನೀಡಲಿದ್ದು, ಎರಡನೇ ವರ್ಷ ಅದರ ನಿರ್ವಹಣೆಗೆ ಪ್ರತೀ ಹೆಕ್ಟೇರಿಗೆ 5,700/-ರೂ.ಗಳನ್ನು ನೀಡಲಾಗುವುದು. ಒಬ್ಬ ರೈತರಿಗೆ ಗರಿಷ್ಠ 4.0 ಹೆಕ್ಟೇರ್ ವರೆಗೆ ಸಹಾಯಧನ ದೊರೆಯುತ್ತದೆ ಎಂದು ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕೇಂದ್ರದ ತೋಟಗಾರಿಕೆ ತಜ್ಞ ಎಂ.ಜಿ. ಬಸವನಗೌಡ, ರೈತ ಉತ್ಪಾದಕ ಕಂಪನಿಗಳು ರೈತರ ವ್ಯಾಪಾರ ಕೇಂದ್ರಗಳಾಗ ಬೇಕು. ಪ್ರತಿ ರೈತರ ಉತ್ಪನ್ನಗಳಿಗೆ ಯೋಗ್ಯ ಬೆಲೆ ದೊರಕಿಸಲು ರೈತ ಉತ್ಪಾದಕ ಕಂಪನಿಗಳು ಮಾರುಕಟ್ಟೆ ಯನ್ನು ಸೃಷ್ಠಿಸುವ ಮೂಲಕ ಸಹಾಯ ಮಾಡುತ್ತವೆ ಎಂದು ತಿಳಿಸಿದರು.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಶ್ರೀಮತಿ ಜಿ.ಪಿ. ರೇಖಾ, ಪ್ರಗತಿಪರ ಕೃಷಿಕ ಡಾ. ವೆಂಕಟರಾಮಾಂಜನೇಯ, ಕ್ಯಾಂಪ್ಕೊ ಸಂಸ್ಥೆಯ ವಾಸುದೇವ್ ಮಾತನಾಡಿದರು.

ಇಟಗಿ ಶಿವಣ್ಣ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಅಧಿಕಾರಿ ರುದ್ರಪ್ಪ, ಹನಗವಾಡಿ, ನಿರ್ದೇಶಕರಾದ ಮಂಜುನಾಥ್, ಹನುಮಂತಪ್ಪ, ಅಧಿಕಾರಿಗಳಾದ ಸಂತೋಷ, ದಿನೇಶ್, ರೈತರಾದ ನಿರಂಜನ ಕುಂದೂರು, ಮಂಜಪ್ಪ, ಚಂದ್ರು ಕೊಟ್ರೇಶ್ ಸೇರಿದಂತೆ ಇತರೆ ರೈತರು ಭಾಗವಹಿಸಿದ್ದರು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ದೇವರಾಜ ಅರಸು ಬಡಾವಣೆ 'ಎ', 'ಬಿ' ಮತ್ತು ಸಿ ಬ್ಲಾಕ್, ಕರೂರು ಇಂಡಸ್ಟ್ರಿಯಲ್ ಏರಿಯಾ, ಡಿ.ಸಿ. ಕಚೇರಿ, ಜಿಎಂಐಟಿ, ಶಂಕರ್ ವಿಹಾರ ಬಡಾವಣೆ, ಶಾಂತಿ ನಗರ, ರಶ್ಮೀ, ಹರಿಹರ ರಸ್ತೆ, ವಿಜಯನಗರ, ಅಶೋಕ ನಗರ, ಆರ್. ಟಿ.ಓ. ಕಚೇರಿ, ಎಸ್.ಪಿ. ಕಚೇರಿ, ರಿಂಗ್ ರಸ್ತೆ, ಶಿಬಾರ, ಎಸ್.ಎಂ.ಕೆ. ನಗರ ಹಾಗೂ ಚಿತ್ತಾನಹಳ್ಳಿ, ಕಕ್ಕರಗೊಳ್ಳ, ಆವರಗೊಳ್ಳ, ನೀಲಾನಹಳ್ಳಿ, ದೇವರಹಟ್ಟಿ, ದೊಡ್ಡಬಾತಿ, ಹಳೆಬಾತಿ, ನಾರಾಯಣ ಕ್ಯಾಂಪ್, ಯರಗುಂಟೆ, ಕೋಡಿಹಳ್ಳಿ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ಶ್ಯಾಗಲೆ, ಕಂದಗಲ್, ಕೋಡಿಹಳ್ಳಿ, ಗೋಣಿವಾಡ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ಎಂಸಿಸಿ ಬಿ ಬ್ಲಾಕ್, ಸಿದ್ದವೀರಪ್ಪ ಬಡಾವಣೆ, ಎಸ್.ಎಸ್. ಲೇಔಟ್ ಎ ಮತ್ತು ಬಿ ಬ್ಲಾಕ್, ಎಂ.ಸಿ.ಸಿ. ಬಿ ಬ್ಲಾಕ್, ಕುವೆಂಪು ನಗರ, ನಿಜಲಿಂಗಪ್ಪ ಬಡಾವಣೆ, ಮೌನೇಶ್ವರ ಬಡಾವಣೆ, ನಿಟ್ಟುವಳ್ಳಿ, ಲೆನಿನ್ ನಗರ, ಸರಸ್ವತಿ ನಗರ, ಶಕ್ತಿ ನಗರ, ಡಿ.ಸಿ. ಎಂ. ಟೌನ್‌ಶಿಪ್, ಕೊಟ್ಟೂರೇಶ್ವರ ಬಡಾವಣೆ, ಕೆ.ಎಸ್.ಆರ್.ಟಿ.ಸಿ., ಭಗತ್‌ಸಿಂಗ್ ನಗರ, ಈರುಳ್ಳಿ ಮಾರುಕಟ್ಟೆ, ತರಕಾರಿ ಮಾರುಕಟ್ಟೆ, ಕೆ.ಟಿ.ಜೆ. ನಗರ, ಕೆ.ಬಿ. ಬಡಾವಣೆ, ಈದ್ಗಾ ಕಾಂಪ್ಲೆಕ್ಸ್, ವಿನೋಭನಗರ, ಎಸ್.ಎಸ್.ಬಿ. ಬ್ಲಾಕ್, ಬಾಲಾಜಿ ನಗರ, ಬಸವೇಶ್ವರ ನಗರ, ರೆಹಮಾನ್ ರಸ್ತೆ, ಕೊರಚರ ಹಟ್ಟಿ, ದೇವರಾಜ್ ಕ್ವಾರ್ಟರ್ಸ್, ಇಂದಿರಾನಗರ, ಕಾರ್ಲ್‌ಮಾರ್ಕ್ಸ್ ನಗರ, ಸಿದ್ದರಾಮೇಶ್ವರ ಬಡಾವಣೆ, ಮಂಡಕ್ಕಿ ಬಟ್ಟಿ, ಶಿವಪಾರ್ವತಿ ನಗರ, ಮಂಡೀಪೇಟೆ, ಬಿನ್ನಿಕಂಪನಿ ರಸ್ತೆ, ಮಹಾವೀರ ರಸ್ತೆ, ಎನ್.ಆರ್. ರಸ್ತೆ, ಇಸ್ಲಾಂ ಪೇಟೆ, ಬೆಳ್ಳೂಡಿ ಗಲ್ಲಿ, ಬಿ.ಟಿ. ಗಲ್ಲಿ, ವಿಜಯಲಕ್ಷ್ಮಿ ರಸ್ತೆ, ಎಂ.ಜಿ. ರಸ್ತೆ, ಗೂಡ್‌ಶೆಡ್ ರಸ್ತೆ,ಆಜಾದ್ ನಗರ, ಅಕ್ಸಾ ಮಸೀದಿ, ಹೆಗಡೆ ನಗರ, ಮಾಗಾನಹಳ್ಳಿ ರಸ್ತೆ, ಅಮೆಜಾನ್ ಬಾಬಜಾನ್ ದರ್ಗಾ, ಜೋಗಲ್ ಬಾಬಾ ಲೇಔಟ್, ದುರ್ಗಾಂಬಿಕಾ ಬಡಾವಣೆ, ಹೊಸ ಮತ್ತು ಹಳೆ ಚಿಕ್ಕನಹಳ್ಳಿ ಬಡಾವಣೆ, ಎಂ.ಸಿ.ಸಿ. ಬಿ ಬ್ಲಾಕ್, ದೇವರಾಜ್ ಅರಸ್ ಬಡಾವಣೆ ಎ, ಬಿ ಮತ್ತು ಸಿ ಬ್ಲಾಕ್, ಮಹಾನಗರ ಪಾಲಿಕೆ, ಎಂ.ಬಿ. ಕೇರಿ, ಚಲುವಾದಿ ಕೇರಿ, ಹೊಂಡದ ವೃತ್ತ, ಜಾಲಿ ನಗರ, ದುರ್ಗಾಂಬಿಕ ದೇವಸ್ಥಾನದ ಹತ್ತಿರ, ಇಡಬ್ಲ್ಯೂಎಸ್ ಕಾಲೋನಿ, ಗಣೇಶ್‌ರಾವ್ ವೃತ್ತ, ಇಎಸ್ಐ ಆಸ್ಪತ್ರೆ ಈ ಮೇಲ್ಕಂಡ ಸ್ಥಳಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

# ಮಲೇಬೆನ್ನೂರಿನಲ್ಲಿ ಇಂದು ಆರೋಗ್ಯ ತಪಾಸಣೆ

ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇಂದು ಗುರುವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ಬೆಂಗಳೂರಿನ ಸಪ್ತಗಿರಿ ಆಸ್ಪತ್ರೆ ಸಹಯೋಗದೊಂದಿಗೆ ಉಚಿತ ಹೃದಯ ರೋಗ, ನರರೋಗ, ಮೂತ್ರ ಪಿಂಡದ ಕಲ್ಲು ಹಾಗೂ ಕ್ಯಾನ್ಸರ್ ತಪಾಸಣೆ ಶಿಬಿರ ನಡೆಯಲಿದೆ ಎಂದು ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ತಿಳಿಸಿದ್ದಾರೆ.

# ವಿಕಲಚೇತನ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ದಾವಣಗೆರೆ, ಜು.20- ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯು ನ್ಯಾಷನಲ್ ಇ- ಸ್ಕಾಲರ್‌ಶಿಪ್ ಪಡೆಯಲು 9 ಮತ್ತು 10ನೇ ಹಾಗೂ ಮೆಟ್ರಿಕ್ ನಂತರದ ತರಗತಿಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿಕಲಚೇತನ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪ್ರೀ-ಮೆಟ್ರಿಕ್ ಮತ್ತು ಪೋಸ್ಟ್ ಮೆಟ್ರಿಕ್ (ಮೆಟ್ರಿಕ್ ಪೂರ್ವ 9ನೇ ಮತ್ತು 10ನೇ ತರಗತಿ ಮತ್ತು ಮೆಟ್ರಿಕ್ ನಂತರದಲ್ಲಿ ವ್ಯಾಸಂಗ ಮಾಡುತ್ತಿರುವ) ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು 30ನೇ ಸೆಪ್ಟೆಂಬರ್ 2022 ಕೊನೆಯ ದಿನಾಂಕವಾಗಿದೆ.

ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್: www.scholarship.gov.in ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳ ಕಛೇರಿ, ಶಂಕರಲೀಲಾ ಗ್ಯಾಸ್ ಏಜೆನ್ಸಿ ಹತ್ತಿರ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ. ದೂರವಾಣಿ 08192-263939 ಅಥವಾ ಜೆ. ದುರುಗೇಶ್ (98864 77114) ಅವರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಮತ್ತು ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ಡಾ. ಕೆ.ಕೆ ಪ್ರಕಾಶ್ ತಿಳಿಸಿದ್ದಾರೆ.

# ಕುಕ್ಕವಾಡ ಆಂಜನೇಯ ಸಹಕಾರಿಗೆ 29 ಲಕ್ಷ ರೂ. ನಿವ್ವಳ ಲಾಭ



ದಾವಣಗೆರೆ,ಜು.20- ತಾಲ್ಲೂಕಿನ ಕುಕ್ಕವಾಡ ಗ್ರಾಮದ ಶ್ರೀ ಆಂಜನೇಯ ಸೌಹಾರ್ದ ಸಹಕಾರಿಯ 2021-2022 ನೇ ಸಾಲಿನ ವಾರ್ಷಿಕ ಮಹಾಸಭೆಯು ಸಹಕಾರಿ ಅಧ್ಯಕ್ಷ ಜಿ. ಎಂ. ರುದ್ರಗೌಡ್ರು ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಸಾಲಿನಲ್ಲಿ ಸಹಕಾರಿಯು ರೂ. 138 ಕೋಟಿ ವ್ಯವಹರಿಸಿದ್ದು, ರೂ. 227.22 ಲಕ್ಷ ಆಸ್ತಿ ಖರೀದಿಸಲಾಗಿದೆ. 29.18 ಲಕ್ಷ ರೂ. ನಿವ್ವಳ ಲಾಭ ಗಳಿಸಿರುತ್ತದೆ. ಸದಸ್ಯರಿಗೆ ಶೇ. 8 ಲಾಭಾಂಶ ನೀಡಲಾಗುವುದು ಎಂದು ಅವರು ತಿಳಿಸಿದರು.

ಮುಂದಿನ ದಿನಗಳಲ್ಲಿ ಸಹಕಾರಿ ವತಿಯಿಂದ ಎರೆಹುಳು ಕೃಷಿ ಗೊಬ್ಬರ ತಯಾರಿಕೆ ಘಟಕ ಮತ್ತು ವರ್ಜಿನ್ ಕೋಲ್ಡ್ ಪ್ರೆಸ್ಡ್ ತೆಂಗಿನ ಎಣ್ಣೆ ತಯಾರಿಕೆ ಘಟಕ ಪ್ರಾರಂಭಿಸಲಾಗುವುದು ಎಂದರು.

ಸಹಕಾರಿ ಸ್ಥಾಪನೆಯಾಗಿ 25 ವರ್ಷಗಳಾಗುವುದರಿಂದ ಬೆಳ್ಳಿ ಮಹೋತ್ಸವ ಕಾರ್ಯಕ್ರಮವನ್ನು ಇದೇ ನವೆಂಬರ್ ತಿಂಗಳಲ್ಲಿ ಅದ್ದೂರಿಯಾಗಿ ಆಚರಿಸೋಣ. ಸದಸ್ಯರಿಗೆ ಮುಂದಿನ ದಿನಗಳಲ್ಲಿ ನಮ್ಮ ಸಂಸ್ಥೆಯಿಂದ ಶಿಕ್ಷಣ ಸಂಸ್ಥೆ, ರೈತರಿಗೋಸ್ಕರ ಉತ್ಪನ್ನ ಘಟಕಗಳನ್ನು ತೆರೆಯುವುದು, ಜನ ಔಷಧಿ ಮಳಿಗೆ ಪ್ರಾರಂಭಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ಸಂಸ್ಥೆ ಪ್ರಾರಂಭದಿಂದ ಇಂದಿನವರೆಗೂ ರಾಜ್ಯ ಕ್ಷೇತ್ರ ವ್ಯಾಪ್ತಿ ಸಂಸ್ಥೆಯಾದರೂ ಚುನಾವಣೆ ನಡೆಯದೇ ಅವಿರೋಧವಾದ ಆಡಳಿತ ಮಂಡಳಿ ಇರುವುದರಿಂದ ಎಲ್ಲಾ ಸದಸ್ಯ ಬಂಧುಗಳಿಗೆ ಕೃತಜ್ಞತೆ ವ್ಯಕ್ತಪಡಿಸಿದರು. ಸಭೆಯಲ್ಲಿ ಉಪಾಧ್ಯಕ್ಷರು, ನಿರ್ದೇಶಕರು ಭಾಗವಹಿಸಿದ್ದರು.

# ಆಗಸ್ಟ್ 28ಕ್ಕೆ ರಾಜ್ಯಾದ್ಯಂತ ಏಕಕಾಲಕ್ಕೆ ಯೋಗ



ದಾವಣಗೆರೆ, ಜು. 20 - ಕರ್ನಾಟಕದ 30 ಜಿಲ್ಲೆಗಳಲ್ಲಿ ಏಕಕಾಲಕ್ಕೆ 5 ಲಕ್ಷ ಜನರು ಆಯಾ ಜಿಲ್ಲೆಗಳಲ್ಲಿ ಸಾಮೂಹಿಕ ಯೋಗ ಕಾರ್ಯಕ್ರಮ ನಡೆಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ತೀರ್ಮಾನಿಸಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರು ಯುವ ಕೇಂದ್ರ ಸಂಘಟನೆ, ರಾಷ್ಟ್ರೀಯ ಸೇವಾ ಯೋಜನೆ, ಆಯುಷ್ ಇಲಾಖೆ ಮತ್ತು ಆಯುಷ್ ಮಾಧ್ಯಮ, ದಾವಣಗೆರೆಯ ತಪೋವನ ಯೋಗ ಪ್ರಕೃತಿ ಚಿಕಿತ್ಸಾ ಮೆಡಿಕಲ್ ಕಾಲೇಜು ಇವುಗಳ ಸಂಯುಕ್ತಾಶ್ರಯದಲ್ಲಿ ಯೋಗಾಥಾನ್ -2020 ಕಾರ್ಯಕ್ರಮ ಅನುಷ್ಠಾನಗೊಳಿಸುವ ಕುರಿತು ಬೆಂಗಳೂರಿನ ವಿಧಾನಸೌಧದಲ್ಲಿ ಕಳೆದ ವಾರ ನಡೆದ ಸಭೆಯಲ್ಲಿ ನಿರ್ಧರಿಸಲಾಯಿತು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ನಾರಾಯಣ ಗೌಡ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮುಂದಿನ ತಿಂಗಳು ಆಗಸ್ಟ್ 28ಕ್ಕೆ ಅಂತರರಾಷ್ಟ್ರೀಯ ಯೂತ್ ಡೇ ಪ್ರಯುಕ್ತ ಗಿನ್ನಿಸ್ ದಾಖಲೆ ದೃಷ್ಟಿಯಿಂದ 30 ಜಿಲ್ಲೆಗಳಲ್ಲಿ ಏಕಕಾಲಕ್ಕೆ ಸಾಮೂಹಿಕ ಯೋಗ ನಡೆಸುವ ಬಗ್ಗೆ ತೀರ್ಮಾನಿಸಲಾಯಿತು.

ಯೋಗವನ್ನು ಕ್ರೀಡೆಯಾಗಿ ಪರಿಗಣಿಸಿರುವುದ ರಿಂದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಪ್ರಥಮ ಬಾರಿಗೆ ನಡೆಸಲಿರುವ ಈ ಯೋಗದಲ್ಲಿ ಭಾಗವಹಿಸಲು ಇಚ್ಛಿಸುವವರು ಯೋಗಾಥಾನ್ ಎಂಬ ಆ್ಯಪ್‌ನಲ್ಲಿ ಉಚಿತ ನೋಂದಣಿ ಮಾಡಿಸಬಹುದಾಗಿದೆ. ಈ ಯೋಗದ ಕುರಿತು 20 ದಿನಗಳ ಮುನ್ನವೇ ತರಬೇತಿ ನೀಡಲಾಗುವುದು. ನಂತರ ಆಗಸ್ಟ್ 28ಕ್ಕೆ ಸಾಮೂಹಿಕ ಯೋಗ ನಡೆಸುವುದಾಗಿ ಸಚಿವ ನಾರಾಯಣ ಗೌಡ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಏಕಕಾಲಕ್ಕೆ ಸಾಮೂಹಿಕ ಯೋಗವು ಜನಕ್ಕೆ ಉಪಯುಕ್ತವಾಗಿದ್ದು, ಈ ಯೋಗದಲ್ಲಿ ಪ್ರತಿ ಯೊಬ್ಬರೂ ಪಾಲ್ಗೊಂಡು ಸದುಪಯೋಗ ಪಡೆದು ಕೊಳ್ಳಬೇಕು.

ಈ ಯೋಗ ಕಾರ್ಯಕ್ರಮದಲ್ಲಿ ತಾವೂ ಸಹ ಪಾಲ್ಗೊಂಡು ಹೆಮ್ಮೆಯ ಜೊತೆಗೆ, ಗಿನ್ನಿಸ್ ದಾಖಲೆಗೆ ಕಾರಣೀಭೂತರಾಗಬಹುದು ಎಂದು ಸಭೆಯಲ್ಲಿ ದಾವಣಗೆರೆಯಿಂದ ಭಾಗವಹಿಸಿದ್ದ ತಪೋವನ ಸಮೂಹ ಸಂಸ್ಥೆಯ ಚೇರ್ಮನ್ ಡಾ. ವಿ. ಎಂ. ಶಶಿಕುಮಾರ್ ಮೆಹರ್ವಾಡೆ ಹೇಳಿದ್ದಾರೆ.

# 8ನೇ ತರಗತಿವರೆಗಿನ ಮಕ್ಕಳಿಗೆ ಮೊಟ್ಟೆ ಅಥವಾ ಬಾಳೆ ಹಣ್ಣು ವಿತರಣೆ

ಬೆಂಗಳೂರು, ಜು.20- ಒಂದರಿಂದ ಎಂಟನೇ ತರಗತಿಯ ವಿದ್ಯಾರ್ಥಿಗಳಿಗೆ ಪೂರಕ ಪೌಷ್ಠಿಕಾಂಶದ ರೂಪದಲ್ಲಿ ಮೊಟ್ಟೆ ಅಥವಾ ಬಾಳೆ ಹಣ್ಣು ವಿತರಿಸಲಾಗುವುದು ಎಂದು ಸರ್ಕಾರ ತಿಳಿಸಿದೆ.

ಈ ಸಂಬಂಧ ಆದೇಶ ಹೊರಡಿಸಿರುವ ರಾಜ್ಯ ಸರ್ಕಾರ ಮಧ್ಯಾಹ್ನದ ಉಪಹಾರ ಸಂದರ್ಭದಲ್ಲಿ ಮೊಟ್ಟೆ ಇಲ್ಲವೇ ಬಾಳೆಹಣ್ಣು ನೀಡುವುದಾಗಿ ಹೇಳಿದರು.

# ಸಾಮಾನ್ಯ ಜನರಿಗೆ ಬದುಕಿನ ಚಿಂತೆ ರಾಜಕಾರಣಿಗಳಿಗೆ ಟಿಕೆಟ್ ಚಿಂತೆ

ರಾಣೇಬೆನ್ನೂರು, ಜು.20- ಒಂದು ವಾರದಿಂದ ಸುರಿಯುತ್ತಿರುವ ಮಳೆಯಿಂದ ಸಾಮಾನ್ಯ ಜನರು ಬದುಕಿನ ಬಗ್ಗೆ ಚಿಂತಿಸಿದರೆ, ರಾಜಕಾರಣಿ ಗಳು 23 ನೇ ಇಸ್ವಿಯಲ್ಲಿ ಬರಲಿರುವ ವಿಧಾನಸಭೆ ಚುನಾವಣೆಗೆ ಪಕ್ಷಗಳ ಟಿಕೆಟ್ ಪಡೆಯುವ ಪ್ರಯತ್ನದಲ್ಲಿ ತಲ್ಲೀನರಾಗಿದ್ದಾರೆ ಎಂದು ರೈತ ಸಂಘದ ಅಧ್ಯಕ್ಷ ಹನುಮಂತಪ್ಪ ಕಬ್ಬಾರ ಇಂದು ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.



ಸತತ ಸುರಿಯುವ ಮಳೆಯಿಂದಾಗಿ ಬೆಳೆಗಳು ನಾಶವಾಗುತ್ತಿವೆ. ಬದುಕಿರುವ ಬೆಳೆಗೆ ರೋಗ ತಗಲುತ್ತಿದೆ. ಮಾರುಕಟ್ಟೆಯಲ್ಲಿ ಗೊಬ್ಬರದ ಕೊರತೆ ಚಿಂತೆ ರೈತರದ್ದಾಗಿದೆ. ಹೊಲದ ಕೆಲಸ ಸಿಗುತ್ತಿಲ್ಲ ಎನ್ನುವುದು ಕೂಲಿಕಾರರ ಚಿಂತೆಯಾಗಿದೆ. ವರ್ತಕರಿಗೆ ವ್ಯಾಪಾರ, ವಹಿವಾಟಿನ ತೊಂದರೆ, ಬಡವರಿಗೆ ಅನ್ನದ ಚಿಂತೆ ಹೀಗೆ ಜನತೆಗೆ ಒಂದಿಲ್ಲೊಂದು ತೊಂದರೆಯ ಅನುಭವವಾಗಿದೆ.

ರಾಜಕಾರಣಿಗಳು ಈ ಯಾವ ನೋವು, ಸಂಕಟಗಳ ಬಗ್ಗೆ ಚಿಂತಿಸದೆ ಮಠ, ಮಾನ್ಯಗಳಿಗೆ ತೆರಳಿ ಸ್ವಾಮೀಜಿಗಳಿಂದ ಆಶೀರ್ವಾದ ಪಡೆದ ಫೋಟೋಗಳನ್ನು ಜಾಲತಾಣಗಳಲ್ಲಿ ಹರಿಬಿಟ್ಟು ಮತದಾರರ ಮೇಲೆ ಪ್ರಭಾವ ಬೀರುವ, ಪಕ್ಷಗಳ ಮುಖಂಡರ ಮೇಲೆ ಒತ್ತಡ ತರುವ ಹುನ್ನಾರ ನಡೆಸಿದ್ದಾರೆ ಎಂದು ಹನುಮಂತಪ್ಪ ಆರೋಪಿಸಿದ್ದಾರೆ.

**ಸ್ವಾಮೀಜಿಗಳಲ್ಲಿ ಮನವಿ:** ಕೆಲವೊಂದು ರಾಜಕಾರಣಿಗಳು 'ಸ್ವಾಮೀಜಿಗಳ ಜೊತೆಗಿರುವ ಫೋಟೋಗಳನ್ನು ತೋರಿಸಿ ಗುರುಗಳ ಆಶೀರ್ವಾದ ಆಗಿದೆ, ನೀವು ನನ್ನನ್ನೇ ಬೆಂಬಲಿಸಿರಿ' ಎಂದು ಹೇಳುತ್ತಿರುವುದು ಸ್ವಾಮೀಜಿಗಳ ಬಗ್ಗೆ ಭಕ್ತಿ, ಗೌರವವಿಟ್ಟುಕೊಂಡಿರುವ ಸಾಮಾನ್ಯ ಜನತೆಗೆ ನೋವುಂಟು ಮಾಡಿಕೊಂಡಿರುವುದು ಕೇಳಿಬರುತ್ತಿದೆ. ಕಾರಣ ಸ್ವಾಮೀಜಿಯವರು ಇಂತಹ ರಾಜಕಾರಣಿಗಳನ್ನು ಮಠ, ಮಂದಿರಗಳಿಂದ ದೂರವಿಡಿ ಎಂದು ಹನುಮಂತಪ್ಪ ಕಬ್ಬಾರ ಮನವಿ ಮಾಡಿದ್ದಾರೆ.


॥ ಶ್ರೀ ರಂಗನಾಥಸ್ವಾಮಿ ಪ್ರಸನ್ನ ॥

**ಕೈಲಾಸ ಸಮಾರಾಧನೆ ಆಹ್ವಾನ**



ದಾವಣಗೆರೆ ನಗರ, ಎಂ.ಸಿ.ಸಿ .'ಬಿ' ಬ್ಲಾಕ್ ನಿವಾಸಿಗಳಾದ
ಶ್ರೀಮತಿ ಸುಲೋಚನ ಎಸ್.ಎಲ್. ದಿ॥ ಪರಮೇಶ್ವರಪ್ಪ ಟಿ.
ಮಾಡುವ ವಿಜ್ಞಾಪನೆಗಳು.
ದಿನಾಂಕ : 13.07.2022ನೇ ಬುಧವಾರ ಬೆಳಿಗ್ಗೆ 9.30ಕ್ಕೆ ನನ್ನ ಮಗನಾದ
**ಶ್ರೀ ಕೆ.ಪಿ. ಆನಂದ್,** ವಕೀಲರು
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
"ಕೈಲಾಸ ಸಮಾರಾಧನೆ"ಯನ್ನು
ದಿನಾಂಕ : 21.7.2022ನೇ ಗುರುವಾರ ಬೆಳಿಗ್ಗೆ 11.00ಕ್ಕೆ ಶ್ರೀ ಕೃಷ್ಣ ಕಲಾ ಮಂದಿರ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಸುಲೋಚನ ಎಸ್.ಎಲ್., ನಿವೃತ್ತ ಉಪನ್ಯಾಸಕರು
ಮೃತರ ಧರ್ಮಪತ್ನಿ : ಶ್ರೀಮತಿ ಪಂಕಜ ಎನ್.ಟಿ. ಮತ್ತು ಮಕ್ಕಳು
ಶ್ರೀಮತಿ ಶ್ರೀ ಅರುಣ್ ಕೆ.ಪಿ. ಮತ್ತು ಮಕ್ಕಳು, ಅಜ್ಜಪ್ಪ ವಂಶಸ್ಥರು
ಕುರ್ಕಿ ಹಾಗೂ ಬಂಧು-ಮಿತ್ರರು
ಫೋ. : 94482 53035, 97399 48462

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಿ.



**ಶ್ರೀಮತಿ ಸುಧಾ ಗುರುಬಸಪ್ಪ ಲಿಂಗೈಕ್ಯ**



ದಾವಣಗೆರೆ ಶಿವಕುಮಾರ ಸ್ವಾಮಿ ಬಡಾವಣೆ ವಾಸಿ
**ಶ್ರೀಮತಿ ಸುಧಾ ಗುರುಬಸಪ್ಪ**
ಇವರು ದಿನಾಂಕ 20.7.2022ರ ಬುಧವಾರ ರಾತ್ರಿ 10.50ಕ್ಕೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 21.7.2022ರ ಗುರುವಾರ ಮೃತರ ಸ್ವಗ್ರಾಮವಾದ ತ್ಯಾವಣಿಗೆಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಸ್ವಾದ್ ಕೆಫೆ,
ಡಿಸ್ಪಿಕ್ 17 ರೆಸ್ಟೋರೆಂಟ್



**ಶ್ರೀಮತಿ ಗಂಗಮ್ಮ ನಿಧನ**



ದಾವಣಗೆರೆ ಲೆನಿನ್ ನಗರದ ನಿವಾಸಿ ದಿ. ಸಂತೋಜಿರಾವ್ ಇವರ ಧರ್ಮಪತ್ನಿ ಶ್ರೀಮತಿ ಗಂಗಮ್ಮ ಇವರು ದಿನಾಂಕ 20.07.2022ರ ಮಧ್ಯಾಹ್ನ 2.20ಕ್ಕೆ ನಿಧನರಾಗಿದ್ದಾರೆ. ಮೂವರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯ ಕ್ರಿಯೆಯನ್ನು ದಿನಾಂಕ 21.07.2022 ರ ಗುರುವಾರ ಬೆಳಿಗ್ಗೆ 10 ಗಂಟೆಗೆ ದಾವಣಗೆರೆ ಲೇಬರ್ ಕಾಲೋನಿಯಲ್ಲಿರುವ ಆರ್.ಹೆಚ್. ಬೃಂದಾವನದಲ್ಲಿ ನೆರವೇರಿಸಲಾಗುವುದು.



**ಮಟ್ಟಿಕಲ್ (ಕಟ್ಟಿಮನಿ) ಮಂಜಣ್ಣ ನಿಧನ**



ದಾವಣಗೆರೆ L.B.S ನಗರ ಬಸಾಪುರ ರಸ್ತೆ ವಾಸಿ ಮಟ್ಟಿಕಲ್ (ಕಟ್ಟಿಮನಿ) ಮಂಜಣ್ಣ (70) ಇವರು ದಿನಾಂಕ: 20.7.2022 ರ ಬುಧವಾರ ರಾತ್ರಿ 8.15ಕ್ಕೆ ನಿಧನರಾದರು. ಮೃತರ ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ: 21.7.2022 ರ ಗುರುವಾರ ಮಧ್ಯಾಹ್ನ 2 ಗಂಟೆಗೆ ಬೂದಾಳು ರಸ್ತೆಯಲ್ಲಿರುವ ಹಿಂದೂ ರುದ್ರ ಭೂಮಿಯಲ್ಲಿ ನೆರವೇರಲಿದೆ.

# ನೂತನ ಶಿಕ್ಷಣ ಮಹಾವಿದ್ಯಾಲದಲ್ಲಿ ಕಾರ್ಯಾಗಾರ



ದಾವಣಗೆರೆ, ಜು.20- ನಗರದ ನೂತನ ಶಿಕ್ಷಣ ಮಹಾವಿದ್ಯಾಲಯದಲ್ಲಿ 'ಶಿಕ್ಷಣದಲ್ಲಿ ರಂಗ ಕಲೆ' ಕುರಿತು ಎರಡು ದಿನಗಳ ಕಾಲ ಕಾರ್ಯಾಗಾರವು ಕಳೆದ ವಾರ ನಡೆಯಿತು.

ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ರಾಘವೇಂದ್ರ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಎನ್.ಎಸ್. ರುದ್ರೇಶ್, ಸಹ ಶಿಕ್ಷಕ ಅಣ್ಣಪ್ಪ ಒಂಟಮಾಳಗಿ, ಸತೀಶ್ ಸಾಸ್ವೆಹಳ್ಳಿ ಅವರುಗಳು ಆಗಮಿಸಿ, ಪ್ರಶಿಕ್ಷಣಾರ್ಥಿಗಳಿಗೆ ರಂಗಕಲೆ ಕುರಿತು ಬೋಧನಾ - ಕಲಿಕಾ ಪ್ರಕ್ರಿಯೆಯಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಬಗೆಯನ್ನು ತಿಳಿಸಿಕೊಟ್ಟರು.

ಕಾರ್ಯಾಗಾರದಲ್ಲಿ ನೂತನ ಶಿಕ್ಷಣ ಮಹಾವಿದ್ಯಾಲದ ಪ್ರಾಂಶುಪಾಲ ಡಾ. ಕೆ.ಎಸ್.ದಿವಾಕರ್ ನಾಯ್ಕ್, ಸಹಾಯಕ ಪ್ರಾಧ್ಯಾಪಕ ಸುರೇಶ್ ಮತ್ತು ಇತರರು ಉಪಸ್ಥಿತರಿದ್ದರು.

# ಇಂದು ಸೋನಿಯಾ ಗಾಂಧಿ ವಿಚಾರಣೆ

ನವದೆಹಲಿ, ಜು. 20 – ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಳೆ ಗುರುವಾರ ಜಾರಿ ನಿರ್ದೇಶನಾಲಯದ ಎದುರು ವಿಚಾರಣೆಗೆ ಹಾಜರಾಗಲಿದ್ದಾರೆ. ಈ ದಿನದಂದು ದೇಶಾದ್ಯಂತ ಪ್ರತಿಭಟನೆ ನಡೆಸಲು ಕಾಂಗ್ರೆಸ್ ತೀರ್ಮಾನಿಸಿದೆ. ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಸೋನಿಯಾ ಗಾಂಧಿ ಅವರು ಇ.ಡಿ. ಎದುರು ಹಾಜರಾಗಲಿದ್ದಾರೆ. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಈಗಾಗಲೇ ರಾಹುಲ್ ಗಾಂಧಿ ವಿಚಾರಣೆ ನಡೆಸಿದೆ. ಸಂಸದರೂ ಸೇರಿದಂತೆ ಕಾಂಗ್ರೆಸ್ ನಾಯಕರು ಜಾರಿ ನಿರ್ದೇಶನಾಲಯದ ಕಚೇರಿ ಎದುರು ಪ್ರತಿಭಟನೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

# ಯುವ ಮತದಾರರ ಸೇರ್ಪಡೆಗೆ ಒತ್ತು ನೀಡಬೇಕು

## ಮಲೇಬೆನ್ನೂರಿನ ಬಿಎಲ್‌ಓಗಳ ಸಭೆಯಲ್ಲಿ ತಹಶೀಲ್ದಾರ್ ಡಾ. ಬಿ.ಎಂ. ಅಶ್ವತ್ಥ್ ಸೂಚನೆ



ಮಲೇಬೆನ್ನೂರು, ಜು. 20- ಡಿಸೆಂಬರ್ 31, 2003ರೊಳಗೆ ಜನಿಸಿದವರನ್ನು ಕಡ್ಡಾಯವಾಗಿ ಮತದಾರರ ಪಟ್ಟಿಗೆ ಸೇರ್ಪಡೆ ಮಾಡಬೇಕು. ಮತದಾನದಿಂದ ಯಾರೂ ವಂಚಿತರಾಗುವಂತಿಲ್ಲ ಎಂದು ತಹಶೀಲ್ದಾರ್ ಡಾ. ಬಿ.ಎಂ. ಅಶ್ವತ್ಥ್ ಬಿಎಲ್‌ಓಗಳಿಗೆ ತಾಕೀತು ಮಾಡಿದರು.

ಪಟ್ಟಣದ ಪುರಸಭೆಯ ಸಭಾಂಗಣದಲ್ಲಿ ಮತದಾರರ ಪಟ್ಟಿ ವಿಚಾರವಾಗಿ ನಿನ್ನೆ ಕರೆದಿದ್ದ ಬಿಎಲ್‌ಓಗಳ ಸಭೆಯಲ್ಲಿ ಅವರು ಮಾತನಾಡಿದರು.

ಮತದಾರರ ಸೇರ್ಪಡೆ, ತೆಗೆದುಹಾಕುವ ಮತ್ತು ವರ್ಗಾವಣೆಯ ಪಟ್ಟಿಯನ್ನು ಯಾರ ಮರ್ಜಿಗೂ ಒಳಗಾಗದೇ ಪಾರದರ್ಶಕವಾಗಿ ತಯಾರಿಸಬೇಕು ಎಂದು ಬಿಎಲ್‌ಓಗಳಿಗೆ ಸೂಚಿಸಿದರು.

ಕುಷ್ಠರೋಗಿಗಳು, ಕುಷ್ಠರೋಗ ಆಸ್ಪತ್ರೆ ವಾರ್ಡ್‌ಗಳಲ್ಲಿ ಮತ್ತು ಕುಷ್ಠರೋಗ ಕಾಲೋನಿಗಳಲ್ಲಿ ವಾಸಿಸುತ್ತಿರುವ ಹಾಗೂ ಸದರಿ ರೋಗದಿಂದ ಗುಣಮುಖರಾದವರ ಹೆಸರು ಮತದಾರರ ಪಟ್ಟಿಯಲ್ಲಿ ಕೈ ಬಿಟ್ಟಿದ್ದರೆ, ಅಂತಹವರನ್ನು ಆದ್ಯತೆ ಮೇರೆಗೆ ಮತದಾರರ ಪಟ್ಟಿಯಲ್ಲಿ ನೋಂದಾಯಿಸುವುದು. ಇವರು ವಾಸ ಇರುವ ಸ್ಥಳಗಳಿಗೆ ಮನೆ ಮನೆ ಭೇಟಿ ನೀಡಿ ವಿಶೇಷ ಆಂದೋಲನ ದಂತೆ ನೋಂದಣಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು.

ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳ್ಳದಿರುವ ಸಾಮಾಜಿಕವಾಗಿ ಹಿಂದುಳಿದವರು, ಹಕ್ಕಿ-ಪಿಕ್ಕಿ ಜನಾಂಗ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಮಹಿಳೆಯರ ಹೆಸರುಗಳನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ನೋಂದಾಯಿಸುವುದು.

ಸರ್ಕಾರಿ ಅರಣ್ಯ ರಾಷ್ಟ್ರೀಯ ಉದ್ಯಾನಧಾಮ ಹಾಗೂ ಆದಿವಾಸಿ ಜನರು ಗ್ರಾಮಗಳಿಂದ ದೂರದ ದಟ್ಟ ಅರಣ್ಯ ಗುಡ್ಡಗಾಡುಗಳಲ್ಲಿ ವಾಸಿಸುತ್ತಿರುವುದರಿಂದ ಮತದಾರ ಪಟ್ಟಿಯಲ್ಲಿ ಹೆಸರು ಬಿಟ್ಟು ಹೋಗಿದ್ದರೆ ಅಂತಹವರ ಹೆಸರನ್ನು ಆದ್ಯತೆ ಮೇರೆಗೆ ವಿಶೇಷ ಅಭಿಯಾನದ ಅಡಿಯಲ್ಲಿ ಅರ್ಹರನ್ನು ಮತದಾರರ ಪಟ್ಟಿಯಲ್ಲಿ ನೋಂದಾಯಿಸುವುದು ಅಗತ್ಯವಾಗಿದೆ ಎಂದರು.

18 ವರ್ಷ ಮೇಲ್ಪಟ್ಟ ಎಲ್ಲಾ ಭಾರತೀಯರು ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ನೋಂದಾಯಿಸುವುದು ಕಡ್ಡಾಯವಾಗಿದೆ. ಯುವ ಮತದಾರರ ಸೇರ್ಪಡೆಗೆ ಎಲ್ಲಾ ಬಿಎಲ್‌ಓಗಳು ಕಾಲೇಜುಗಳಿಗೆ ತೆರಳಿ ಹೆಚ್ಚಿನ ಕಾಳಜಿ ವಹಿಸಬೇಕು ಎಂದರು.

209, 207, 215, 219, 208 ಮತ್ತಿತರೆ ಬೂತ್‌ಗಳಲ್ಲಿ ಸೇರ್ಪಡೆ ಮತ್ತು ತೆಗೆದು ಹಾಕುವವರ, ವರ್ಗಾವಣೆ ಆದವರ ಹೆಸರನ್ನು ವಾರ್ಡ್‌ಗಳಿಗೆ ತೆರಳಿ ಪರಿಶೀಲಿಸಿರಿ. ಯಾರ ಒತ್ತಡಕ್ಕೂ ಒಳಗಾಗದೆ ಪಾರದರ್ಶಕವಾಗಿ ಪಟ್ಟಿ ತಯಾರಿಸಿರಿ ಎಂದು ಸೂಚಿಸಿದರು.

ಉಪ ತಹಶೀಲ್ದಾರ್ ಆರ್. ರವಿ, ಪುರಸಭೆ ಮುಖ್ಯಾಧಿಕಾರಿ ಸುರೇಶ್, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿಗಳಾದ ಕೊಟ್ರೇಶ್, ಸುಭಾನಿ, ಪುರಸಭೆ ಕಂದಾಯಾಧಿಕಾರಿ ಪ್ರಭು, ಚುನಾವಣೆ ಶಾಖೆಯ ಸೋಮಶೇಖರ್, ಬಿಎಲ್‌ಓಗಳಾದ ದಂಡಿ ತಿಪ್ಪೇಸ್ವಾಮಿ, ಗೋವಿಂದಪ್ಪ ಸಾವಜ್ಜಿ, ಕರಿಬಸಪ್ಪ, ಪರಮೇಶ್ವರಪ್ಪ, ಹಾಲೇಶ್, ಮಂಜುಳ, ನಿರಂಜನ್, ಗೀತಮ್ಮ, ಹಮೀದಾಬಾನು, ಪ್ರೇಮಲೀಲಾ ಬಾಯಿ, ಮಮ್ತಾಜ್, ರೇಣುಕಮ್ಮ, ಅಫ್ತಾಬ್, ಕರಿಬಸಪ್ಪ ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದರು.

# ಟೀಕಿಸುವವರೆಂತಹ ಶಿಷ್ಯರು?

**(1ನೇ ಪುಟದಿಂದ)** ಆಶೀರ್ವದಿಸಿದರು. ನಾನು ರೈತ ಪರವಾದ ಕೆಲಸಗಳ ಜೊತೆಗೆ ಈ ಅಧಿಕಾರವನ್ನೂ ಸಹ ಯಾವುದೇ ಮುಜುಗರ, ಆತಂಕಕ್ಕೆ ಒಳಗಾಗದೇ ಸಮರ್ಥವಾಗಿ ನಿಭಾಯಿಸುವೆ. ಯಾರನ್ನೂ ಕಡೆಗಣಿಸದೇ, ಬೈದವರನ್ನು, ಟೀಕೆ ಮಾಡಿದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಶ್ರೀಮಠ, ಸಮಾಜದ ಗೌರವಕ್ಕೆ ಧಕ್ಕೆ ಬಾರದಂತೆ ಜವಾಬ್ದಾರಿ ನಿಭಾಯಿಸುವೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ಮಾತನಾಡಿ, ಸಿರಿಗೆರೆ ಮಠ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗೌರವ ಹೊಂದಿದೆ. ಹಿರಿಯ ಜಗದ್ಗುರುಗಳ ಮಾರ್ಗದರ್ಶನದಲ್ಲಿ ನಮ್ಮ ಸಮಾಜ ಮುಂದೆ ಸಾಗುತ್ತಿದೆ. ಶ್ರೀಮಠದ ಶೈಕ್ಷಣಿಕ ಆಶ್ರಯವನ್ನು ಇವತ್ತಿಗೂ ಬಯಸುತ್ತಿದ್ದಾರೆ. ನಮ್ಮ ಸಮಾಜ ಪದೇ ಪದೇ ಅಧ್ಯಕ್ಷರನ್ನಾಗಿ ಮಾಡುವುದಿಲ್ಲ. ಇದುವರೆಗೂ ಏಳು ಜನ ಅಧ್ಯಕ್ಷರನ್ನು ಹೊಂದಿರುವ ಸಮಾಜವಾಗಿದೆ. ಇದು ಇನ್ನೊಂದು ಸಮಾಜಕ್ಕೆ ಮಾದರಿಯಂತಾಗಿದೆ ಎಂದರು.

ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ ಮಾತನಾಡಿ, ಪ್ರಸ್ತುತ ಮಠ ಮತ್ತು ಶ್ರೀಗಳ ಬಗ್ಗೆ ಅನಗತ್ಯವಾದ ವಿಚಾರ ದಿನನಿತ್ಯ ವಾಟ್ಸಾಪ್‌ನಲ್ಲಿ ಹರಿದಾಡುತ್ತಿದೆ. ಇದು ಬಹಳ ಸೂಕ್ಷ್ಮತೆ ಪಡೆಯುತ್ತಿದೆ. ಈ ಸಮಸ್ಯೆಗೆ ಹಾಗೂ ಸಮುದಾಯದ ಏಳಿಗೆಗೆ ನೂತನ ಅಧ್ಯಕ್ಷರು ಆರೋಗ್ಯಕರ ಪರಿಹಾರವನ್ನು ಕಂಡುಕೊಳ್ಳಬೇಕು. ಯುವ ಜನಾಂಗ ಮಠದ ಪರಂಪರೆ ಬಿಟ್ಟು ದೂರ ಸರಿಯುತ್ತಿದ್ದಾರೆ. ಅವರನ್ನು ತರುವಂತಹ ಕೆಲಸ ಮಾಡಲಿ ಎಂದರು.

ವಕೀಲ ಎಲ್.ಹೆಚ್. ಅರುಣ್ ಕುಮಾರ್ ಮಾತನಾಡಿ, ನಮ್ಮ ಮಠ ಮತ್ತು ಸಮಾಜದ ಬಗ್ಗೆ ಅನ್ಯ ಸಮಾಜಗಳು ಗೌರವ ಇಟ್ಟಿವೆ. ಯಾರೂ ಸಹ ನಮ್ಮ ಮಠದ ಬಗ್ಗೆ ತಪ್ಪಾಗಿ ಮಾತನಾಡುವುದಿಲ್ಲ. ಇದಕ್ಕೆ ಕಾರಣ, ನಮ್ಮಲ್ಲಿರುವ ಒಗ್ಗಟ್ಟು. ಈಗ ಅಪಸ್ವರ ಎತ್ತಿದವರೂ ನಾಳೆ ಒಂದಾಗುತ್ತಾರೆ ಅನ್ನುವ ಮನೋಭಾವನೆ ಅನ್ಯ ಸಮಾಜದಲ್ಲಿದೆ. ಇದು ನಮ್ಮ ಸಮಾಜ ಮತ್ತು ಮಠಕ್ಕೆ ಸಂದ ಗೌರವವೇ ಕಾರಣ. ಇಂತಹ ಗೌರವವನ್ನು ನಾವೆಲ್ಲರೂ ಉಳಿಸಿಕೊಳ್ಳಬೇಕಿದೆ ಎಂದರು.

ಸಂಘದ ಗೌರವ ಕಾರ್ಯದರ್ಶಿ ಮಾಗನೂರು ಸಂಗಮೇಶ್ವರ ಗೌಡ್ರು, ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ, ರೈತ ಮುಖಂಡರಾದ ಹೆಚ್.ಆರ್. ಲಿಂಗರಾಜ್, ಹೊನ್ನೂರು ಮುನಿಯಪ್ಪ, ಭಾರತೀಯ ಸೇವಾ ದಳದ ಜಿಲ್ಲಾಧ್ಯಕ್ಷ ಪಲ್ಲಾಗಟ್ಟೆ ಚೆನ್ನಪ್ಪ, ಸಂಘದ ತಾಲ್ಲೂಕು ಅಧ್ಯಕ್ಷ ಹೆಚ್.ಡಿ. ಮಹೇಶ್ವರಪ್ಪ ಮಾತನಾಡಿದರು.

# ಜನಸಂಖ್ಯೆ ತಡೆಗಟ್ಟುವ ಮಾರ್ಗ ಅನುಸರಿಸಲು ಕರೆ

**ಹದಡಿ : ವಿಶ್ವ ಜನ ಸಂಖ್ಯಾ ದಿನಾಚರಣೆ ಪಾಕ್ಷಿಕ ಕಾರ್ಯಕ್ರಮದಲ್ಲಿ ತಾಲ್ಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಹೆಚ್. ಉಮಾಪತಿ**

ದಾವಣಗೆರೆ, ಜು.20- ಕುಟುಂಬದ ಅಭಿವೃದ್ಧಿಗೆ ಕುಟುಂಬ ನಿಯಂತ್ರಣವು ಅವಶ್ಯಕವಾಗಿದೆ. ಅಲ್ಲದೇ ದೇಶದಲ್ಲಿ ಅಧಿಕವಾಗುತ್ತಿರುವ ಜನಸಂಖ್ಯೆಯನ್ನು ತಡೆಗಟ್ಟಲು ಇರುವ ಮಾರ್ಗಗಳನ್ನು ಅನುಸರಿಸುವಂತೆ ತಾಲ್ಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಹೆಚ್. ಉಮಾಪತಿ ತಿಳಿಸಿದರು.

ತಾಲ್ಲೂಕಿನ ಹದಡಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಛೇರಿ ದಾವಣಗೆರೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಹದಡಿ ಇವರ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶ್ವ ಜನ ಸಂಖ್ಯಾ ದಿನಾಚರಣೆ ಪಾಕ್ಷಿಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕುಟುಂಬ ಕಲ್ಯಾಣ ಯೋಜನೆಯ ತಾತ್ಕಾಲಿಕ ವಿಧಾನಗಳಲ್ಲಿ ಹೆಂಗಸರಿಗೆ ಛಾಯಾ ಮಾತ್ರೆಗಳು, ಅಂತರ ಲಸಿಕೆ, ಕಾಪರ್-ಟಿ., ಪಿ.ಪಿ.ಐ.ಯು.ಸಿಡಿ. ಮಾಲಾ-ಎನ್, ಮಾಲಾ-ಡಿ, ಇ-ಪಿಲ್ಸ್, ಪುರುಷರಿಗೆ ನಿರೋಧ್ ಈ ವಿಧಾನಗಳನ್ನು ಅನುಸರಿಸುವ ಮೂಲಕ ಮಗುವಿನ ಅಂತರವನ್ನು ಕಾಪಾಡಿಕೊಳ್ಳುವುದು ಹಾಗೂ ಶಾಶ್ವತ ವಿಧಾನಗಳಲ್ಲಿ ಮಹಿಳೆಯರಿಗೆ ಟ್ಯುಬೆಕ್ಟಮಿ, ಲ್ಯಾಪ್ರೋಸ್ಕೋಪಿಕ್. ಪುರುಷರಿಗೆ ನೋ ಸ್ಕಾಲ್‌ಪಾಲ್ ವ್ಯಾಸೆಕ್ಟಮಿ ವಿಧಾನಗಳನ್ನು ಅನುಸರಿಸುವ ಮೂಲಕ ಜನಸಂಖ್ಯೆಯನ್ನು ನಿಯಂತ್ರಿಸಬಹುದೆಂದು ತಿಳಿಸಿದರು.

ಹದಡಿ ಪ್ರಾಥಮಿಕ ಆರೋಗ್ಯ ಕೇಂದ್ರ ಆಡಳಿತ ವೈದ್ಯಾಧಿಕಾರಿ ಡಾ.ಧನಂಜಯ ಮಾತನಾಡಿ, ಕುಟುಂಬ ಕಲ್ಯಾಣ ಯೋಜನೆಗಳ ಕುರಿತು ಸಮುದಾಯ ಜಾಗೃತೀಕರಣ ಪಾಕ್ಷಿಕ ಕಾರ್ಯಕ್ರಮ ಜುಲೈ-11 ರ ವಿಶ್ವ ಜನಸಂಖ್ಯಾ ದಿನಾಚರಣೆಯ ಅಂಗವಾಗಿ ಜೂನ್-27 ರಿಂದ ಜುಲೈ-10 ರವರೆಗೆ ಆಚರಣೆಯನ್ನು ಮಾಡಲಾಗುತ್ತದೆ. ಇದರ ಅಂಗವಾಗಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವಂತಹ ವಿವಿಧ ಹಂತದ ಕಾರ್ಯಕ್ರಮಗಳನ್ನು ತಾಲ್ಲೂಕು ಆರೋಗ್ಯ ಇಲಾಖೆಯಿಂದ ಹಮ್ಮಿಕೊಳ್ಳಲಾಗುತ್ತದೆ ಎಂದರು.

ಜಿಲ್ಲಾ ಆರೋಗ್ಯ ಮೇಲ್ವಿಚಾರಕ ಎಂ.ವಿ.ಹೊರಕೇರಿ ಮಾತನಾಡಿ, ಚಿಕ್ಕ ಕುಟುಂಬ ಚೊಕ್ಕ ಕುಟುಂಬದಿಂದ ತಾಯಿ ಮತ್ತು ಮಕ್ಕಳ ಮರಣ ಪ್ರಮಾಣವನ್ನು ತಡೆಗಟ್ಟಿ, ಜನಸಂಖ್ಯಾ ಸ್ಫೋಟದಿಂದಾಗುವ ಸಮಸ್ಯೆಗಳನ್ನು ತಡೆಗಟ್ಟುವ ಮುಖಾಂತರ ದೇಶದ ಅಭಿವೃದ್ಧಿಯನ್ನು ಕಾಣಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಆಯುಷ್ ವೈದ್ಯಾಧಿಕಾರಿ ಡಾ.ರೂಪಾ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಮಹದೇವಯ್ಯ, ಹಿರಿಯ ಪ್ರಾಥಮಿಕ ಆರೋಗ್ಯ ಸಂರಕ್ಷಣಾಧಿಕಾರಿ ಶಕುಂತಲಮ್ಮ ಮತ್ತಿತರರು ಹಾಜರಿದ್ದರು.

# ಕಾಂಗ್ರೆಸ್ ಅವರಪ್ಪನಾಣೆ ಅಧಿಕಾರಕ್ಕೆ ಬರಲ್ಲ

## ಆಗಲೇ ಸಿಎಂ ಗಾದಿಗೆ ಪೈಪೋಟಿ ನಡೆದಿದೆ - ಸಚಿವ ಸುಧಾಕರ್ ವ್ಯಂಗ್ಯ

ಬೆಂಗಳೂರು, ಜು.20- ಅವರಪ್ಪನಾಣೆ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದಿಲ್ಲ. ಇನ್ನು ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಮುಖ್ಯಮಂತ್ರಿಯಾಗುವುದು ಎಲ್ಲಿಂದ ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಇಂದಿಲ್ಲಿ ಪ್ರಶ್ನಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಾಸ್ತವ ಸ್ಥಿತಿಯಲ್ಲಿ ಕಾಂಗ್ರೆಸ್‌ಗೆ ಮತದಾರರ ಬೆಂಬಲವಿಲ್ಲ. ಅವರಿಗೆ ಯಾವ ಜೋತಿಷ್ಯ ಹೇಳಿದ್ದಾರೋ ತಿಳಿಯದು. ಇದರ ಆಧಾರದ ಮೇಲೆ ಮುಖ್ಯಮಂತ್ರಿ ಗಾದಿಗೆ ಟವಲ್ ಹಾಕಲು ಪೈಪೋಟಿ ನಡೆಸುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಇನ್ನು ಮಗುವೇ ಹುಟ್ಟಿಲ್ಲ, ಕುಲಾವಿ ಹೊಲಿಯಲಾಗುತ್ತಿದೆ. ಅಲ್ಲಿ ಅಧಿಕಾರಕ್ಕಾಗಿ ಪೈಪೋಟಿ ಶುರುವಾಗಿದೆ. ಜನರು ಎಲ್ಲವನ್ನೂ ನೋಡುತ್ತಾರೆ ಎಂದರು.

# ರೈತ ಸಂಘದ ಅನುಭವ ಸಮಾಜ ನಿರ್ವಹಿಸಲು ಅನುಕೂಲಕರವಾಗಿದೆ

**(1ನೇ ಪುಟದಿಂದ)** ಹಿರಿಯರಿಗೆ ಆದ್ಯತೆ ಮೇಲೆ ಸಮಿತಿ ರಚನೆ ಮಾಡುವುದರಿಂದ ತಾಲ್ಲೂಕಿನಲ್ಲಿ ಸಮಾಜದ ಕೆಲಸ ಮಾಡಲು ಹೆಚ್ಚು ಅನುಕೂಲವಾಗಿದೆ.

**ಎಲ್ಲಾ ರಾಜಕೀಯ ಪಕ್ಷದವರೂ ಸಮಾಜದಲ್ಲಿದ್ದಾರೆ. ಚುನಾವಣೆ ಸಮಯದಲ್ಲಿ ನಿಮ್ಮ ನಿಲುವು?**

ಚುನಾವಣಾ ಸಮಯದಲ್ಲಿ ಸಂಘದ ನಿಲುವು ತಟಸ್ಥವಾಗಿರುತ್ತದೆ. ರಾಜಕೀಯ ಇರುವುದಿಲ್ಲ.

**ರೈತ ಸಂಘದ ಪದವಿ ಹಾಗೂ ಸದ್ಧರ್ಮ ಸಂಘದ ಅಧ್ಯಕ್ಷ ಪದವಿಯಲ್ಲಿ ಯಾವುದರಿಂದ ಯಾವುದಕ್ಕೆ ಲಾಭ?**

ಎರಡೂ ಒಂದಕ್ಕೊಂದು ಪೂರಕವಾಗಿ ಕಾರ್ಯ ನಿರ್ವಹಿಸುತ್ತವೆ. ಎರಡೂ ವಿಚಾರಗಳೂ ಒಂದೇ ಆಗಿದ್ದು, ಎರಡೂ ರೈತರಿಗೆ ಅನುಕೂಲಕರವಾದ ಧ್ಯೇಯೋದ್ದೇಶ ಹೊಂದಿವೆ. ಇಲ್ಲಿ ಲಾಭದ ಪ್ರಶ್ನೆಯೇ ಇಲ್ಲ.

# ಜನ ಸಾಮಾನ್ಯರಿಗೆ ಲಾಭವಿಲ್ಲ

**(1ನೇ ಪುಟದಿಂದ)** ಹೆಚ್ಚಿದೆ. ವೈದ್ಯಕೀಯ ಶಿಕ್ಷಣಕ್ಕೆ ಸರ್ಕಾರ ಹತ್ತು ಸಾವಿರ ಕೋಟಿ ರೂಪಾಯಿಗಳಿಗೂ ಮೀರಿ ವ್ಯಯಿಸುತ್ತಿದೆ. ಆದರೆ ಮೂಲಸೌಕರ್ಯ ಮತ್ತು ತಂತ್ರಜ್ಞಾನ ಲಭ್ಯತೆಯ ಕೊರತೆಯಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಸಲ್ಲಿಸಲು ಯಾರೂ ಮುಂದಾಗುತ್ತಿಲ್ಲ. ತಂತ್ರಜ್ಞಾನ ಕಂಪೆನಿಗಳು ಈ ಸಮಸ್ಯೆಯ ಪರಿಹಾರಕ್ಕೆ ಮುಂದಾಗಬೇಕು ಎಂದು ಅವರು ನುಡಿದರು.

ಸಮಾವೇಶದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ನಾಸ್ಕಾಂ ಅಧ್ಯಕ್ಷೆ ದೇಬ್‌ಜಾನಿ ಘೋಷ್ ಅವರು ತಂತ್ರಜ್ಞಾನ ಕ್ಷೇತ್ರಕ್ಕೆ ಎಲ್ಲಿಲ್ಲದ ಮನ್ನಣೆ ದೊರೆಯುತ್ತಿದೆ. ಆದರೆ, ಅದೇ ಸಮಯಕ್ಕೆ ಜನರ ಮೂಲಭೂತ ಹಕ್ಕಾದ ಆರೋಗ್ಯದತ್ತಲೂ ಗಮನ ಹರಿಸಬೇಕು. ತಂತ್ರಜ್ಞಾನ ಆವಿಷ್ಕಾರಗಳ ಲಾಭ ಪಡೆದು ಗುಣಮಟ್ಟದ ಆರೋಗ್ಯ ಸೇವೆ ಎಲ್ಲರಿಗೂ ದೊರೆಯುವಂತಾಗಬೇಕು ಎಂದು ಅಭಿಪ್ರಾಯಪಟ್ಟರು.

# ವಾಹನ ಹರಿಸಿ ಪೊಲೀಸರ ಹತ್ಯೆ

**(1ನೇ ಪುಟದಿಂದ)** ವರದಿ ಬಂದ ಹಿನ್ನೆಲೆಯಲ್ಲಿ ಪೊಲೀಸರು ತಪಾಸಣೆಗೆ ತೆರಳಿದ್ದರು. ಆ ಸಂದರ್ಭದಲ್ಲಿ ವಾಹನ ತಡೆಯಲು ಯತ್ನಿಸಿದಾಗ ಹತ್ಯೆ ಮಾಡಲಾಗಿದೆ.

ಗುಜರಾತ್‌ನ ಆನಂದ್ ಜಿಲ್ಲೆಯಲ್ಲಿ ವಾಹನ ಹರಿಸಿ ಪೊಲೀಸ್ ಪೇದೆಯೊಬ್ಬರನ್ನು ಹತ್ಯೆ ಮಾಡಲಾಗಿದೆ.

ಬೋರ್ಸದ್ ನಗರದ ಹೆದ್ದಾರಿಯಲ್ಲಿ ಕರಣ್‌ಸಿನ್ಹಾ ರಾಜ್ ಅವರು ಕಾರ್ಯ ನಿರ್ವಹಿಸುತ್ತಿದ್ದ ವೇಳೆ ಹತ್ಯೆ ಮಾಡಲಾಗಿದೆ.

ಚಾಲಕ ವಾಹನವನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾನೆ. ಆತನ ಶೋಧ ಕಾರ್ಯ ನಡೆದಿದೆ. ವಾಹನದಲ್ಲಿ ಶಂಕಾಸ್ಪದ ಯಾವುದೇ ವಸ್ತು ಕಂಡು ಬಂದಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

# ಈಶ್ವರಪ್ಪಗೆ ಪೊಲೀಸರ ಕ್ಲೀನ್‌ಚಿಟ್


**(1ನೇ ಪುಟದಿಂದ)** ನೀಡಿದ್ದರು. ನಮ್ಮ ಪಕ್ಷದ ನಾಯಕರು ಹಾಗೂ ಕಾರ್ಯಕರ್ತರು ಈ ಪ್ರಕರಣದ ನಂತರ ಮುಜುಗರದಲ್ಲಿದ್ದರು, ಅವರೆಲ್ಲರೂ ಮುಜುಗರದಿಂದ ಹೊರ ಬಂದಿದ್ದಾರೆ ಎಂದು ಈಶ್ವರಪ್ಪ ತಿಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್, ಈಶ್ವರಪ್ಪ ಕ್ಲೀನ್‌ಚಿಟ್ ಪಡೆದು ಹೊರ ಬರಲಿದ್ದಾರೆ ಎಂದು ತನಿಖೆಯ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದರು. ಅವರು ತನಿಖೆಯ ಸಂದರ್ಭದಲ್ಲೇ ಹೇಳಿರುವುದರಿಂದ, ತನಿಖೆ ನಡೆಸುತ್ತಿರುವ ಪೊಲೀಸ್ ಅಧಿಕಾರಿಗಳು ಭಯದಿಂದ ವರ್ತಿಸಿ ಬಿ - ವರದಿ ನೀಡಿದ್ದಾರೆ ಎಂದಿದ್ದಾರೆ.

# ತೈಲದ ಅನಿರೀಕ್ಷಿತ ಲಾಭದ ತೆರಿಗೆ ಕಡಿತ

**(1ನೇ ಪುಟದಿಂದ)** 23,250 ರೂ.ಗಳಿಂದ 17 ಸಾವಿರ ರೂ.ಗಳಿಗೆ ಇಳಿಕೆ ಮಾಡಲಾಗಿದೆ. ಜಾಗತಿಕವಾಗಿ ತೈಲ ಬೆಲೆ ತೀವ್ರವಾಗಿ ಇಳಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ತೆರಿಗೆ ಕಡಿತಗೊಳಿಸಲಾಗಿದೆ.

# ಸೌಹಾರ್ದ ಬದುಕು ಕಿತ್ತುಕೊಳ್ಳುತ್ತಿರುವ ಸರ್ಕಾರಗಳ ವಿರುದ್ಧ ಹೋರಾಟಕ್ಕೆ ಕರೆ



ಚನ್ನಗಿರಿ, ಜು.20- ಸೌಹಾರ್ದತೆಯ ಬದುಕನ್ನು ಕಿತ್ತುಕೊಳ್ಳುತ್ತಿರುವ ಸರ್ಕಾರಗಳ ವಿರುದ್ಧ ಹೋರಾಟ ಮಾಡಬೇಕು ಎಂದು ಸಿ.ಪಿ.ಐ. ರಾಜ್ಯ ಸಮಿತಿ ಸದಸ್ಯ ಕಾಂ. ಅಮ್ಜದ್ ಕರೆ ನೀಡಿದರು.

ಭಾರತ ಕಮ್ಯುನಿಸ್ಟ್ ಪಕ್ಷದ ಚನ್ನಗಿರಿ ತಾಲ್ಲೂಕು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಿ.ಪಿ.ಐ. ಪಕ್ಷವು ಜನರಿಗೆ ನ್ಯಾಯ ಕೊಡಿಸುವ ಕೆಲಸ ಮಾಡುತ್ತದೆ, ಸರ್ವರಿಗೂ ಸಮಬಾಳು, ಸಮಪಾಲು, ಹಳ್ಳಿಯಿಂದ ದೆಹಲಿವರೆಗೂ ಕಟ್ಟ ಕಡೆಯ ಜನರಿಗೂ ಸಿಗಬೇಕೆಂಬ ಆಶಾಭಾವನೆಯಿಂದ ಹೋರಾಟ ಚಳುವಳಿ ಕಟ್ಟುತ್ತದೆ, ಹಕ್ಕನ್ನು ಕೊಡಿಸುತ್ತದೆ. ಆದರೆ ಈಗಿನ ಬಿ.ಜೆ.ಪಿ. ಸರ್ಕಾರ ದೇಶವನ್ನು ದಿವಾಳಿತನಕ್ಕೆ ಕೊಂಡೊಯ್ಯುತ್ತಿದೆ ಎಂದು ದೂರಿದರು.

ಪಕ್ಷದ ಜಿಲ್ಲಾ ಸಹ ಕಾರ್ಯದರ್ಶಿ ಆವರಗೆರೆ ವಾಸು ಮಾತನಾಡಿ, ಬಿ.ಜೆ.ಪಿ. ಸರ್ಕಾರ, ಪೆಟ್ರೋಲ್, ಡೀಸೆಲ್ ಅಗತ್ಯವಸ್ತುಗಳ ಬೆಲೆ ಏರಿಕೆ ಮಾಡಿ, ರೈತರ ವಿರೋಧಿ ನೀತಿಗಳನ್ನು ಜಾರಿಗೊಳಿಸುತ್ತಿದೆ ಎಂದರು.

ಅಧ್ಯಕ್ಷತೆಯನ್ನು ಹನುಮಂತರಾವ್ ವಹಿಸಿದ್ದರು. ಸಿಪಿಐ ಚನ್ನಗಿರಿ ಉಸ್ತುವಾರಿ ವಿ. ಲಕ್ಷ್ಮಣ, ತಾಲ್ಲೂಕು ಕಾರ್ಯದರ್ಶಿ ಮಹ್ಮದ್ ರಫೀಕ್, ಗೌಸ್‌ಪೀರ್, ಜೈನುಲ್ಲಾಖಾನ್, ರಫೀವುಲ್ಲಾ, ಮಧು ಭಾರತಿ ಪ್ರಸಾದ್, ಮುಜಿದ್ ಸೈಯ್ಯದ್ ಮನ್ಸರ್, ಹರೀಶ್ ಚಂದ್ರಚಾರಿ, ಲೋಕೇಶ್ ಹಾಗೂ ಚನ್ನಗಿರಿ ತಾಲ್ಲೂಕು ಪ್ರತಿನಿಧಿಗಳು ಭಾಗವಹಿಸಿದ್ದರು.

# ಬಿಐಇಟಿ ವಿದ್ಯಾರ್ಥಿಗಳಿಂದ ಸಂಶೋಧನೆಗಳು

**(1ನೇ ಪುಟದಿಂದ)** 2021–22ರಲ್ಲಿ 648 ಮಂದಿ ಆಯ್ಕೆಯಾಗಿರುವುದು ಇದಕ್ಕೆ ಸಾಕ್ಷಿ ಎಂದು ವಿವರಿಸಿದರು. ಡಿಎಂಜಿ ಮೋರಿ ಇದರ ವ್ಯವಸ್ಥಾಪಕ ನಿರ್ದೇಶಕ ಸುನಿಲ್ ರಾವ್, ಉಪಾಧ್ಯಕ್ಷ ಪ್ರಶಾಂತ್ ಗುರುಪ್ರಸಾದ್, ಪಿಆರ್‌ಓ ದೇಸಾಯಿ ಅವರೂ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.


## ಗ್ರಾಮ ಪಂಚಾಯತಿ ಕಾರ್ಯಾಲಯ, ಕುಳಗಟ್ಟೆ

ತಾಲ್ಲೂಕು :ಹೊನ್ನಾಳಿ, ಜಿಲ್ಲೆ : ದಾವಣಗೆರೆ.

ನಂ: ಗ್ರಾಪಂ.ಕ.ಇ.ಅ.ಇ-ಟೆ/ಸಿಆರ್/2022-23 ದಿನಾಂಕ : 19.07.2022.

### ಟೆಂಡರ್ ಪ್ರಕಟಣೆ

ದಾವಣಗೆರೆ ಜಿಲ್ಲೆ, ಹೊನ್ನಾಳಿ ತಾಲ್ಲೂಕಿನ ಕುಳಗಟ್ಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 2021-22 ಹಾಗೂ 2022-23ನೇ ಸಾಲಿಗೆ 15ನೇ ಹಣಕಾಸು ಯೋಜನೆಯ ಕ್ರಿಯಾ ಯೋಜನೆಯಂತೆ ಗ್ರಾ.ಪಂ.ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಾಮಗ್ರಿ ಖರೀದಿ ಮತ್ತು ನಿರ್ವಹಣೆ. ಎಲ್ಲಾ ಗ್ರಾಮಗಳ ಕುಡಿಯುವ ನೀರಿನ ಮೋಟರ್ ದುರಸ್ತಿ ಮತ್ತು ಎಲ್ಲಾ ಗ್ರಾಮಗಳ ಬೀದಿ ದೀಪ ಖರೀದಿ ಮತ್ತು ನಿರ್ವಹಣೆಯ ಅನುಷ್ಠಾನಕ್ಕಾಗಿ ನೋಂದಾಯಿತ ಅರ್ಹ ಸರಬರಾಜುದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ರಂತೆ ಈ ಕೆಳಗಿನಂತೆ ಕಾಮಗಾರಿಗಳ(KW-1) ನಿಯಮಾವಳಿಗಳಂತೆ ಟೆಂಡರ್ ಕರೆಯಲಾಗಿದ್ದು, ಸರಬರಾಜುದಾರರು ಕುಳಗಟ್ಟೆ ಗ್ರಾಮ ಪಂಚಾಯತಿ ಕಛೇರಿಯಲ್ಲಿ ಕಛೇರಿಯ ಕೆಲಸದ ಸಮಯದಲ್ಲಿ ಅರ್ಜಿ ಪಡೆದು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕುಳಗಟ್ಟೆ ಗ್ರಾಮ ಪಂಚಾಯತಿ ಕಛೇರಿಯಲ್ಲಿ ಸಂಪರ್ಕಿಸಬಹುದು.

| ಕ್ರ.ಸಂ | ಕಾಮಗಾರಿಯ ಹೆಸರು | ಟೆಂಡರ್ ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) | ಷರಾ |
|---|---|---|---|
| 1 | ಕುಳಗಟ್ಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೆ ವಿದ್ಯುತ್ ಸಾಮಗ್ರಿಗಳ ಖರೀದಿ ಮತ್ತು ನಿರ್ವಹಣೆ (ಇ-ಪ್ರಕ್ಯೂರ್ ಮೆಂಟ್ ಮೂಲಕ) | 516182/- | ಇ-ಟೆಂಡರ್ ಪ್ರಕ್ರಿಯೆ |
| 2 | ಕುಳಗಟ್ಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರಿನ ಸಾಮಗ್ರಿಗಳ ಖರೀದಿ ಮತ್ತು ನಿರ್ವಹಣೆ (ಇ-ಪ್ರಕ್ಯೂರ್ ಮೆಂಟ್ ಮೂಲಕ) | 715859/- | ಇ-ಟೆಂಡರ್ ಪ್ರಕ್ರಿಯೆ |
| 3 | ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಕುಡಿಯುವ ನೀರಿನ ಮೋಟಾರ್ ದುರಸ್ತಿ ಮತ್ತು ಸಾಮಗ್ರಿ ಖರೀದಿ (ಮ್ಯಾನುಯಲ್ ಟೆಂಡರ್ ಮೂಲಕ) | 145000/- | (ಮ್ಯಾನುಯಲ್ ಟೆಂಡರ್ ಮೂಲಕ) |

| | |
|---|---|
| ಟೆಂಡರ್ ಸ್ವೀಕರಿಸುವ ಪ್ರಾಧಿಕಾರ | ಅಧ್ಯಕ್ಷರು/ಪಂಚಾಯತ್ ಅಭಿವೃದ್ಧಿ ಅಧಿಕಾರಿ ಕುಳಗಟ್ಟೆ ಗ್ರಾಮ ಪಂಚಾಯತ್ |
| ಟೆಂಡರ್ ಫಾರ್ಮ್ ಪಡೆಯಲು ದಿನಾಂಕ | ಅರ್ಜಿ ಶುಲ್ಕ: ರೂ. 200-00 (ಎರಡು ನೂರು ರೂಪಾಯಿಗಳು)ನ್ನು ಪಾವತಿಸಿ ಅರ್ಜಿ ಪಡೆಯತಕ್ಕದ್ದು. ಅರ್ಜಿಯ ಕೊನೆಯ ದಿನಾಂಕ: 27.07.2022ರಂದು ಸಂಜೆ 4.30 ಗಂಟೆಗೆ. |
| ಭರ್ತಿ ಮಾಡಿದ ಟೆಂಡರನ್ನು ಸ್ವೀಕರಿಸುವ ಕೊನೆಯ ದಿನಾಂಕ | ದಿನಾಂಕ:27.07.2022 ರಂದು ಸಂಜೆ 4.30 ಗಂಟೆಗೆ. |
| ಟೆಂಡರ್ ತೆರೆಯುವ ದಿನ, ಸಮಯ ಹಾಗೂ ಸ್ಥಳ : | ದಿನಾಂಕ:28.07.2022 ರಂದು ಪೂರ್ವಾಹ್ನ 11.30 ಗಂಟೆಗೆ ಕುಳಗಟ್ಟೆ ಗ್ರಾಮ ಪಂಚಾಯತ್ ಕಛೇರಿಯಲ್ಲಿ ಹಾಜರಿರುವ ಟೆಂಡರ್‌ದಾರರ/ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು. |

**ಷರತ್ತುಗಳು :** * ಟೆಂಡರ್/ ಕೊಟೇಶನ್ ಖಾಯಂ ಆದ ಗುತ್ತಿಗೆದಾರರು ಗ್ರಾಮ ಪಂಚಾಯಿತಿ ಆದೇಶದ ದಿನಾಂಕದಿಂದ 31/03/2023 ರ ಅವಧಿವರೆಗೆ ಈ ಮೇಲ್ಕಾಣಿಸಿದ ಟೆಂಡರ್/ಕೊಟೇಶನ್ ದರದಲ್ಲಿಯೇ ಕುಡಿಯುವ ನೀರಿನ ಮೋಟಾರ್ ಸಾಮಗ್ರಿಯ ಬಿಡಿಭಾಗಗಳು ಮತ್ತು ಬೀದಿ ದೀಪಗಳ ಸಾಮಗ್ರಿಗಳನ್ನು ಸರಬರಾಜು ಮಾಡತಕ್ಕದ್ದು. * ಟೆಂಡರ್/ ಕೊಟೇಶನ್ ನಲ್ಲಿ ಭಾಗವಹಿಸುವವರು ಇ.ಎಂ.ಡಿ (ಭದ್ರತಾ ಠೇವಣಿ ಮೊತ್ತ) ನಿಗದಿಪಡಿಸಿದ ಮೊತ್ತದ ಶೇ.2.5 ರಷ್ಟು ಮೊತ್ತವನ್ನು ಡಿ ಡಿ ಮೂಲಕ ಮುಂಗಡವಾಗಿ ಗ್ರಾಮ ಪಂಚಾಯತ್‌ಗೆ ಟೆಂಡರ್/ಕೊಟೇಶನ್ ಪ್ರತಿಯೊಂದಿಗೆ ಗ್ರಾಮ ಪಂಚಾಯತ್ ಗೆ ಪಾವತಿಸತಕ್ಕದ್ದು ಮತ್ತು ರೂ.100/- ಛಾಪಾ ಕಾಗದದಲ್ಲಿ ಕೊಟೇಶನ್ ಷರತ್ತುಗಳನ್ನು ಒಪ್ಪಿ ಲಿಖಿತ ಬರಕೊಡತಕ್ಕದ್ದು. * ತಾವೇ ಸ್ವತಃ ಸಾಮಗ್ರಿಗಳನ್ನು ಗ್ರಾಮ ಪಂಚಾಯಿತಿಗೆ ಸರಬರಾಜು ಮಾಡಲು ಬದ್ಧರಾಗಿರತಕ್ಕದ್ದು.* ಸ್ಥಳೀಯರಿಗೆ ಮೊದಲ ಆದ್ಯತೆ. * ಕನಿಷ್ಠ ದರ ನಿಗದಿಪಡಿಸಿದ ಕೊಟೇಶನ್ನನ್ನು ಮಂಜೂರು ಮಾಡಲಾಗುವುದು. ಟೆಂಡರ್/ ಕೊಟೇಶನ್ ದರವನ್ನು ಅಂಗೀಕರಿಸುವ ಹಾಗೂ ತಿರಸ್ಕರಿಸುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರ ಹೊಂದಿರುತ್ತದೆ.

ಸಹಿ/- **ಪಂಚಾಯತಿ ಅಭಿವೃದ್ಧಿ ಅಧಿಕಾರಿ**, ಗ್ರಾಮ ಪಂಚಾಯಿತಿ, ಕುಳಗಟ್ಟೆ



## ಕರ್ನಾಟಕ ಗ್ರಾಮೀಣ ಬ್ಯಾಂಕ್

(ಸರ್ಕಾರಿ ಸ್ವಾಮ್ಯದ ಷೆಡ್ಯೂಲ್ಡ್ ಬ್ಯಾಂಕ್) ಪ್ರವರ್ತಕರು : ಕೆನರಾ ಬ್ಯಾಂಕ್

ಪ್ರಧಾನ ಕಛೇರಿ : ಸಂಗನಕಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ–583 103 (ಕರ್ನಾಟಕ)

ವಿಶ್ವಾಸದ ಪ್ರತೀಕ

ಪ್ರಾದೇಶಿಕ ಕಛೇರಿ : ಹೊಸಪೇಟೆ, ವಿಜಯನಗರ ಜಿಲ್ಲೆ.

ಶಾಖೆ : ಹಲವಾಗಲು, ಹರಪನಹಳ್ಳಿ ತಾಲ್ಲೂಕು. ಫೋನ್ : 99452–73466.

### ಚಿನ್ನಾಭರಣಗಳ ಬಹಿರಂಗ ಹರಾಜು

ಈ ಕೆಳಕಂಡ ಗ್ರಾಹಕರು ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ನಮ್ಮ ಶಾಖೆಯಲ್ಲಿ ತಮ್ಮ ಚಿನ್ನಾಭರಣ ಆಧಾರದ ಸಾಲ ಪಡೆದಿದ್ದು, ವಾಯಿದೆ ಪ್ರಕಾರ ಸಾಲ ಮರುಪಾವತಿ ಮಾಡದೇ ಇದ್ದ ಕಾರಣ, ಇವರಿಗೆ ರಿಜಿಸ್ಟರ್ಡ್ ಅಂಚೆ ಮುಖಾಂತರ ಸಾಲಮರುಪಾವತಿ ಮಾಡುವಂತೆ ಕೋರಿ ಕಳುಹಿಸಿದ ನೋಟಿಸ್ ಜಾರಿಯಾಗಿರುತ್ತದೆ. ಆದರೂ ಸಾಲ ಮರುಪಾವತಿ ಮಾಡಲು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ, ಅವರಿಗೆ ಈ ಮೂಲಕ ತಿಳಿಸುವುದೇನೆಂದರೆ, ತಾರೀಖು **28–07–2022** ರಂದು ಅಥವಾ ಅದಕ್ಕೆ ಮುಂಚೆ ಬ್ಯಾಂಕಿಗೆ ಭೇಟಿ ಕೊಟ್ಟು ಸಂಪೂರ್ಣ ಹಣ, ಬಡ್ಡಿ ಹಾಗೂ ಇತರೆ ಖರ್ಚುಗಳನ್ನು ಮರುಪಾವತಿ ಮಾಡತಕ್ಕದ್ದು, ಇಲ್ಲವಾದಲ್ಲಿ ತಾವು ಒತ್ತೆ ಇಟ್ಟ ಆಭರಣಗಳನ್ನು ತಾರೀಖು **28–07–2022** ರಂದು ಬೆಳಿಗ್ಗೆ **11.00** ಗಂಟೆಗೆ ಅಥವಾ ಬ್ಯಾಂಕಿಗೆ ಸೂಕ್ತವಾದ ಇನ್ನಾವುದೇ ದಿನದಂದು ನೋಟೀಸು ಕೊಡದೇ ಶಾಖೆಯ ಆವರಣದಲ್ಲಿ ಬಹಿರಂಗವಾಗಿ ಯಾ ಖಾಸಗಿಯಾಗಿ ಹರಾಜು ಮಾಡಲಾಗುವುದು. ಸದರಿ ಹರಾಜಿನಿಂದ ಬಂದ ಮೊತ್ತವು ತಮ್ಮ ಸಾಲವನ್ನು ಸಂಪೂರ್ಣ ತೀರುವಳಿ ಮಾಡಲು ವಿಫಲವಾದಲ್ಲಿ ತಾವು ವೈಯಕ್ತಿಕವಾಗಿ ಹೊಣೆಗಾರರಾಗಿರುತ್ತೀರಿ ಹಾಗೂ ಹರಾಜಿಗೆ ತಗಲುವ ಎಲ್ಲಾ ವೆಚ್ಚಕ್ಕೂ ನೀವೇ ಹೊಣೆಗಾರರೆಂದು ತಿಳಿಯಿರಿ.

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಬಾಕಿ ಮೊತ್ತ (ರೂ.ಗಳಲ್ಲಿ) (31.03.2022 ರಂತೆ) |
|---|---|---|---|
| 1 | ಶ್ರೀಮತಿ ಪರಸಪ್ಪರ ಸುಜಾತ, ಕೋಂ. ನಾಗರಾಜ, ನಿಟ್ಟೂರು. | 40620302000721 | 1,23,767–00+ಅನ್ವಯಿಸುವ ಬಡ್ಡಿ |
| 2 | ಶ್ರೀ ಲಕ್ಷ್ಮಪ್ಪ ಬಿಳಿಚೋಡು ಬಿನ್ ದಿಳ್ಯೆಪ್ಪ, ಹಲವಾಗಲು | 40620302001621 | 45,528–00+ಅನ್ವಯಿಸುವ ಬಡ್ಡಿ |
| 3 | ಶ್ರೀ ಮಂಜಪ್ಪ ಎ. ಬಿನ್ ಚೌಡಪ್ಪ, ಅರಸನಾಳು | 40620302002321 | 58,632–00+ಅನ್ವಯಿಸುವ ಬಡ್ಡಿ |
| 4 | ಶ್ರೀಮತಿ ರೇಖಾ ಕೆ. ಬಿನ್ ದುರ್ಗಪ್ಪ, ಕುಂಚೂರು. | 40620302002421 | 31,922–00+ಅನ್ವಯಿಸುವ ಬಡ್ಡಿ |
| 5 | ಶ್ರೀ ಕೊಟ್ರೇಶ ಚಿಕ್ಕಬಿದರಿ ಬಿನ್ ಸೋಮಲಿಂಗಪ್ಪ ಸಿ., ಕುಂಚೂರು. | 40620302004621 | 45,396–00+ಅನ್ವಯಿಸುವ ಬಡ್ಡಿ |
| 6 | ಶ್ರೀಮತಿ ಹೂವಕ್ಕ ಕೋಂ. ನಾಗರಾಜಪ್ಪ, ಕುಂಚೂರು. | 40620302007521 | 13,373–00+ಅನ್ವಯಿಸುವ ಬಡ್ಡಿ |
| 7 | ಶ್ರೀಮತಿ ನೀಲಪ್ಪರ ಶಿಲ್ಪ ಕೋಂ. ಸುರೇಶ್, ನಿಟ್ಟೂರು. | 40620302009221 | 42,366–00+ಅನ್ವಯಿಸುವ ಬಡ್ಡಿ |
| 8 | ಶ್ರೀ ಸಿದ್ದಪ್ಪ ಬಿನ್ ಸೋಮಲಿಂಗಪ್ಪ, ನಿಟ್ಟೂರು. | 40620302010621 | 50,455–00+ಅನ್ವಯಿಸುವ ಬಡ್ಡಿ |
| 9 | ಶ್ರೀ ಸಂತೋಷ್‌ಕುಮಾರ್ ಬಿನ್ ಲಕ್ಷ್ಮಪ್ಪ ಎಂ., ಕುಂಚೂರು | 40620302014721 | 26,182–00+ಅನ್ವಯಿಸುವ ಬಡ್ಡಿ |
| 10 | ಶ್ರೀಮತಿ ರೇಣುಕವ್ವ ಕೋಂ. ಶಿವಜಪ್ಪ, ನಿಟ್ಟೂರು. | 40620302014921 | 49,135–00+ಅನ್ವಯಿಸುವ ಬಡ್ಡಿ |
| 11 | ಶ್ರೀ ಸೋಮಲಿಂಗಪ್ಪ ಬಿನ್ ಹನುಮಂತಪ್ಪ, ನಿಟ್ಟೂರು. | 40620302016021 | 32,733–00+ಅನ್ವಯಿಸುವ ಬಡ್ಡಿ |
| 12 | ಶ್ರೀ ನೀಲಪ್ಪರ ಹನುಮಂತಪ್ಪ ಬಿನ್ ಗಂಗಪ್ಪ, ನಿಟ್ಟೂರು. | 40620302016921 | 60,200–00+ಅನ್ವಯಿಸುವ ಬಡ್ಡಿ |
| 13 | ಶ್ರೀಮತಿ ಭಾಗ್ಯಮ್ಮ ಭಟ್ಯಪ್ಪರ ಕೋಂ. ನಾಗರಾಜ ಬಿ., ಹಲವಾಗಲು | 40620302020021 | 22,900–00+ಅನ್ವಯಿಸುವ ಬಡ್ಡಿ |
| 14 | ಶ್ರೀ ವೀರಣ್ಣ ಅರ್ಕಾಚಾರಿ ಬಿನ್ ಮುರುಜಡೇಶ್ವರ, ಹಲವಾಗಲು | 40620302022021 | 37,683–00+ಅನ್ವಯಿಸುವ ಬಡ್ಡಿ |
| 15 | ಶ್ರೀಮತಿ ಕೆಂಚಮ್ಮ ಕರಡಿ ಕೋಂ. ಕೆಂಚಪ್ಪ, ಹಲವಾಗಲು | 40620302022221 | 27,111–00+ಅನ್ವಯಿಸುವ ಬಡ್ಡಿ |
| 16 | ಶ್ರೀ ಸಂಜೀವಪ್ಪ ಎನ್. ಬಿನ್ ಸೋಮಪ್ಪ ಎನ್., ಕುಂಚೂರು | 40620302022521 | 36,877–00+ಅನ್ವಯಿಸುವ ಬಡ್ಡಿ |
| 17 | ಶ್ರೀ ಶಿವಾನಂದಪ್ಪ ಬಿನ್ ನಾಗಪ್ಪ, ತಾವರಗುಂದಿ | 40620302023321 | 48,761–00+ಅನ್ವಯಿಸುವ ಬಡ್ಡಿ |
| 18 | ಶ್ರೀಮತಿ ರತ್ನಮ್ಮ ಕಂಚೀಕೆರೆ ಕೋಂ ಆನಂದಪ್ಪ, ಹಲವಾಗಲು | 40620302024621 | 51,966–00+ಅನ್ವಯಿಸುವ ಬಡ್ಡಿ |
| 19 | ಶ್ರೀ ಮುಜೀಬ್ ರೆಹಮಾನ್ ಮಾಲ್ದಾರ್ ಬಿನ್ ಇಮಾಂಸಾಬ್, ಕುಂಚೂರು | 40620302080020 | 42,670–00+ಅನ್ವಯಿಸುವ ಬಡ್ಡಿ |
| 20 | ಶ್ರೀ ಮೋಟೆಪ್ಪನವರ್ ನೂರುಲ್ಲಾ ಬಿನ್ ಹಸನ್‌ಮಿಯಾ, ಕುಂಚೂರು | 40620302040020 | 23,665–00+ಅನ್ವಯಿಸುವ ಬಡ್ಡಿ |
| 21 | ಶ್ರೀ ಅಣ್ಣಪ್ಪ ವಿ. ಬಿನ್ ಪುಂಡಲೀಕಪ್ಪ, ಹಲವಾಗಲು | 40620302058921 | 36,644–00+ಅನ್ವಯಿಸುವ ಬಡ್ಡಿ |

ಸ್ಥಳ : ಹಲವಾಗಲು
ದಿನಾಂಕ : 20-07-2022

ಸಹಿ/– ಕರ್ನಾಟಕ ಗ್ರಾಮೀಣ ಬ್ಯಾಂಕ್
ಹಲವಾಗಲು ಶಾಖೆ

# ಬಸಿಯದಿದ್ದರೆ ಭೂಮಿಯ ಜಲ-ಅಡಿಕೆ ತೋಟಗಳಿಗೆ ಕೊನೆಗಾಲ

ನೀರು ಜೀವ ಜಲ. ಭೂಮಿಯ ಮೇಲಿನ ಸಕಲ ಜೀವರಾಶಿಗಳಿಗೂ ನೀರು ಅತೀ ಅಗತ್ಯ. ಎಲ್ಲಾ ಬೆಳೆಗಳಿಗೂ ಸಂಜೀವಿನಿ. ಕೆಲ ಬೆಳೆಗಳಿಗೆ ನೀರು ಹೆಚ್ಚಿನ ಪ್ರಮಾಣದಲ್ಲಿ ಬೇಕಾದರೆ, ಇನ್ನೂ ಕೆಲವು ಬೆಳೆಗಳಿಗೆ ಅತಿ ಕಡಿಮೆ ಅವಶ್ಯಕತೆ. ಇಂದು ನೀರಾವರಿ ಜಮೀನುಗಳೆಲ್ಲ ಬಹಳ ಬೇಗ ಕೃಷಿಯಿಂದ ಮುಕ್ತವಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಜಿಲ್ಲೆಯ ಬಹುತೇಕ ಕಡೆ ಭತ್ತ ಬೆಳೆಯುವ ಜಮೀನುಗಳೆಲ್ಲ ಮುಂದೆ ನಿರ್ಜೀವ ಪ್ರದೇಶವಾಗುವುದರಲ್ಲಿ ಯಾವುದೇ ಅನುಮಾನ ಇಲ್ಲ. ಇದಕ್ಕೆ ನಮ್ಮ ರೈತರ ಜೀವನಾಡಿ ಬೆಳೆ ಅಡಿಕೆ ಹೊರತೇನಲ್ಲ. ಇಂದು ನಮ್ಮ ಅಡಿಕೆ ಬೆಳೆಗಾರರ ಸಾಕಷ್ಟು ಸಮಸ್ಯೆಗಳಿಗೆ ನೀರೇ ಕಾರಣವೆಂದು ಗೊತ್ತಿಲ್ಲ.

ಈ ಬಾರಿ ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗಿದೆ. ಭದ್ರೆಯ ಒಡಲು ಸಹ ಅವಧಿಗೂ ಮುನ್ನ ತುಂಬಿದೆ. ಕೆರೆ, ಕಟ್ಟೆಗಳು ತುಂಬಿ ಅಂತರ್ಜಲ ಮಟ್ಟ ಉತ್ತಮ ಸ್ಥಿತಿಯಲ್ಲಿದೆ. ಆದರೆ ನೀರಿನ ಬಗ್ಗೆ ನಮ್ಮ ರೈತರಿಗೆ ಇನ್ನೂ ಹೆಚ್ಚಿನ ಅರಿವು ಬೇಕಾಗಿರುವುದು ಅಗತ್ಯ. ಯಾವುದೇ ಬೆಳೆಗೆ ನೀರಿನ ಅವಶ್ಯಕತೆ ನಿರ್ಧರಿಸುವುದು ಎರಡು ಅಂಶಗಳಿಂದ. ಒಂದು ಭೂಮಿಯ ಮಣ್ಣಿನ ರಚನೆ ಮತ್ತು ಇನ್ನೊಂದು ವಾತಾವರಣದ ಉಷ್ಣಾಂಶ. ಆದರೆ ಬಹಳಷ್ಟು ರೈತರು ತಮ್ಮ ಬೆಳೆಗಳಿಗೆ ನೀರನ್ನು ನೀಡುವಾಗ ಈ ಅಂಶಗಳನ್ನು ಮರೆತಿರುವುದು ದುರದೃಷ್ಟಕರ. ಮಣ್ಣಿನ ಭೌತಿಕ ಗುಣಗಳಾದ ನೀರು ಇಂಗುವಿಕೆ, ಮಣ್ಣಿನ ರಚನೆ, ತೇವಾಂಶ ಹಿಡಿದು ಕೊಳ್ಳುವ ಸಾಮರ್ಥ್ಯ, ಕಣಗಳ ರಚನೆ ಹಾಗೂ ಉಸಿರಾಟದ ರಂಧ್ರಗಳು ಯಾವುದೇ ಬೆಳೆಯ ಬೆಳವ ಣಿಗೆಯನ್ನು ನಿರ್ಧರಿಸುವ ಅಂಶಗಳು. ಮೇಲಿನ ಪ್ರತಿಯೊಂದು ಅಂಶವು ನೀರಿನ ಪ್ರಮಾಣವನ್ನು ನಿರ್ಧರಿಸುವ ಗುಣಗಳನ್ನು ಹೊಂದಿರುತ್ತವೆ.

ಇತ್ತೀಚಿಗೆ ಜಿಲ್ಲೆಯಲ್ಲಿ ಅಡಿಕೆ ಬೆಳೆಯ ವಿಸ್ತೀರ್ಣ ತ್ವರಿತವಾಗಿ ಹೆಚ್ಚಾಗುತ್ತಿದೆ. ಗದ್ದೆ, ಜಮೀನುಗಳೆಲ್ಲ ಇಂದು ತೋಟಗಳಾಗಿ ಪರಿವರ್ತನೆಯಾಗುತ್ತಿವೆ. ಗದ್ದೆಗಳಲ್ಲಿ ತೋಟ ಮಾಡುವಾಗ ರೈತರು ನೀರಿನ ನಿರ್ವಹಣೆಯ ಬಗ್ಗೆ ನಿರ್ಲಕ್ಷತನ ಮಾಡುತ್ತಿರು ವುದು ಕಂಡು ಬಂದಿದೆ. ಗದ್ದೆ ಜಮೀನಿನಲ್ಲಿ ಮಣ್ಣಿನ ಕಣಗಳು ಅತಿ ಚಿಕ್ಕ ಕಣಗಳಾಗಿರುವುದರಿಂದ ನೀರನ್ನು ಹಿಡಿದುಕೊಳ್ಳುವ ಅಂಶ ಹೆಚ್ಚಾಗಿರುತ್ತದೆ. ಹಾಗೆಯೇ ನಾಟಿಗೂ ಮುನ್ನ ರೊಳ್ಳೆ ಹೊಡೆಯುವುದು ಸಹ ಇದಕ್ಕೆ ಕಾರಣ. ಭತ್ತದ ಬೆಳೆಗೆ ನೀರು ನಿಲ್ಲುವ ವಾತಾವರಣ ಬೇಕಾಗಿರುವುದರಿಂದ ರೊಳ್ಳೆಯಿಂದ ಮಣ್ಣಿನ ಕಣಗಳನ್ನು ಮುಚ್ಚುವ ಪ್ರಯತ್ನ ಮಾಡುತ್ತಾರೆ. ಆದರೆ ಮುಂದೆ ಅದೇ ಭೂಮಿಯಲ್ಲಿ ತೋಟ ಮಾಡುವಾಗ ಈ ಗಟ್ಟಿ ಪದರವನ್ನು ತೆಗೆಯುವುದು ಬಹಳ ಪ್ರಮುಖವಾದ ಅಂಶ.



ತೋಟ ಮಾಡುವಾಗ ಸುತ್ತಲೂ ಮಾಡುವ ಕಾಲುವೆ ನೀರು ಕಾಲುವೆ. ಬೇರೆ ಹೊಲದಿಂದ ನೀರು ಒಳ ಬರಬಾರದು ಮತ್ತು ಬಂದ ನೀರು ಸರಾಗವಾಗಿ ಹೊರ ಹೋಗಬೇಕು ಎಂಬುದು ಅದರ ಉದ್ದೇಶ. ಆದರೆ ಬಹಳಷ್ಟು ರೈತರು ಅದನ್ನೇ ಬಸಿ ಗಾಲುವೆ ಎಂದು ತಿಳಿದಿರುವುದು ದುರದೃಷ್ಟಕರ. ನಿಮ್ಮ ಹೊಲದಲ್ಲಿರುವ ಹೆಚ್ಚಿನ ತೇವಾಂಶವನ್ನು ಹೊರಹಾಕುವ ಪ್ರಕ್ರಿಯೆ ಬಸಿಗಾಲುವೆ. ಗದ್ದೆಯಲ್ಲಿ ತೋಟ ಮಾಡುವಾಗ ಬಸಿಗಾಲುವೆಗಳ ನಿರ್ಮಾಣ ಬಹಳ ಪ್ರಮುಖ ಅಂಶ.

ಬಸಿಗಾಲುವೆ ನಿರ್ಮಾಣ ಪ್ರತಿ ಹೊಲದ ಇಳಿಜಾರಿನ ಮೇಲ್ಮೈ ಮತ್ತು ಮಣ್ಣಿನ ರಚನೆಯನ್ನು ಅವಲಂಬಿಸಿರುತ್ತದೆ. ಬಸಿದ ನೀರು ಹೊರ ಹೋಗಲು ಕೆಲವು ರೈತರ ಹೊಲಗಳಲ್ಲಿ ಅವಕಾಶವಿದ್ದರೆ, ಇನ್ನೂ ಕೆಲವರಿಗೆ ಇದು ಕಷ್ಟ ಸಾಧ್ಯ. ಇಂತಹ ಸಂದರ್ಭದಲ್ಲಿ ರೈತರು ತೆರೆದ ಬಸಿಗಾಲುವೆಗಳನ್ನು ಮಾಡಿರುವುದನ್ನು ಕಂಡಿದ್ದೇವೆ. ಆದರೆ ಪ್ರತಿ ವರ್ಷ ಇವುಗಳ ನಿರ್ವಹಣೆ ಬಹಳ ಮುಖ್ಯ. ಕೆಲವು ರೈತರು ಮಣ್ಣಿನ ಪೈಪುಗಳಿಂದ ಮತ್ತೆ ಕೆಲವರು ಪ್ಲಾಸ್ಟಿಕ್ ರಂಧ್ರಗಳಿಂದ ಕೂಡಿದ ಪೈಪು ಗಳಿಂದ ಬಸಿಗಾಲುವೆಯನ್ನು ಮಾಡುವುದನ್ನು ನೋಡಿದ್ದೇವೆ. ಆದರೆ ನೀರು ಹೊರ ಹೋಗಲು ಜಾಗವಿಲ್ಲದವರು ತೆರೆದ ಕಾಲುವೆಗಳನ್ನು ಜೋಡಿಸಿ ತೋಟದ ಕೊನೆಗೆ ನೀರಿನ ಹೊಂಡವನ್ನು ಮಾಡಿ ಅದರಿಂದ ಮೋಟಾರ್ ಪಂಪ್‌ಸೆಟ್ ಮೂಲಕ ನೀರನ್ನು ಹೊರ ಹಾಕುವುದನ್ನೂ ಸಹ ನಾವು ಕಂಡಿದ್ದೇವೆ.

ಸಹಜವಾಗಿ ಕೆಲ ರೈತರು ಮಾತನಾಡುವುದು ಹೀಗೆ. ನಮ್ಮ ಹೊಲದಲ್ಲಿ ನೀರೇ ನಿಲ್ಲುವುದಿಲ್ಲ. ಮಳೆಯಾದ ನಂತರದ ದಿನ ಹೊಲಕ್ಕೆ ಹೋದರೆ ಕಾಲಿಗೆ ಮಣ್ಣು ಹತ್ತುವುದಿಲ್ಲವೆಂದು. ಇಲ್ಲಿ ಅವರು ಮಣ್ಣಿನ ಮೇಲಿನ ಹಸಿಯನ್ನು ಪರಿಗಣಿಸಿದರೇ ಹೊರತು ಒಳಗಿನ ಬಸಿಯನ್ನಲ್ಲ. ಅಡಿಕೆ ಬೇರುಗಳು ತುಂಬಾ ಸಮಯ ನೀರಿನಲ್ಲಿ ಮುಳುಗಡೆಯಾದಷ್ಟು ಗಿಡಗಳಿಗೆ ಉಸಿರಾಟದ ತೊಂದರೆಯಾಗುತ್ತದೆ. ಅತೀ ಹೆಚ್ಚು ತೇವಾಂಶವಿದ್ದಾಗ ಪೋಷಕಾಂಶಗಳ ಹೀರುವಿಕೆಯು ಕೂಡ ನಿಂತು ಹೋಗುತ್ತದೆ. ಇಂತಹ ಸಂದರ್ಭಗಳಲ್ಲಿ ಗಿಡಗಳು ಹಳದಿಯಾಗುವುದು, ಬಿಳಿ ಬಣ್ಣಕ್ಕೆ ತಿರುಗುವುದನ್ನು ನಾವು ಕಾಣುತ್ತೇವೆ.

ಜಿಲ್ಲೆಯ ಬಸವಾಪಟ್ಟಣ, ಕುಂದೂರು, ತ್ಯಾವಣಿಗೆ ಮತ್ತು ಮಾಯಕೊಂಡ ಹೋಬಳಿಗಳಲ್ಲಿ ಈ ಸಮಸ್ಯೆ ಅಧಿಕ. ಇಲ್ಲಿ ನೀರೇ ತೋಟಗಳಿಗೆ ಶತ್ರು. ಕಾಕತಾಳೀಯವಂತೆ ಈ ವರ್ಷ ಅತ್ಯಧಿಕ ಅಡಿಕೆ ನಾಟಿಯಾಗಿರುವುದು ಇದೇ ಪ್ರದೇಶದಲ್ಲಿ. ಈ ಭಾಗದ ರೈತರು ತೋಟಕ್ಕೂ ಮುನ್ನ ಬಸಿಗಾಲುವೆ ಮಾಡುವುದು ಗದ್ದೆ ಜಮೀನಿನಲ್ಲಿ ಅನಿವಾರ್ಯ. ಇಲ್ಲವಾದರೆ ಪ್ರತಿವರ್ಷ ಶೀತದಿಂದ 50-100 ಹೊಸ ಗಿಡಗಳ ನಾಟಿ ಅನಿವಾರ್ಯ. ಕೆಲವು ಕಡೆ ಕಾಡಾ ಪ್ರದೇಶದ ವ್ಯಾಪ್ತಿಯಲ್ಲಿ ಬಸಿಗಾಲುವೆ ಯೋಜನೆ ಜಾರಿಯಲ್ಲಿದೆ. ಕೆಲವು ಪ್ರದೇಶಗಳು ಇನ್ನೂ ವ್ಯಾಪ್ತಿಗೆ ಬರದಿರುವ ಕಾರಣ, ಸೌಲಭ್ಯ ಲಭ್ಯವಿರುವುದಿಲ್ಲ. ಆದರೆ ಬಸಿಗಾಲುವೆ ನಿರ್ಮಾಣ ವಂತು ಸ್ವಂತ ಖರ್ಚಿನಿಂದ ಮಾಡಿದರೆ ಉತ್ತಮ.

ಈಗಾಗಲೇ ಶೀತ ಜಾಸ್ತಿ ಇರುವ ತೋಟಗಳಲ್ಲಿ ಅಡಿಕೆ ಕಾಯಿಗಳು ಉದುರುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಹಾಗೆಯೇ ಅಂತಹ ಜಮೀನಿನಲ್ಲಿ ಇಂಗಾರ ಕೊಳೆ ರೋಗದ ಬಾಧೆಯು ಹೆಚ್ಚುತ್ತಿದೆ. ಹಾಗಾಗಿ ಮಣ್ಣಿನ ರಚನೆ ಹಾಗೂ ವಾತಾವರಣದ ಉಷ್ಣಾಂಶಕ್ಕೆ ಅನುಗುಣವಾಗಿ ನೀರನ್ನು ಕೊಡಬೇಕು. ಮರಳು ಮಿಶ್ರಿತ ಕೆಂಪು ಮಣ್ಣಿನಲ್ಲಿ ನಮಗೆ 8-10 ದಿನಗಳಿಗೊಮ್ಮೆ ನೀರು ಬೇಕಾಗಬಹುದು. ಹಾಗೆಯೇ ಕಪ್ಪು ಭೂಮಿಯಲ್ಲಿ 12-15 ದಿನಗಳಿಗೊಮ್ಮೆ ನೀರು ಬೇಕಾಗುವುದು. ಯಾರು ತೋಟದಲ್ಲಿ ಮಿತಯಾಗಿ ನೀರು ಬಳಸುವರೋ ಅವರಲ್ಲಿ ಸಮಸ್ಯೆಗಳು ತುಂಬಾ ಕಡಿಮೆ.

ತೋಟಗಳಲ್ಲಿ ಪ್ರಮುಖವಾಗಿ ನೀರನ್ನು ಹಾಯಿಸುವ ಪದ್ಧತಿ, ಹನಿ ನೀರಾವರಿ ಮತ್ತು ತುಂತುರು ನೀರಾವರಿ ಪದ್ಧತಿ ರೂಢಿಯಲ್ಲಿದೆ. 8-10 ವರ್ಷಗಳಿಗೊಮ್ಮೆ ಟ್ಯಾಂಕರ್ ನೀರಾವರಿಯೂ ಜಾರಿಯಾಗುತ್ತದೆ. ತೋಟ ಮಾಡುವಾಗ ಎಲ್ಲಾ ರೈತರು ಮೊದಲು ಮಾಡುವ ಕೆಲಸ ಬೋರ್ ವೆಲ್. ಹಾಗೆ ಯೋಚಿಸಿ 20,000 ಎಕರೆ ಅಡಿಕೆ ಬೆಳೆ ವಿಸ್ತೀರ್ಣ ಹೆಚ್ಚಾದರೆ ಕನಿಷ್ಠ ಎರಡು ಎಕರೆಗೆ ಒಂದು ಬೋರ್ ವೆಲ್ ಪರಿಗಣಿಸಿದರೆ ಸುಮಾರು 10,000 ಬೋರ್‌ವೆಲ್‌ಗಳು ಪ್ರತಿ ವರ್ಷ ಹೆಚ್ಚಾಗುತ್ತದೆ. ಭೂಮಿಯ ಅಂತರ್ಜಲ ಮಟ್ಟವನ್ನು ಖಾಲಿ ಮಾಡಲು ಇದೊಂದು ಉದಾಹರಣೆಯೇ ಸಾಕು. ಈಗೇನೋ ಮಳೆ ಇದೆ, ಕೆರೆ ಕಟ್ಟೆಗಳೆಲ್ಲ ತುಂಬಿವೆ. ಕಾಲನ ಚಕ್ರದಲ್ಲಿ ಬರಗಾಲ ಆವರಿಸಿಕೊಂಡರೆ ನಮ್ಮ ರೈತರ ಪಾಡೇನಾಗುವುದು ಯೋಚಿಸಿ. ಹಾಗಾಗಿ ನಿಮಗೆ ಖಚಿತ ನೀರಿನ ಮೂಲ ಎಷ್ಟಿದೆಯೋ ಅಷ್ಟು ತೋಟ ಮಾಡಿದರೆ ಉತ್ತಮ.

ಮೊದಲು ಕೆರೆ ಖಾಲಿ ಇದ್ದಾಗ ಕೆರೆ ಅಚ್ಚುಕಟ್ಟು ಭೂಮಿಗಳು ಶೀತದಿಂದ ಹೊರತಾಗಿದ್ದವು. ಇಂದು ಅದೇ ಪ್ರದೇಶಗಳಲ್ಲಿ ನೀರು ಬೋರ್‌ಗಳಿಂದ ಉಕ್ಕುತ್ತಿರುವುದನ್ನು ನಾವು ಕಾಣುತ್ತಿ ದ್ದೇವೆ. ಹಸಿರು ತೋಟಗಳು ಕ್ರಮೇಣ ಹಳದಿ ತೋಟಗಳಾಗು ತ್ತಿವೆ. ಅಂತಹ ಜಮೀನುಗಳಲ್ಲಿ ಇಂದು ಬಸಿಗಾಲುವೆಯೊಂದೇ ಉತ್ತರ. ಶೀಘ್ರವೇ ಅದನ್ನು ಜಾರಿಗೆ ತಂದರೆ ಮುಂದಿನ ವರ್ಷ ಉತ್ತಮ ಫಸಲು ಪಡೆಯಬಹುದು. ಇಲ್ಲವಾದರೆ ಗಿಡ ಉಳಿಸಿ ಕೊಳ್ಳುವುದು ಕಷ್ಟವಾಗುತ್ತದೆ. ಈ ಬಗ್ಗೆ ರೈತರು ಎಚ್ಚೆತ್ತುಕೊಳ್ಳುವುದು ಅಗತ್ಯ.

ಭೂಮಿಯ ಮೇಲಿರುವ ಎಲ್ಲಾ ಜೀವರಾಶಿಗಳಿಗೆ ನೀರು ಮೂಲಭೂತ ಅವಶ್ಯಕತೆ. ಪರಿಸರ ವ್ಯವಸ್ಥೆಯ ಅವಿಭಾಜ್ಯ ಅಂಗ ಈ ನಮ್ಮ ನೈಸರ್ಗಿಕ ಸಂಪನ್ಮೂಲ. ಇದರ ರಕ್ಷಣೆ, ಸಂರಕ್ಷಣೆ ಮಾನವನ ಚಟುವಟಿಕೆಗಳ ಮೇಲೆ ಅವಲಂಬಿತ. ನೀರನ್ನು ಅವಶ್ಯಕತೆಗೆ ತಕ್ಕಷ್ಟು ಬಳಸಿ, ಉಳಿದುದನ್ನು ಉಳಿಸಿ.

**- ಬಸವನಗೌಡ ಎಂ.ಜಿ., ತೋಟಗಾರಿಕೆ ವಿಜ್ಞಾನಿಗಳು, ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ.**

## ವಿವಿಧ ನಿಗಮಗಳಡಿ ಸೌಲಭ್ಯಕ್ಕಾಗಿ ಅರ್ಜಿ

ದಾವಣಗೆರೆ ಜು.20 - ಡಾ.ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ, ಅಲೆಮಾರಿ ಅಥವಾ ಅರೆ ಅಲೆಮಾರಿ ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಸಮುದಾಯಗಳ ಅಭಿವೃದ್ಧಿ ಕೋಶದಿಂದ ಅನುಷ್ಠಾನಗೊಳಿಸುತ್ತಿರುವ ಸ್ವಯಂ ಉದ್ಯೋಗ ಯೋಜನೆ (ನೇರ ಸಾಲ) ಐ.ಎಸ್.ಬಿ. ಯೋಜನೆ (ಇ.ವಿ. ಮತ್ತು ಇತರೆ ದ್ವಿಚಕ್ರ ವಾಹನ ಖರೀದಿ, ಸರಕು ವಾಹನ ಖರೀದಿ ಹಾಗೂ ಇತರೆ ಚಟುವಟಿಕೆಗಳಿಗೆ ಬ್ಯಾಂಕುಗಳ ಸಹಯೋಗದೊಂದಿಗೆ) ಎಂ.ಸಿ.ಎಫ್. ಪ್ರೇರಣಾ ಯೋಜನೆ, ಗಂಗಾ ಕಲ್ಯಾಣ ಯೋಜನೆಯಡಿ ಮತ್ತು ಭೂ ಒಡೆತನ ಯೋಜನೆಗಳಡಿ 2022-23ನೇ ಸಾಲಿನಲ್ಲಿ ಅರ್ಹ ಫಲಾಪೇಕ್ಷಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಅರ್ಹ ಫಲಾಪೇಕ್ಷಿಗಳು ಸರ್ಕಾರದ ವೆಬ್‌ಸೈಟ್ https://suvidha.karnataka.gov.in ರ ಮೂಲಕ ಆಗಸ್ಟ್ 20 ರೊಳಗಾಗಿ ಅಪ್‌ಲೋಡ್ ಮಾಡಬಹುದು. ವಿವರಕ್ಕೆ ಡಾ.ಬಿ. ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ನಂ.337/16ಎ-16 ಗಣೇಶ್ ಲೇಔಟ್, 1ನೇ ಕ್ರಾಸ್, ಪಿ.ಬಿ.ರಸ್ತೆ ದಾವಣಗೆರೆ ಇಲ್ಲಿಗೆ ಸಂಪರ್ಕಿಸಬಹುದು.

# ಸರ್ಕಾರಿ ಶಾಲೆಯ ವಿದ್ಯಾಭ್ಯಾಸದಿಂದ ಮನುಷ್ಯ ಎತ್ತರದ ಸ್ಥಾನಕ್ಕೆ

### ಹೊಳೆಸಿರಿಗೆರೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಕ್ಕೆಗೊಂದಿ ರುದ್ರಗೌಡ ಅಭಿಮತ

ಮಲೇಬೆನ್ನೂರು, ಜು. 20- ಪೋಷಕರು ತಮ್ಮ ಮಕ್ಕಳನ್ನು ಕಾನ್ವೆಂಟ್ ಶಾಲೆಗೆ ಕಳುಹಿಸುವ ಬದಲು ಸರ್ಕಾರಿ ಶಾಲೆಗೆ ಕಳುಹಿಸಿ ಎಂದು ಕನ್ನಡಪರ ಹೋರಾಟಗಾರ ಎಕ್ಕೆಗೊಂದಿ ಎಚ್.ಬಿ.ರುದ್ರಗೌಡ ಮನವಿ ಮಾಡಿದರು.

ಹೊಳೆಸಿರಿಗೆರೆ ಗ್ರಾಮದ ಎಲ್ಲಾ ಏಳು ಅಂಗನವಾಡಿ ಕೇಂದ್ರಗಳ 68 ಮಕ್ಕಳಿಗೆ ಸಾರ್ವಜನಿಕ ಆಸ್ಪತ್ರೆ, ಹರಿಹರ ಹಾಗೂ ಬಾಯ್ಸ್ ಮತ್ತು ಸಮರ್ಪಣಾ ಗ್ರಾಮೀಣಾಭಿವೃದ್ಧಿ ಸಂಸ್ಥೆ ಹಮ್ಮಿಕೊಂಡ ಸ್ಲೇಟ್, ಬಳಪ ವಿತರಣಾ ಸಮಾರಂಭದಲ್ಲಿ ಮಾತನಾಡಿದರು.

ಕನ್ನಡದ ಸರ್ಕಾರಿ ಶಾಲೆಯ ವಿದ್ಯಾಭ್ಯಾಸವು ಮನುಷ್ಯನನ್ನು ಎತ್ತರದ ಸ್ಥಾನಕ್ಕೆ ಕರೆದೊಯ್ಯುತ್ತದೆ. ಆಂಗ್ಲ ಮಾಧ್ಯಮ ಶಾಲೆ ಗಾರ್ಮೆಂಟ್‌ನಲ್ಲೂ ಉದ್ಯೋಗ ಗಿಟ್ಟಿಸುತ್ತದೆ ಎಂದು ಅವರು ಗೇಲಿ ಮಾಡಿದರು.




ಮೇಲ್ವಿಚಾರಕಿ ಲಕ್ಷ್ಮಿ ಮಾತನಾಡಿ, ಅತ್ತೆ-ಸೊಸೆಯನ್ನು ಮುಗಿಸಲು ಸುಫಾರಿ ಕೊಡುವ ಧಾರಾವಾಹಿಯನ್ನು ನೋಡದೇ, ಸರ್ಕಾರಿ ಯೋಜನೆಗಳನ್ನು ಬಳಸಿಕೊಂಡು ಸುಂದರ, ನೆಮ್ಮದಿ ಜೀವನ ನಡೆಸಬೇಕೆಂದರು. ಆಹಾರಕ್ಕೆ ಆದ್ಯತೆ ನೀಡಿದಲ್ಲಿ ಮಕ್ಕಳ ಆರೋಗ್ಯ ಉತ್ತಮವಾಗಿರುತ್ತದೆ. ಪೋಷಣ್ ಅಭಿಯಾನದಲ್ಲಿ 1000 ದಿನಗಳು ಆರೋಗ್ಯ ಮಾಹಿತಿ ತಿಳಿಯಲು ತಾಯಂದಿರು ತಾತ್ಸಾರ ಮಾಡಬಾರದು ಎಂದು ಹೇಳಿದರು.

ಎಳೆಹೊಳೆ ಗ್ರಾ.ಪಂ ಪಿಡಿಓ ಅರವಿಂದ್ ಮಾತನಾಡಿ, ಟಿವಿ ವೀಕ್ಷಣೆ ಹವ್ಯಾಸವು ಭವಿಷ್ಯದಲ್ಲಿ ಮಕ್ಕಳಿಗೆ ಪರಿಣಾಮ ಬೀರುತ್ತದೆ. ಅಲ್ಲದೇ ಮಕ್ಕಳ ಸ್ಮರಣ ಶಕ್ತಿಯನ್ನು ಕಳೆಯುತ್ತದೆ ಎಂದರು.

ಪ್ರಾಥಮಿಕ ಆರೋಗ್ಯ ಕೇಂದ್ರದ ಡಾ. ಚೇತನ್, ಪತ್ರಕರ್ತ ಎಚ್.ಎಂ. ಸದಾನಂದ, ಸಲಹಾ ಸಮಿತಿ ಅಧ್ಯಕ್ಷರಾದ ಪವಿತ್ರ, ಶಾಲಿನಿ, ಅಂಗನವಾಡಿ ಕಾರ್ಯಕರ್ತರಾದ ಗಂಗಮಾಳಮ್ಮ, ಸಾಕಮ್ಮ, ಎಂ. ಅಂಬುಜಾ, ಎ. ಮಂಜಮ್ಮ ಪಿ.ಆರ್. ಶಶಿಕಲಾ, ಶಾಂತಾ ಪಾಟೀಲ್, ಹನುಮಂತಮ್ಮ ಮತ್ತು ಸಹಾಯಕಿಯರು ಉಪಸ್ಥಿತರಿದ್ದರು.

## ನಗರದಲ್ಲಿ 23 ರಂದು ಸಿದ್ಧ ಕಣ್ಣಿನ ಹನಿ

ದಾವಣಗೆರೆ, ಜು.20 - ಸ್ಥಳೀಯ ವಿದ್ಯಾ ನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ದಿನಾಂಕ 23ರ ಶನಿವಾರ ಬೆಳಿಗ್ಗೆ 10 ರಿಂದ 11 ರವರೆಗೆ ಉಚಿತವಾಗಿ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ.



ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದು.

ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ (94482-55 544), ಬಿ.ಎಸ್. ವೀರೇಶ್ (88676-91155), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42 713), ಎನ್.ಎಂ. ತಿಪ್ಪೇಸ್ವಾಮಿ (98868-74078) ಅವರನ್ನು ಸಂಪರ್ಕಿಸಬಹುದು.

# ಜಿಎಂಐಟಿಯಲ್ಲಿ ನಾಳೆ- ನಾಡಿದ್ದು 'ಮಲ್ಲಿಕಾ' ಕ್ರೀಡಾ- ಸಾಂಸ್ಕೃತಿಕ ಉತ್ಸವ

ದಾವಣಗೆರೆ, ಜು. 20- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಾಡಿದ್ದು ದಿನಾಂಕ 22 ಮತ್ತು 23 ರಂದು ಎರಡು ದಿನಗಳ ಕಾಲ 'ಮಲ್ಲಿಕಾ' ಕ್ರೀಡಾ ಮತ್ತು ಸಾಂಸ್ಕೃತಿಕ ಉತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಚಾರ್ಯ ಡಾ. ವೈ. ವಿಜಯ ಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

22 ರಂದು ಬೆಳಿಗ್ಗೆ 9 ರಿಂದ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ನಡೆಯಲಿದ್ದು, ಅಂದು ಸಂಜೆ ಕ್ರೀಡಾ ವಿಜೇತರಿಗೆ ಬಹುಮಾನ ವಿತರಿಸಲಾಗುವುದು. ಶ್ರೀಶೈಲ ಎಜುಕೇಶನಲ್ ಟ್ರಸ್ಟ್ ಸದಸ್ಯ ಜಿ.ಎಸ್. ಅನಿತ್‌ಕುಮಾರ್ ಅತಿಥಿಯಾಗಿ ಆಗಮಿಸಲಿದ್ದಾರೆ.

23 ರಂದು ಸಂಜೆ ಸಮಾರೋಪ ಸಮಾರಂಭ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ, ಹೆಸರಾಂತ ಸ್ಯಾಕ್ಸೋಫೋನ್ ವಾದಕ ಶ್ರೀಧರ್ ಸಾಗರ್, ಸರಿಗಮಪ ರಿಯಾಲಿಟಿ ಶೋ ಖ್ಯಾತಿಯ ವರ್ಣಾ ಚೌವ್ಹಾಣ್, ನೇಹಾ ಶಾಸ್ತ್ರಿ, ಅಶ್ವಿನ್ ಶರ್ಮ ಭಾಗವಹಿಸಲಿದ್ದು, ಜಿಎಂಐಟಿ ಚೇರ್ಮನ್ ಜಿ.ಎಂ. ಲಿಂಗರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ.

ಇದೇ ವೇಳೆ ಕಾಲೇಜಿನ 12 ಶೈಕ್ಷಣಿಕ ಸಾಧಕರಿಗೆ ಬಂಗಾರದ ಪದಕ, ಪಿಹೆಚ್‌ಡಿ ಪಡೆದ ಪ್ರಾಧ್ಯಾಪಕರನ್ನು ಗೌರವಿಸಲಾಗುವುದು. 25 ವಿದ್ಯಾರ್ಥಿಗಳಿಗೆ ಬೆಳ್ಳಿ ಪದಕಗಳನ್ನು ಸಹ ವಿತರಿಸಲಾಗುವುದು ಎಂದು ಅವರು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಮಲ್ಲಿಕಾ ಕಾರ್ಯಕ್ರಮದ ಸಂಯೋಜಕ ಡಾ. ಬಿ.ಎಸ್. ಸುನಿಲ್ ಕುಮಾರ್, ತರಬೇತಿ ಮತ್ತು ಉದ್ಯೋಗ ವಿಭಾಗದ ಮುಖ್ಯಸ್ಥ ತೇಜಸ್ವಿ ಕಟ್ಟಿಮನಿ ಉಪಸ್ಥಿತರಿದ್ದರು.

## ಚಳಗೇರಿಯಲ್ಲಿ ನಾಳೆ 4 ಸಾವಿರ ಮಕ್ಕಳಿಗೆ ನೋಟ್‌ಬುಕ್, ಸ್ಕೂಲ್ ಬ್ಯಾಗ್ ವಿತರಣೆ

ರಾಣೇಬೆನ್ನೂರು, ಜು.20- ಸ್ಥಳೀಯ ಎಪಿಎಂಸಿ ಮಾಜಿ ಸದಸ್ಯ ಪರಮೇಶಪ್ಪ ಗೂಳಣ್ಣನವರ ಅಭಿಮಾನಿ ಬಳಗದ ವತಿಯಿಂದ ನಾಡಿದ್ದು ದಿನಾಂಕ 22ರಂದು ಬೆಳಗ್ಗೆ 11 ಗಂಟೆಗೆ ತಾಲ್ಲೂಕಿನ ಚಳಗೇರಿ ಗ್ರಾಮದ ಸಿಇಎಸ್ ಪ್ರೌಢಶಾಲೆ ಆವರಣದಲ್ಲಿ 6ರಿಂದ 10ನೇ ತರಗತಿವರೆಗಿನ 4 ಸಾವಿರ ಮಕ್ಕಳಿಗೆ ಉಚಿತವಾಗಿ ನೋಟ್‌ಬುಕ್ ಹಾಗೂ ಸ್ಕೂಲ್ ಬ್ಯಾಗ್ ಕಿಟ್ ವಿತರಣೆ ಮಾಡಲಾಗುವುದು.

ಚಳಗೇರಿ ಗ್ರಾಮದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಮೇಶಪ್ಪ ಗೂಳಣ್ಣನವರ, ಚಳಗೇರಿ ಗ್ರಾಮದ ಸುತ್ತಲಿನ 9 ಗ್ರಾಪಂ ವ್ಯಾಪ್ತಿಯಲ್ಲಿ ಬರುವ ಎಲ್ಲ ಸರ್ಕಾರಿ ಶಾಲೆಯ ಮಕ್ಕಳಿಗೆ ನೋಟ್‌ಬುಕ್ ಹಾಗೂ ಸ್ಕೂಲ್ ಬ್ಯಾಗ್ ವಿತರಣೆ ಮಾಡಲಾಗುವುದು ಎಂದು ತಿಳಿಸಿದರು.

ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ ನರಸಗೊಂಡರ, ಹುಚ್ಚಪ್ಪ ಮೇಡ್ಲೇರಿ, ಮಂಜುನಾಥ ಕಾಟಿ, ಮೈಲಪ್ಪ ಗೋಣಿಬಸಮ್ಮನವರ, ರಾಜು ಅಡಿವೆಪ್ಪನವರ, ಸೋಮಣ್ಣ ಗೌಡಶಿವಣ್ಣನವರ, ಬಸವರಾಜ ಚಳಗೇರಿ, ಪವನ ಮಲ್ಲಾಡದ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

## ನಗರದ ಜೈನ್ ಲೇಔಟ್‌ನಲ್ಲಿ ಗುರುವಂದನೆ



ದಾವಣಗೆರೆ, ಜು. 20- ನಗರದ ಜೈನ್ ಲೇಔಟ್ ನಲ್ಲಿ ಗುರುವಂದನಾ ಕಾರ್ಯಕ್ರಮ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಿಕ್ಷಕಿ ಸುಜಾತ ಹೊನ್ನಾಳಿ ಅವರನ್ನು ಸನ್ಮಾನಿಸಲಾಯಿತು. ಲೇಔಟ್‌ನ ಹಿರಿಯರಾದ ಶಶಿಕಲಾ ಬಡದಾಳರವರ ನೇತೃತ್ವದಲ್ಲಿ ಈ ಕಾರ್ಯಕ್ರಮ ಏರ್ಪಾಡಾಗಿತ್ತು.


**3 BHK ಸೆಮಿ ಫರ್ನಿಷ್ಡ್ ಫ್ಲಾಟ್ ಲೀಸ್‌ಗೆ ಇದೆ**
ವಿದ್ಯಾನಗರದ ಕೊನೆಯ ಬಸ್ ಸ್ಟಾಪ್ ಬಳಿ ಇರುವ ಅಪಾರ್ಟ್‌ಮೆಂಟ್‌ನಲ್ಲಿ.
95913 60143

**ಮನೆ ಬಾಡಿಗೆಗೆ ಸಿಗುತ್ತದೆ**
ಎಸ್.ಎಸ್ ಬಡಾವಣೆ 'ಬಿ' ಬ್ಲಾಕ್, 2ನೇ ಮೇನ್, ಡೋರ್ ನಂ. 3843ನಲ್ಲಿ ಎರಡು ಬೆಡ್ ರೂಂ (ಒಂದಕ್ಕೆ ಅಟ್ಯಾಚ್ Toilet), ಬೋರ್‌ವೆಲ್ ಮತ್ತು ಮುನ್ಸಿಪಲ್ ನೀರಿನ ಸೌಕರ್ಯವಿರುವ ಮೊದಲನೇ ಮಹಡಿ ಮನೆ ಬಾಡಿಗೆಗೆ ಸಿಗುತ್ತದೆ. (ಸಸ್ಯಹಾರಿಗಳಿಗೆ ಮಾತ್ರ) ಸಂಪರ್ಕಿಸಿ :
94839 89839, 93432 04969

**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
63647 83999

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮಳಿಗೆ ಬಾಡಿಗೆಗೆ ಇದೆ**
ಕೆ . ಬಿ . ಬಡಾವಣೆ ಲಾಯರ್ ರಸ್ತೆಯಲ್ಲಿ ಮೊದಲನೆಯ ಮಹಡಿಯಲ್ಲಿ 40×44 ಅಡಿ ಅಳತೆಯ, ಫರ್ನೀಚರ್ ಸಮೇತ ಎ.ಸಿ ಸೌಲಭ್ಯವಿರುವ ಮಳಿಗೆ ಬಾಡಿಗೆಗಿದೆ . ವಿಚಾರಿಸಿ:
ಮೊ .8892844854

**ಗಾರ್ಡನ್ ಕೆಲಸ ಮಾಡಲು ಬೇಕಾಗಿದ್ದಾರೆ**
ವಿದ್ಯಾನಗರ 2ನೇ ಬಸ್ ಸ್ಟಾಪ್ ಹತ್ತಿರ, ಗಾರ್ಡನ್ ಕೆಲಸ ಮಾಡಲು ಗಂಡಸರು / ಹೆಣ್ಣು ಮಕ್ಕಳು ಬೇಕಾಗಿದ್ದಾರೆ.
94810 38402, 99162 36521

**ಬೇಕಾಗಿದ್ದಾರೆ**
ನಮ್ಮ ಹಾರ್ಡ್‌ವೇರ್ಸ್ ಮತ್ತು ಪೇಂಟ್ಸ್ ಅಂಗಡಿಯಲ್ಲಿ ಸೇಲ್ಸ್ ಮಾಡಲು ಸೇಲ್ಸ್‌ಮನ್ ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ ಇದೆ.
ಆನಂದ್ ಹಾರ್ಡ್‌ವೇರ್ಸ್ & ಅಂಡ್ ಪೇಂಟ್ಸ್
ಮಂಡಿಪೇಟೆ, ದಾವಣಗೆರೆ.

**ರಿಜಿಸ್ಟರ್ ಆಗಿರದ ಆಸ್ತಿ**
ಮನೆ, ಸೈಟು, ಜಮೀನುಗಳ ಖರೀದಿ ರಿಜಿಸ್ಟರ್ ಆಗಿರದ ಆಸ್ತಿಗಳನ್ನು ನ್ಯಾಯಾಲಯದ ಮೂಲಕ ಕಾನೂನಿನ ಪ್ರಕಾರ ಡಿಕ್ರಿ ಮಾಡಿಸಿ ಕೊಡಲಾಗುವುದು
ಹೊನ್ನೂರಸ್ವಾಮಿ ವಾಂಜ್ರೆ
87926 04196

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್‌ಗಳು ಬೇಕಾಗಿದ್ದಾರೆ. ವಸತಿ ವ್ಯವಸ್ಥೆ ಇರುತ್ತದೆ.
ಸಂಪರ್ಕಿಸಿ : ಪಿ.ಜೆ.ಬಡಾವಣೆ, ಸಿ.ಜಿ.ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
ಮೊ: 98450-35710
7760739990

**ಜಮೀನು ಮಾರಾಟಕ್ಕಿದೆ**
ಹರಪನಹಳ್ಳಿ ತಾಲ್ಲೂಕು, ಕೊಟ್ಟೂರು ರಸ್ತೆ, ಚಿಗಟೇರಿ ಸರ್ಕಲ್ ಹತ್ತಿರದ ಲೋಲೇಶ್ವರ ಗ್ರಾಮದ ರಿ.ಸ.ನಂ.199/1, ಮೂರು ಎಕರೆ ಖುಷ್ಕಿ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ
Honnurswamy Vanjre
87926 04196

**ಅಕ್ಷಯ**
ಬೆಳ್ಳಿ ಮತ್ತು ಚಿನ್ನಾಭರಣಗಳ ಖರೀದಿ ಈ ದಿನ Online ಬೆಲೆಗೆ ಸಂಪರ್ಕಿಸಿ:
76193 28978

**ಷೇರು ಬಾಂಡ್ ಕಳೆದಿದೆ**
ದೇವೇಂದ್ರಪ್ಪ ಜೆ. ಬಿನ್ ರುದ್ರಪ್ಪ ಹೆಸರಿನಲ್ಲಿರುವ ದಾವಣಗೆರೆ ಶುಗರ್ ಕಂಪನಿ ಲಿ., ಸಂಖ್ಯೆ ನಂ. DSD0314ನ ಬಾಂಡ್ ದಿನಾಂಕ : 15.06.2022 ರಂದು ಮನೆ ಕ್ಲೀನ್ ಮಾಡುವಾಗ ಕಳೆದಿದೆ. ಸಿಕ್ಕವರು ಈ ಕೆಳಕಂಡ ಮೊ.ನಂ.ಗೆ ತಿಳಿಸಿರಿ.
ಫೋ. : 82173 25552

**ಷೇರು ಬಾಂಡ್ ಕಳೆದಿದೆ**
ಕುಬೇರಗೌಡ ಕೆ.ಜಿ. ಬಿನ್ ಮಲ್ಲಪ್ಪ ಹೆಸರಿನಲ್ಲಿರುವ ಕುಕ್ಕುವಾಡ ಶುಗರ್ ಕಂಪನಿ ಲಿ., ಸಂಖ್ಯೆ ನಂ. DSK115 SL 2238ರ ಬಾಂಡ್ ದಿನಾಂಕ : 05.07.2022 ರಂದು ಮನೆ ಕ್ಲೀನ್ ಮಾಡುವಾಗ ಕಳೆದಿದೆ. ಸಿಕ್ಕವರು ಈ ಕೆಳಕಂಡ ಮೊ.ನಂ.ಗೆ ತಿಳಿಸಿರಿ.
ಫೋ. : 81519 41337

**ಬೇಕಾಗಿದ್ದಾರೆ**
ಹರಿಹರ (ಗುತ್ತೂರು)ದಲ್ಲಿರುವ ಪೆಟ್ರೋಲ್ ಬಂಕ್‌ಗೆ ಸಂಜೆ ವೇಳೆ ಹುಡುಗರು ಬೇಕಾಗಿದ್ದಾರೆ.
80502 19547

**UPS ಮಾರಾಟಕ್ಕೆ**
3 KV ಆನ್‌ಲೈನ್ UPS ಉತ್ತಮ ಕೆಲಸದ ಸ್ಥಿತಿಯಲ್ಲಿದೆ.ಸಂಪರ್ಕಿಸಿ:
ಶೀತಲ್ ಡಯಾಗ್ನೋಸ್ಟಿಕ್ ಸೆಂಟರ್
4ನೇ ಮುಖ್ಯರಸ್ತೆ, 7ನೇ ಕ್ರಾಸ್, ಪಿ.ಜೆ.ವಿಸ್ತರಣೆ, ಚೇತನ ಹೋಟೆಲ್ ರಸ್ತೆ, ದಾವಣಗೆರೆ.
9448590794, 8073742133

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ಬೇಕಾಗಿದ್ದಾರೆ**
ಆಪೆ ಆಟೋ ಡೀಸೆಲ್, LPG, CNG ಪ್ಯಾಸೆಂಜರ್, ಗೂಡ್ಸ್ ಆಪೆ ಆಟೋ ಎಲ್‌ಪಿಜಿ ತ್ರಿಚಕ್ರ ವಾಹನಗಳ ಮಾರಾಟ ಮಾಡಲು ತಾಲ್ಲೂಕುವಾರು
ಸೇಲ್ಸ್ ಎಕ್ಸಿಕ್ಯೂಟಿವ್ಸ್-4
(ಅಭ್ಯರ್ಥಿಗಳು ಸ್ವಂತ ಬೈಕ್ ಹೊಂದಿರಬೇಕು.)
ವಿದ್ಯಾರ್ಹತೆ: SSLC to Degree.
ಆಕರ್ಷಕ ಸಂಬಳ + Incentive+TA, DA.
**ಬೇಕಾಗಿದ್ದಾರೆ**
ವರ್ಕ್‌ಷಾಪ್ ಸೂಪರ್‌ವೈಸರ್-2
(5 ವರ್ಷ ಅನುಭವ/ಫ್ರೆಶರ್‌ಗೂ ಸಹ ಆದ್ಯತೆ)
ಡೀಜಲ್ ಮೆಕ್ಯಾನಿಕ್-4
ಹೆಲ್ಪರ್ಸ್-4
ಅಭ್ಯರ್ಥಿಗಳು ದಾಖಲಾತಿಯೊಂದಿಗೆ ನೇರವಾಗಿ ಸಂಪರ್ಕಿಸಿ:
ಸಮಯ: ಮ. 3 ರಿಂದ 5
ಫೋನ್ /ಮೊಬೈಲ್ ವಿಚಾರಣೆ ಇರುವುದಿಲ್ಲ
ಗಣೇಶ ಮೋಟಾರ್
ಎಲ್.ಐ.ಸಿ. ಆಫೀಸ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ-6.

**14 ದಿನಗಳ ಪ್ರವಾಸ**
ಅಕ್ಟೋಬರ್ 31 ರಿಂದ ದಾವಣಗೆರೆಯಿಂದ ಕಾಶಿ ಪ್ರವಾಸ ರೈಲು ಮತ್ತು ವಿಮಾನದಲ್ಲಿ ದೆಹಲಿ, ಆಗ್ರಾ, ಪ್ರಯಾಗ್‌ರಾಜ, ಕಾಶಿ, ಅಯೋಧ್ಯ, ಹರಿದ್ವಾರ, ಹೃಷಿಕೇಶ್
ಗೀತಾ ಟ್ರಾವೆಲ್ಸ್, ದಾವಣಗೆರೆ.
ಎಸ್.ಎ. ರಾಜು.
94481 62499
99455 34966

**ಮನೆ ಬಾಡಿಗೆಗೆ ಇದೆ**
ಡಬಲ್ ಬೆಡ್ ರೂಂ ಹೌಸ್, ಬೋರ್ ಹಾಗೂ ಮುನ್ಸಿಪಲ್ ನೀರಿನ ಸೌಲಭ್ಯವಿದೆ. ಶ್ರೀಶೈಲ ನಿಲಯ ಡೋ. ನಂ. 5686/16 ಎಸ್.ಎಸ್. ಲೇಔಟ್ 'ಎ' ಬ್ಲಾಕ್, 16ನೇ ಮೇನ್, 3ನೇ ಕ್ರಾಸ್ ಹತ್ತಿರ, ಇಂಡೋರ್ ಸ್ಟೇಡಿಯಂ, ಕುಂದವಾಡ ಕೆರೆ, ದಾವಣಗೆರೆ.
ಮೊ .94803 42773
ಸಸ್ಯಹಾರಿಗಳಿಗೆ ಮಾತ್ರ

**AVOID MOSQUITOES**
Mosquito Net for Doors and windowsh, MDF Design Boards available.
SRI GOWRI ENTERPRISES
# 7C2, 4th Cross, Karur Industrial Area, Near D.C Office, P.B Road, Davangere.
72049 94628

**ಸೆಕ್ಯೂರಿಟಿ ಬೇಕಾಗಿದ್ದಾರೆ**
ಯೂನಿಕ್ ಸೆಕ್ಯೂರಿಟಿ ಸರ್ವೀಸ್ ದಾವಣಗೆರೆ.
ಸಂಪರ್ಕಿಸಿ
ಎಸ್.ಟಿ. ಸೋಮಶೇಖರ್
98803 37686

**ಬೇಕಾಗಿದ್ದಾರೆ**
ಹಿರಿಯ ಪ್ರಾಥಮಿಕ ಶಾಲೆಗೆ ಟೀಚರ್ಸ್ ಬೇಕಾಗಿದ್ದಾರೆ. ಹೆಣ್ಣು ಮಕ್ಕಳಿಗೆ ಆದ್ಯತೆ. PUC, BA, B.Ed, D.Ed, B.Sc
73537 37235, 82774 81196

**ಸೈಟುಗಳು ಮಾರಾಟಕ್ಕಿವೆ**
ಶಿವಗಂಗಾ ಕಲ್ಯಾಣ ಮಂಟಪ ಹಿಂಭಾಗ 40 ಅಡಿ ರಸ್ತೆಗೆ ಆಮರ್‌ನಾಥ ಲೇಔಟ್‌ನಲ್ಲಿ ಬಂಗ್ಲೆ ಸೈಟ್ ದಕ್ಷಿಣ ಭಾಗ 62x88 ಮತ್ತು 28x44 ಪಶ್ಚಿಮ ಭಾಗ ನಿಜಲಿಂಗಪ್ಪ ಲೇಔಟ್ ಪಶ್ಚಿಮ ಭಾಗ 30x30
98440 84229

**ಮಾರಾಟಕ್ಕಿದೆ**
ದಾವಣಗೆರೆಯಿಂದ 20 ರಿಂದ 25 ಕಿ.ಮೀ ವ್ಯಾಪ್ತಿಯಲ್ಲಿ ಅಡಿಕೆ ತೋಟ, ನೀರಾವರಿ ಹಾಗೂ ಒಣ ಭೂಮಿ ಮತ್ತು ದಾವಣಗೆರೆ ನಗರದಲ್ಲಿ ಯಾವುದೇ ಅಳತೆಯ ನಿವೇಶನ ಮತ್ತು ಇತ್ತೀಚೆಗೆ ನಿರ್ಮಿಸಿದ ಹೊಸ ಮನೆ ಖರೀದಿ ಮತ್ತು ಮಾರಾಟಕ್ಕಾಗಿ ಸಂಪರ್ಕಿಸಿ.
99727 00107

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**WANTED**
Computer Operator Cum Receptionist. Gents, Day and Night.
Contact :
Shramajeevi Delux Lodge
Davangere
99869 16627

**TEACHERS REQUIRED**
Qualified and Experienced Teachers are required for a reputed School located at old Davangere. Kannada: BA, B.Ed, BA, D.Ed Drawing and Craft PE B.P.Ed
Interested Candidates Can Contact:
9902150005, 9964023607
08192-277799

**INCOME TAX RETURNS FILING**
CONTACT
9071106106
medi20.com@gmail.com

**WANTED**
Banking sector tele caller (Female Only)
Qualification - Any Degree
No. 2257/5 2nd Floor, MCC `A' Block Beside Togataveera Kalyana Mantapa
96869 56142
Interview time :11 AM

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಶಿಕ್ಷಕರು ಬೇಕಾಗಿದ್ದಾರೆ**
ವಿಂಪನ ಸೆಂಟ್ರಲ್ ಇಂಗ್ಲಿಷ್ ಮೀಡಿಯಂ ಸ್ಕೂಲ್ ಸಾಸ್ವೆಹಳ್ಳಿ ನಮ್ಮ ಶಾಲೆಯಲ್ಲಿ ಇಂಗ್ಲಿಷ್, ಗಣಿತ ವಿಜ್ಞಾನ ವಿಷಯಗಳನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಬೋಧನೆ ಮಾಡಲು B.Ed ವಿದ್ಯಾರ್ಹತೆಯುಳ್ಳ ಶಿಕ್ಷಕರು ತಕ್ಷಣ ಬೇಕಾಗಿದ್ದಾರೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
77608 39839

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಅಡಿಕೆ ತೆಂಗು , ಮಾವು ಸಪೋಟ, ಶ್ರೀಗಂಧ, ಹೆಬ್ಬೇವು, ಮಹಾಘನಿ, ನಿಂಬೆ, ದಾಳಿಂಬೆ, ಗುಲಾಬಿ ಇನ್ನಿತರೆ ಗಿಡಗಳು ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ. ಸಂಪರ್ಕಿಸಿ.
94484 39639

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡಿಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ಎಸ್.ಎಲ್.ಎನ್. ಫೆಸಿಲಿಟಿ ಮ್ಯಾನೇಜ್‌ಮೆಂಟ್ ಪ್ರೈವೇಟ್ ಲಿಮಿಟೆಡ್ ಪ್ರಖ್ಯಾತ ಐ.ಟಿ. ಕಂಪನಿ, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು. ಹೌಸ್ ಕೀಪಿಂಗ್ ಕೆಲಸಕ್ಕೆ ಹಾಗೂ ಟೆಲಿಫೋನ್ ಆಪರೇಟರ್ ಹುದ್ದೆಗೆ ಬೇಕಾಗಿದ್ದಾರೆ. ವಯೋಮಿತಿ 18 ರಿಂದ 30 ವರ್ಷಗಳು. ಸೌಲಭ್ಯಗಳು : ಸಂಬಳ, ಬೋನಸ್, ಲೀವ್ ಪೇಮೆಂಟ್, ಯೂನಿಫಾರ್ಮ್, ಶೂಸ್, ಪಿ.ಎಫ್., ಇಎಸ್ಐ., ಗ್ರಾಚ್ಯುಟಿ ಮತ್ತು ಇತರೆ ಸೌಲಭ್ಯವಿರುತ್ತದೆ.
99002 67373, 99002 77949, 99005 19554

**ಮಾಂತ್ರಿಕ ಮೋಡಿ ಬೆಟ್ಟಪ್ಪ ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಬೇಕಾಗಿದ್ದಾರೆ**
ಸಾನ್ವಿ ರೆಸ್ಟೋರೆಂಟ್ ಹೋಟೆಲ್‌ನಲ್ಲಿ ಕೆಲಸ ಮಾಡಲು 4 ಜನ ಸಪ್ಲೈಯರ್ ಮತ್ತು ಕಿಚನ್ ಹೆಲ್ಪರ್, 2 ಕ್ಲೀನರ್ಸ್ ಬೇಕಾಗಿದ್ದಾರೆ. ಸಾನ್ವಿ ರೆಸ್ಟೋರೆಂಟ್ S.S ಹಾಸ್ಪಿಟಲ್ ರೋಡ್ ಲಕ್ಷ್ಮಿ ಲೇಔಟ್ ದಾವಣಗೆರೆ.
70222 20554, 91483 16373

**HOUSE FOR RENT OR LEASE**
IInd Floor, 2 BHK, KB Extension, Near Jayadeva Circle (Vegeterians only)
79967 61757

**MBBS**
Aspirants Looking For MBBS Admission in Russia With Minimum Criteria and Low Budget, Call or Visit
+91 7022 321 123
Doctors Query Pvt Ltd., www.doctorsquery.com

## ನಗರದಲ್ಲಿ ಇಂದು ಭಜನೆ- ಸತ್ಸಂಗ

ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಕರ್ನಾಟಕದ ವತಿಯಿಂದ 45 ನೇ ಪ್ರಾಂತ ಪ್ರಶಿಕ್ಷಣ ಶಿಬಿರದ ಭಾಗವಾಗಿ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಇಂದು ಸಂಜೆ 6 ರಿಂದ 7.30 ರವರೆಗೆ ಭಜನೆ ಮತ್ತು ಸತ್ಸಂಗ ಕಾರ್ಯಕ್ರಮ ಆಯೋಜಿಸಲಾಗಿದೆ.

ಹೈದ್ರಾಬಾದ್ ಆಯುರ್ವೇದ ಮತ್ತು ಪ್ರಕೃತಿ ಚಿಕಿತ್ಸಾ ತಜ್ಞರಾದ ದಂಡಮೂರಿ ಅವನೇಂದ್ರ ಕುಮಾರ್, ಸಂಘಟನಾ ಪ್ರಮುಖರಾದ ಗಿರಿಜಕ್ಕ ಭಾಗವಹಿಸಲಿದ್ದಾರೆ. ನಿಮಿಷಾಂಬ ಸಮುದಾಯ ಭವನದಲ್ಲಿ ಮಾತೆಯರು ಮತ್ತು ಯುವತಿಯರಿಗಾಗಿ ನಡೆಯುವ ಭಜನೆ, ಸತ್ಸಂಗ ಕಾರ್ಯಕ್ರಮದಲ್ಲಿ ದಾವಣಗೆರೆ ಸೇವಾ ಪ್ರಮುಖರಾದ ಲೀಲಕ್ಕ, ಶಾಂತಕ್ಕ ಭಾಗವಹಿಸಲಿದ್ದಾರೆ.

ರಾಜ್ಯ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ಹಿರಿಯ ನಾಗರಿಕರಿಗೆ ನಡೆಯುವ ಭಜನೆ ಹಾಗೂ ಸತ್ಸಂಗದಲ್ಲಿ ರಾಯಚೂರಿನ ಪ್ರಾಂತ ಸಂಚಾಲಕರಾದ ರಾಮ ಮೋಹನ್ ರಾವ್, ಕೇಂದ್ರ ಸಮಿತಿ ಉಪಾಧ್ಯಕ್ಷ ಚನ್ನಬಸಪ್ಪ ಭಾಗವಹಿಸುವರು.

ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ವೃತ್ತಿಪರರಿಗೆ ನಡೆಯುವ ಭಜನೆ ಹಾಗೂ ಸತ್ಸಂಗ ಕಾರ್ಯಕ್ರಮದಲ್ಲಿ ತುಮಕೂರು ಪ್ರಾಂತ ಸಂಯೋಜಕ ವಿನಯ ಪ್ರಸಾದ್, ದಾವಣಗೆರೆ ಶಿಕ್ಷಣ ಪ್ರಮುಖ್ ಕೆ.ಆರ್. ಮಲ್ಲಿಕಾರ್ಜುನ್ ಭಾಗವಹಿಸಲಿದ್ದಾರೆ. ರಾಜ್ಯ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ಎನ್‌ವೈಸಿ ಮತ್ತು ಯುವಕರಿಗೆ ಏರ್ಪಡಿಸಿರುವ ಭಜನೆ, ಸತ್ಸಂಗದಲ್ಲಿ ಬೆಂಗಳೂರು ಪ್ರಾಂತದ ದೊಡ್ಡ ಗೌಡಣ್ಣ, ದಾವಣಗೆರೆ ಎಸ್‌ಪಿವೈಎಸ್‌ಎಸ್ ಸುಭಾಷಣ್ಣ ಭಾಗವಹಿಸುವರು.

ರಾಜ್ಯ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ಐವೈಸಿಯವರಿಗೆ ನಡೆಯುವ ಭಜನೆ ಮತ್ತು ಸತ್ಸಂಗದಲ್ಲಿ ದಾವಣಗೆರೆ ಡಾ. ಚಂದ್ರಶೇಖರ್, ಬೆಂಗಳೂರಿನ ಕೃಷ್ಣೇಗೌಡರು ಭಾಗವಹಿಸಲಿದ್ದಾರೆ.

# ನಗರದಲ್ಲಿ ನಾಡಿದ್ದು ರಾಜ್ಯ ಮಟ್ಟದ ಬಂಡಾಯ ಸಾಹಿತ್ಯ ಸಮ್ಮೇಳನ

> ಎರಡು ದಿನಗಳ ಈ ಸಮ್ಮೇಳನದಲ್ಲಿ ರಾಜ್ಯದ ಸಾಹಿತಿಗಳು, ಕವಿಗಳು, ವಿಚಾರವಾದಿಗಳು, ಚಳವಳಿಗಾರರು, ಸಂಶೋಧನಾ ವಿದ್ಯಾರ್ಥಿಗಳು, ಸಾಹಿತ್ಯಾಸಕ್ತರು ಭಾಗವಹಿಸಲಿದ್ದಾರೆ. ಸಮ್ಮೇಳನದಲ್ಲಿ ವಿಚಾರಗೋಷ್ಠಿ, ಕವಿಗೋಷ್ಠಿಗಳು ಏರ್ಪಾಡಾಗಿವೆ.
>
> - ಬಿ.ಎನ್. ಮಲ್ಲೇಶ್ ಹಾಗೂ ಡಾ. ಎ.ಬಿ. ರಾಮಚಂದ್ರಪ್ಪ
> ಜಿಲ್ಲಾ ಸಂಚಾಲಕರು, ಬಂಡಾಯ ಸಾಹಿತ್ಯ ಸಂಘಟನೆ

ದಾವಣಗೆರೆ, ಜು. 20- ಬಂಡಾಯ ಸಾಹಿತ್ಯ ಸಂಘಟನೆ ಕರ್ನಾಟಕ ಹಾಗೂ ಜಿಲ್ಲಾ ಬಂಡಾಯ ಸಾಹಿತ್ಯ ಸಂಘಟನೆ ವತಿಯಿಂದ ಇದೇ ದಿನಾಂಕ 23 ಮತ್ತು 24 ರಂದು ಎರಡು ದಿನಗಳ ಕಾಲ ನಗರದ ಕುವೆಂಪು ಕನ್ನಡ ಭವನದಲ್ಲಿ ರಾಜ್ಯ ಬಂಡಾಯ ಸಾಹಿತ್ಯ ಸಮ್ಮೇಳನ ನಡೆಯಲಿದೆ ಎಂದು ಜಿಲ್ಲಾ ಸಂಚಾಲಕರಾದ ಬಿ.ಎನ್. ಮಲ್ಲೇಶ್ ಹಾಗೂ ಡಾ. ಎ.ಬಿ. ರಾಮಚಂದ್ರಪ್ಪ ಅವರುಗಳು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸುಮಾರು 36 ವರ್ಷಗಳ ನಂತರ ರಾಜ್ಯಮಟ್ಟದ ಬಂಡಾಯ ಸಾಹಿತ್ಯ ಸಮ್ಮೇಳನವು ದಾವಣಗೆರೆಯಲ್ಲಿ ನಡೆಯುತ್ತಿದ್ದು, ರಾಜ್ಯದ ವಿವಿಧ ಭಾಗಗಳಿಂದ ಸುಮಾರು ಒಂದು ಸಾವಿರ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಇವರೆಲ್ಲರಿಗೂ ಊಟ ಮತ್ತು ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಅವರು ಹೇಳಿದರು.

ನಾಡಿದ್ದು ದಿನಾಂಕ 23 ರ ಶನಿವಾರ ಬೆಳಿಗ್ಗೆ 10.30 ಕ್ಕೆ ಸಮ್ಮೇಳನವನ್ನು ವಿಚಾರವಾದಿ ಜಿ. ರಾಮಕೃಷ್ಣ ಉದ್ಘಾಟಿಸುವರು. ಮಾವಳ್ಳಿ ಶಂಕರ್, ಬಿ.ಎಂ. ಹನೀಫ್, ಸುಕನ್ಯಾ ಮಾರುತಿ, ಸಿ.ವಿ. ಪಾಟೀಲ ಅತಿಥಿಗಳಾಗಿ ಆಗಮಿಸಲಿದ್ದು, ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಮಧ್ಯಾಹ್ನ 12.30 ಕ್ಕೆ 'ಸಾಮಾಜಿಕ -ಸಾಂಸ್ಕೃತಿಕ ಮೌಲ್ಯಗಳು ಮತ್ತು ಮಹಿಳೆ' ಕುರಿತ ಮೊದಲ ಗೋಷ್ಠಿ ನಡೆಯಲಿದ್ದು, ಲೇಖಕಿ ಹೆಚ್.ಎಲ್. ಪುಷ್ಪ ಅಧ್ಯಕ್ಷತೆ ವಹಿಸುವರು. ವಿನಯ ವಕ್ಕುಂದ 'ಮಹಿಳೆ ಮತ್ತು ಅಭಿವ್ಯಕ್ತಿಯ ನೆಲೆ-ನಿಲುವು', ಸಾವಿತ್ರಿ ಮಜುಮದಾರೆ 'ಮಹಿಳೆ ಮತ್ತು ಸಾಮಾಜಿಕ ವ್ಯವಸ್ಥೆ', ಕೆ. ನೀಲಾ 'ಮಹಿಳೆ ಮತ್ತು ವರ್ಗ ಸಮಾಜ' ಕುರಿತು ಮಾತನಾಡಲಿದ್ದಾರೆ.

ಮಧ್ಯಾಹ್ನ 3 ಗಂಟೆಗೆ 'ಕನ್ನಡ ಸಾಹಿತ್ಯದಲ್ಲಿ ಸಮಾನತೆ ಮತ್ತು ಸಹಿಷ್ಣುತೆ' ವಿಷಯ ಕುರಿತ ಎರಡನೇ ಗೋಷ್ಠಿ ನಡೆಯಲಿದ್ದು, ಪ್ರಾಚೀನ ಸಾಹಿತ್ಯ ಕುರಿತು ರಾಜಪ್ಪ ದಳವಾಯಿ, ಮಧ್ಯಕಾಲೀನ ಸಾಹಿತ್ಯ ಕುರಿತು ಡಾ. ದಾದಾಪೀರ್ ನವಿಲೇಹಾಳ್, ಆಧುನಿಕ ಸಾಹಿತ್ಯ ಕುರಿತು ಮುಮ್ತಾಜ್ ಬೇಗಂ, ಜನಪದ ಸಾಹಿತ್ಯ ಕುರಿತು ಕರಿಯಪ್ಪ ಮಾಳಿಗೆ ಮಾತನಾಡಲಿದ್ದಾರೆ. ಜಾನಪದ ತಜ್ಞ ಡಾ. ಎಂ.ಜಿ. ಈಶ್ವರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಜೆ 5.15 ಕ್ಕೆ ಕವಿಗೋಷ್ಠಿ ಸತೀಶ್ ಕುಲಕರ್ಣಿ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಚಂದ್ರಶೇಖರ ತಾಳ್ಯ ಆಶಯ ನುಡಿಗಳನ್ನು ನುಡಿಯಲಿದ್ದಾರೆ. ವಿವಿಧ ಕವಿಗಳು, ಕವಯತ್ರಿಯರು ಭಾಗವಹಿಸಲಿದ್ದಾರೆ.

ದಿನಾಂಕ 24 ರ ಭಾನುವಾರ ಬೆಳಿಗ್ಗೆ 10.30 ಕ್ಕೆ ಸಮಕಾಲೀನ ಸನ್ನಿವೇಶ: ಹೊಸ ಪೀಳಿಗೆಯ ನೋಟ' ಕುರಿತ ಗೋಷ್ಠಿ ನಡೆಯಲಿದ್ದು, ಮಲ್ಲಿಗೆ ಅಧ್ಯಕ್ಷತೆ ವಹಿಸುವರು. ಎಂ. ಉಮಾದೇವಿ, ಹ.ರಾ. ಮಹೇಶ್, ಅರುಣ ಜೋಳದ ಕೂಡ್ಲಿಗಿ, ಬಿ. ರಾಜಶೇಖರಮೂರ್ತಿ, ಜಾಜಿ ದೇವೇಂದ್ರಪ್ಪ, ಅನಂತ ನಾಯಕ್, ಅಶ್ವಿನಿ ಮದನಕರ್, ಮುಸ್ತಫಾ, ರಾಜು ಗುಂಡಾಪುರ, ಪುಷ್ಪ ಭಾರತಿ ಭಾಗವಹಿಸಲಿದ್ದಾರೆ.

**ಮಧ್ಯಾಹ್ನ 12 ಕ್ಕೆ 'ಕರ್ನಾಟಕ ಜನ ಚಳವಳಿಗಳು:** ಹಿನ್ನೋಟ-ಮುನ್ನೋಟ' ಕುರಿತ ಗೋಷ್ಠಿಯ ಅಧ್ಯಕ್ಷತೆಯನ್ನು ಡಾ. ಸಿದ್ಧನಗೌಡ ಪಾಟೀಲ್ ವಹಿಸಲಿದ್ದು, ದಲಿತ ಚಳವಳಿ ಕುರಿತು ಸಣ್ಣರಾಮ, ರೈತ ಚಳವಳಿ ಕುರಿತು ಪ್ರಕಾಶ್ ಕಮ್ಮರಡಿ, ಮಹಿಳಾ ಚಳವಳಿ ಎನ್. ಗಾಯತ್ರಿ,ಕಾರ್ಮಿಕ ಚಳವಳಿ ಕುರಿತು ಕೆ. ಮಹಾಂತೇಶ್ ಮಾತನಾಡಲಿದ್ದಾರೆ. ಮಧ್ಯಾಹ್ನ 2.45 ಕ್ಕೆ ' ಶಿಕ್ಷಣ ಕ್ಷೇತ್ರದ ಸ್ಥಿತಿ-ಗತಿ'ಯ ಬಗ್ಗೆ ನಡೆಯುವ ಗೋಷ್ಠಿಯಲ್ಲಿ ಅಂಗನವಾಡಿ ಅಂಗಳದಲ್ಲಿ ಶಿಕ್ಷಣ ಕುರಿತು ಎಸ್. ವರಲಕ್ಷ್ಮಿ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಶ್ರೀಪಾದ ಭಟ್, ಸಾಮಾಜಿಕ-ಆರ್ಥಿಕ ನೀತಿ ಮತ್ತು ಶಿಕ್ಷಣ ಕುರಿತು ಕಿರಣ್ ಎಂ. ಗಾಜನೂರು, ಪಠ್ಯಪುಸ್ತಕಗಳು ಮತ್ತು ಸಾಂಸ್ಕೃತಿಕ ರಾಜಕಾರಣ ಕುರಿತು ವೈ. ಬಿ. ಹಿಮ್ಮಡಿ ಮಾತನಾಡಲಿದ್ದಾರೆ. ಅಲ್ಲಮಪ್ರಭು ಬೆಟ್ಟದೂರು ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಜೆ 5ಕ್ಕೆ ಸಮಾರೋಪ ಸಮಾರಂಭ ಜರುಗಲಿದ್ದು, ಎಲ್. ಹನುಮಂತಯ್ಯ ಸಮಾರೋಪ ನುಡಿಗಳನ್ನು ನುಡಿಯಲಿದ್ದಾರೆ. ಭಕ್ತರಹಳ್ಳಿ ಕಾಮರಾಜ್, ಆರ್.ಜಿ. ಹಳ್ಳಿ ನಾಗರಾಜ್, ಮೋಹನ್ ರಾಜ್, ಕೆ. ಶರೀಫಾ ಅತಿಥಿಗಳಾಗಿ ಪಾಲ್ಗೊಳ್ಳುವರು. ಜಸ್ಟಿಸ್ ಹೆಚ್.ಎನ್. ನಾಗಮೋಹನ ದಾಸ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಅವರು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಎಂ.ಟಿ. ಸುಭಾಶ್ಚಂದ್ರ, ಎಲ್. ಹೆಚ್. ಅರುಣ್ ಕುಮಾರ್, ಅನಿಸ್ ಪಾಷಾ ಉಪಸ್ಥಿತರಿದ್ದರು.

# ರಾಜ್ಯ ಮಟ್ಟದ ಯೋಗ ಶಿಕ್ಷಕರ 45ನೇ ಪ್ರಾಂತ ಪ್ರಶಿಕ್ಷಣ ಶಿಬಿರಕ್ಕೆ ಚಾಲನೆ

ದಾವಣಗೆರೆ, ಜು.20- ಪತಂಜಲಿ ಯೋಗ ಶಿಕ್ಷಣ ಸಮಿತಿ, ಪತಂಜಲಿ ಯೋಗ ಫೌಂಡೇಶನ್ ವತಿಯಿಂದ ಇಂದಿನಿಂದ 5 ದಿನಗಳ ರಾಜ್ಯ ಮಟ್ಟದ ಯೋಗ ಶಿಕ್ಷಕರ 45ನೇ ಪ್ರಾಂತ ಪ್ರಶಿಕ್ಷಣ ಶಿಬಿರಕ್ಕೆ ನಗರದ ಮೂರು ಕಡೆಗಳಲ್ಲಿ ಇಂದು ಸಂಜೆ ಏಕಕಾಲಕ್ಕೆ ಚಾಲನೆ ನೀಡಲಾಯಿತು.

ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಶಿಬಿರವನ್ನು ಪತಂಜಲಿ ಯೋಗ ಶಿಕ್ಷಣ ಸಮಿತಿಯ ಬೆಂಗಳೂರು ಕೇಂದ್ರ ಸಮಿತಿಯ ಉಪಾಧ್ಯಕ್ಷ ಡಾ. ಶಿವಕುಮಾರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ. ಹೆಚ್. ಎಸ್. ಮಂಜುನಾಥ್ ಕುರ್ಕಿ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಂಜುನಾಥ ಕುರ್ಕಿ ಅವರು, ಆರೋಗ್ಯಕ್ಕಿಂತ ದೊಡ್ಡ ಶಕ್ತಿ ಬೇರಿಲ್ಲ. ಆರೋಗ್ಯವಂತರೇ ಅದೃಷ್ಟಶಾಲಿಗಳು. ಪ್ರಸ್ತುತ ಒತ್ತಡದ ಬದುಕಿನಿಂದ ಸಹಜ ಸಾವಿಗಿಂತ ಅಕಾಲಿಕ ಸಾವುಗಳೇ ಹೆಚ್ಚಾಗಿವೆ. ಅಧ್ಯಾತ್ಮ ಮತ್ತು ಯೋಗದಿಂದ ಆರೋಗ್ಯಕರ ಬದುಕು ಕಾಣಬಹುದು ಎಂದು ಅಭಿಪ್ರಾಯ ಪಟ್ಟರು.

ಮನುಷ್ಯರಾಗಿ ಹುಟ್ಟಿದ ಮೇಲೆ ಮಾನವರಾಗಿ ಬದುಕಬೇಕು. ನಮ್ಮ ಅಂತ್ಯ ಸಂಸ್ಕಾರದವರೆಗೂ ನೈತಿಕ ಮತ್ತು ಸಾಮಾಜಿಕ ಮೌಲ್ಯಗಳ ಬದುಕಿನಲ್ಲಿ ಅಳವಡಿಸಿಕೊಂಡು ಸಂಸ್ಕಾರಯುತವಾಗಿ ಬಾಳಬೇಕು. ಇಂದಿನ ಯುವ ಪೀಳಿಗೆಗೂ ಸಂಸ್ಕಾರವನ್ನು ಕಲಿಸಬೇಕು. ಅದನ್ನು ಅಕ್ಷರ ಜ್ಞಾನದ ಜೊತೆಗೆ ಆಧ್ಯಾತ್ಮ ಮತ್ತು ಯೋಗದ ಮುಖೇನ ಕಲಿಸಬೇಕು ಎಂದು ತಿಳಿಸಿದರು.

ಡಾ. ಶಿವಕುಮಾರ್ ಮಾತನಾಡಿ, ಸಂಸ್ಕಾರ ಮತ್ತು ಶಿಕ್ಷಣ ಒಂದೇ ನಾಣ್ಯದ ಎರಡು ಮುಖಗಳು. ಸಂಸ್ಕಾರ ಎಡವಲು ಬಿಡಲ್ಲ, ಶಿಕ್ಷಣ ಬೀಳಲು ಬಿಡುವುದಿಲ್ಲ. ಪತಂಜಲಿ ಯೋಗ ಶಿಕ್ಷಣ ಸಮಿತಿಯ ಉದ್ದೇಶವಾಗಿರುವ ಸಂಸ್ಕಾರ, ಸಂಘಟನೆ ಮತ್ತು ಸೇವೆಯನ್ನು ನಾವುಗಳು ಮಾಡುವ ಜೊತೆಗೆ ಸಾರ್ವಜನಿಕವಾಗಿಯೂ ಅದನ್ನು ಚಾಲ್ತಿಗೆ ತರಬೇಕೆಂದರು.

ಸಮಿತಿಯ ಪ್ರಾಂತ ಸಂಯೋಜಕ ರಾಘವೇಂದ್ರ ಪ್ರಭು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಿತಿಯ ಪ್ರಾಂತ ಸಂಚಾಲಕ ಜಿ. ಮಂಜುನಾಥಣ್ಣ ಅಧ್ಯಕ್ಷತೆ ವಹಿಸಿದ್ದರು. ಜ್ಯೋತಿ ಪ್ರಾರ್ಥಿಸಿದರು. ಕೆ.ಆರ್. ಮಲ್ಲಿಕಾರ್ಜುನ್ ನಿರೂಪಿಸಿದರು. ವಿನೋದ ಸ್ವಾಗತಿಸಿದರು. ಚಂದ್ರಕಲಾ ವಂದಿಸಿದರು.

ಹಿರಿಯ ನಾಗರಿಕರ ವಿಭಾಗದ ಉದ್ಘಾಟನೆ ವೇಳೆ ಸಮಿತಿಯ ಪ್ರಾಂತ ಸಂಚಾಲಕ ರಾಮಶೇಷಣ್ಣ, ತಿಪ್ಪೇಸ್ವಾಮಿ ಸೇರಿದಂತೆ ಇತರರು ಇದ್ದರು.

ಈ ಪ್ರಶಿಕ್ಷಣ ಶಿಬಿರವು ಜಿಲ್ಲಾ ಪ್ರಶಿಕ್ಷಣ ನಂತರ ಒಂದು ವರ್ಷ ಅನುಭವವಾದ ಮೇಲೆ ಪ್ರಾಂತ ಶಿಕ್ಷಣವನ್ನು ನುರಿತ ಯೋಗ ಶಿಕ್ಷಕರಿಂದ ಯೋಗದ ಬಗ್ಗೆ ಹಾಗೂ ಸಂಸ್ಕಾರ, ಸಂಘಟನೆ ಮತ್ತು ಸೇವೆಯ ಕುರಿತು ತರಬೇತಿ ನೀಡಲಾಗುತ್ತದೆ.

ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನ, ನಿಮಿಷಾಂಭ, ರಾಜ್ಯ ಸರ್ಕಾರಿ ನೌಕರರ ಭವನದಲ್ಲಿ ಇದೇ ದಿನಾಂಕ 24ರವರೆಗೆ ಪ್ರತಿದಿನ ಸಂಜೆ 6ರಿಂದ 7.30 ರವರೆಗೆ ನಡೆಯಲಿದೆ.

## ಆಗಸ್ಟ್ 12ಕ್ಕೆ 'ಗಾಳಿಪಟ-2' ಬಿಡುಗಡೆ

ದಾವಣಗೆರೆ, ಜು.20- ಯೋಗರಾಜ್ ಭಟ್ ನಿರ್ದೇಶನದ ಗಾಳಿಪಟ-2 ಚಿತ್ರವು ಆಗಸ್ಟ್ 12 ರಂದು ರಾಜ್ಯಾದ್ಯಂತ ತೆರೆ ಕಾಣಲಿದೆ ಎಂದು ಕಾಮಿಡಿ ಕಿಲಾಡಿ ಖ್ಯಾತಿಯ ಮುಡೇನೂರು ಮನು ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿರಿಯ ನಟ ಅನಂತ್ ನಾಗ್, ಗೋಲ್ಡನ್ ಸ್ಟಾರ್ ಗಣೇಶ್, ದಿಗಂತ್, ಪವನ್ ಕುಮಾರ್, ಶರ್ಮಿಳಾ ಮಾಂಡ್ರೆ, ವೈಭವಿ ಶಾಂಡಿಲ್ಯ, ಸಂಯುಕ್ತ ಮೆನನ್ ಮುಖ್ಯ ಭೂಮಿಕೆಯಲ್ಲಿದ್ದಾರೆ ಎಂದು ತಿಳಿಸಿದರು.

ಕಲಾವಿದೆ ನಯನ ಮಾತನಾಡಿ, ಗಾಳಿಪಟ 1ಕ್ಕಿಂತ ಗಾಳಿಪಟ-2 ಭಿನ್ನವಾಗಿದೆ. ಹಾಸ್ಯ ಹಾಗೂ ರೋಚಕ ತಿರುವುಗಳಿಂದ ಕೂಡಿದೆ ಎಂದು ಹೇಳಿದರು. ಮಲ್ಲಿಕಾರ್ಜುನ್ ಬಾವಿಕಟ್ಟಿ ಪತ್ರಿಕಾಗೋಷ್ಠಿಯಲ್ಲಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಇಂಡಸ್ಟ್ರಿಯಲ್ ಏರಿಯಾ, ಲೋಕಿಕೆರೆ ರಸ್ತೆ, ಸುಬ್ರಹ್ಮಣ್ಯ ನಗರ, ಎಸ್.ಎ ರವೀಂದ್ರನಾಥ್ ಬಡಾವಣೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

# ಮಳೆಗೆ ಮೆಕ್ಕೆಜೋಳ ಹಾನಿ : ಪರಿಹಾರಕ್ಕೆ ಆಗ್ರಹ



ದಾವಣಗೆರೆ, ಜು.20- ಕಳೆದ 15 ದಿನಗಳ ಕಾಲ ನಿರಂತರವಾಗಿ ಅತಿಯಾದ ಮಳೆಯಿಂದ ಜಿಲ್ಲೆಯಲ್ಲಿ ಸಂಪೂರ್ಣ ಹಾನಿಯಾಗಿರುವ ಮೆಕ್ಕೆಜೋಳಕ್ಕೆ ತಕ್ಷಣವೇ ಫಸಲ್ ಬಿಮಾ ಯೋಜನೆಯಡಿ ಪರಿಹಾರ ನೀಡುವಂತೆ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಬುಧವಾರ ತಾಲ್ಲೂಕಿನ ಹುಚ್ಚವ್ವನಹಳ್ಳಿಯ ರೈತ ಎಚ್.ಎನ್.ಮೂರ್ತಿ ಸೇರಿದಂತೆ, ಹಲವು ರೈತರ ಜಮೀನುಗಳಲ್ಲಿ ಮಳೆಯಿಂದ ಆಗಿರುವ ಬೆಳೆಹಾನಿ ವೀಕ್ಷಣೆಯ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಸದರಿ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ 1 ಲಕ್ಷದ 12 ಸಾವಿರಕ್ಕೂ ಅಧಿಕ ಹೆಕ್ಟೇರ್ ಪ್ರದೇಶ ದಲ್ಲಿ ಮೆಕ್ಕೆಜೋಳ ಬಿತ್ತನೆಯಾಗಿದ್ದು. ಕಳೆದ 15 ದಿನಗಳಿಂದ ನಿರಂತರವಾಗಿ ಸುರಿದ ಮಳೆಯಿಂದ 1 ಲಕ್ಷಕ್ಕೂ ಅಧಿಕ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಸಂಪೂರ್ಣ ಹಾನಿಯಾಗಿದೆ ಎಂದು ಹೇಳಿದರು.

ಇದೀಗ ಗೇಣುದ್ದ ಬೆಳೆದಿದ್ದ ಮೆಕ್ಕೆಜೋಳ ಸಂಪೂರ್ಣ ಕೊಳೆತು ಹೋಗಿದೆ. ದಾವಣಗೆರೆ ತಾಲ್ಲೂಕು ಒಂದರಲ್ಲಿಯೇ 29 ಸಾವಿರಕ್ಕೂ ಅಧಿಕ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಕೊಳೆತು ಹೋಗಿದೆ. ಈ ಬೆಳೆಗೆ ಎಷ್ಟೇ ಗೊಬ್ಬರ, ಔಷಧಿ ಸಿಂಪಡಿಸಿದರೂ ಪ್ರಯೋಜನವಾಗುವುದಿಲ್ಲ. ಈ ಹಾನಿ ಬಗ್ಗೆ ಅಧಿಕಾರಿಗಳನ್ನು ಕೇಳಿದರೆ ಇದು ಎನ್‌ಡಿಆರ್ ಎಫ್ ನಿಯಮಕ್ಕೆ ಅನ್ವಯಿಸುವುದಿಲ್ಲ ಎಂಬಿತ್ಯಾದಿ ಸಬೂಬು ಹೇಳುತ್ತಾರೆ. ಆದರೆ ನಮಗೆ ಎನ್‌ಡಿಆರ್ ಎಫ್ ಅಡಿ ಪರಿಹಾರ ಕೇಳುತ್ತಿಲ್ಲ. ಬದಲಿಗೆ ಈಗಾಗಲೇ ಫಸಲ್ ಬಿಮಾ ಯೋಜನೆಯಡಿ ವಿಮಾ ಕಂತು ತುಂಬಿದ್ದ ರೈತರಿಗೆ ಪರಿಹಾರ ನೀಡುವಂತೆ ಒತ್ತಾಯಿಸಲಾಗುತ್ತಿದೆ ಎಂದರು.

ಜುಲೈ 31 ಫಸಲ್ ಬಿಮಾ ಯೋಜನೆಯಡಿ ಕಂತು ತುಂಬಲು ಕಡೆ ದಿನಾಂಕ ನಿಗದಿ ಮಾಡಲಾಗಿದೆ. ಅಧಿಕಾರಿಗಳ ಪ್ರಕಾರ ಇದೀಗ ಹೊಲದಲ್ಲಿ ಕೊಳೆತು ಹೋಗಿರುವ ಬೆಳೆಯನ್ನು ಹಾಗೇಯೇ ಬಿಟ್ಟುಕೊಂಡು ಇರಬೇಕಾ? ವಿಮಾ ಸಂಸ್ಥೆಯ ಅಧಿಕಾರಿಗಳು ಸ್ಥಳ ಪರಿಶೀಲನೆಗೆ ಬರುವುದು ಯಾವಾಗ. ಸರ್ಕಾರಕ್ಕೆ ವರದಿ ನೀಡುವುದು ಯಾವಾಗ. ನಷ್ಟಕ್ಕೆ ಒಳಗಾದ ರೈತರಿಗೆ ಪರಿಹಾರ ದೊರಕುವುದು ಯಾವಾಗ? ಎಂದು ಮಂಜುನಾಥ್ ಪ್ರಶ್ನಿಸಿದರು.

ಬೆಳೆ ನಷ್ಟ ಪರಿಹಾರಕ್ಕಾಗಿ ಈಗಾಗಲೇ ಸಿಎಂ 500 ಕೋಟಿ ರೂ ಬಿಡುಗಡೆ ಮಾಡಿರುವುದಾಗಿ ಹೇಳಿದ್ದಾರೆ. ಇದರ ಸಮೀಕ್ಷೆ ಯನ್ನಾದರೂ ಮಾಡಿ ಎಂದು ಕೃಷಿ ಇಲಾಖೆ ಅಧಿಕಾರಿಗಳನ್ನು ಒತ್ತಾಯಿಸಿದರೂ, ಇದುವರೆಗೂ ಯಾವ ಅಧಿಕಾರಿಯೂ ಸಮೀಕ್ಷೆಗೆ ಬಂದಿಲ್ಲ. 31 ರ ನಂತರ ಸಹಾಯವಾಣಿ ನಂಬರ್ ಬರುತ್ತದೆ. ಅದಕ್ಕೆ ಕರೆ ಮಾಡಿ ದೂರು ದಾಖಲಿಸಿದರೆ ಮಾತ್ರ ಪರಿಹಾರ ನೀಡುತ್ತೇವೆ ಎನ್ನುವುದನ್ನು ಕೈ ಬಿಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಹುಚ್ಚವ್ವನಹಳ್ಳಿ ಗ್ರಾಪಂ ಅಧ್ಯಕ್ಷ ವಿ.ಸಿ.ಗಣೇಶ್, ಸದಸ್ಯೆ ಲತಾ, ರಜಾಕ್, ಎಂ.ಎಚ್.ಸಿದ್ದಪ್ಪ ನಾಯಕ, ಗೊಲ್ಲರ ರಂಗಣ್ಣ, ಕೆ.ಜಿ. ಸತೀಶ್, ಟೈಲರ್ ತಿಮ್ಮೇಶ್ ಹಾಗು ಗ್ರಾಮಸ್ಥರು ಇದ್ದರು.

## ಗಾಣಿಗ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜು. 20- ಜಿಲ್ಲಾ ಮಹಿಳಾ ಗಾಣಿಗ ಸಮಾಜದ ವತಿಯಿಂದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ. 85 ಕ್ಕಿಂತ ಅಧಿಕ ಅಂಕ ಗಳಿಸಿದ ಗಾಣಿಗ ಸಮಾಜದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದು ಸಮಾಜದ ಹಿರಿಯರಾದ ಶ್ರೀಮತಿ ಉಮಾ ವೀರಭದ್ರಪ್ಪ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನಾಳೆ ದಿನಾಂಕ 21 ರೊಳಗಾಗಿ ವಿದ್ಯಾರ್ಥಿಗಳು ನೋಂದಣಿ ಮಾಡಿಕೊಳ್ಳಬೇಕು. ಪುರಸ್ಕಾರ ಸಮಾರಂಭವು ಇದೇ ದಿನಾಂಕ 24 ರ ಭಾನುವಾರ ಬೆಳಿಗ್ಗೆ 10.30 ಕ್ಕೆ ನಗರದ ರೋಟರಿ ಬಾಲಭವನದಲ್ಲಿ ನಡೆಯಲಿದೆ. ವಿವರಗಳಿಗಾಗಿ ಜಿಲ್ಲಾ ಮಹಿಳಾ ಗಾಣಿಗ ಸಮಾಜದ ಅಧ್ಯಕ್ಷರಾದ ರತ್ನಾ ಸಿದ್ದೇಶ್ (9964098234), ಉಮಾ ವೀರಭದ್ರಪ್ಪ (9740106484) ಅವರನ್ನು ಸಂಪರ್ಕಿಸಬಹುದು.

## ಡಾ. ಅರವಿಂದ್ ಅತ್ಯುತ್ತಮ ವೈದ್ಯ

ಹೊನ್ನಾಳಿ, ಜು. 20 - ತಾಲ್ಲೂಕಿನ ಘಂಟ್ಯಾಪುರ ಗ್ರಾಮದ ಡಾ.ಜಿ.ಎಂ. ಅರವಿಂದ್ ಅವರಿಗೆ 'ದಕ್ಷಿಣ ಭಾರತದ ಆರೋಗ್ಯ ಕ್ಷೇತ್ರದಲ್ಲಿನ ಅತ್ಯುತ್ತಮ ವೈದ್ಯ' ಎಂಬ ಪ್ರಶಸ್ತಿ ಲಭಿಸಿದೆ. 'ಇಂಡಿಯಾ ಟುಡೇ' ನಿಯತ ಕಾಲಿಕದ ಸಹಯೋಗದಲ್ಲಿ ಅಮೆರಿಕದ ವೈದ್ಯಕೀಯ ಸಂಸ್ಥೆ, ಎನ್‌ಇಬಿ ಮೀಡಿಯಾ ನಡೆಸಿದ ಸಮೀಕ್ಷೆಯಲ್ಲಿ ಈ ಪ್ರಶಸ್ತಿ ಘೋಷಿಸಲಾಗಿದೆ.



ಅರವಿಂದ್, ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯ ಇಂಟರ್ನಲ್ ಮೆಡಿಸಿನ್ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮಣಿಪಾಲ್ ಆಸ್ಪತ್ರೆ ನೀಡುವ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿರುವ ಅವರು, ಹೊನ್ನಾಳಿ ತಾಲ್ಲೂಕಿನ ಘಂಟ್ಯಾಪುರ ಗ್ರಾಮದ ಪ್ರಗತಿಪರ ಕೃಷಿಕ ದಾಗಿನಕಟ್ಟೆ ಜಿ.ಮಹೇಶ್ವರಪ್ಪ-ಮೀನಾಕ್ಷಮ್ಮ ದಂಪತಿ ಜೇಷ್ಠ ಪುತ್ರ.

# ಬೀಳಗಿ ಅವರಿಗೆ ಹೃದಯ ಸ್ಪರ್ಶಿ ಬೀಳ್ಕೊಡುಗೆ



ದಾವಣಗೆರೆ ಜು.20 - ದಾವಣಗೆರೆ ಜಿಲ್ಲಾಧಿಕಾರಿಯಾಗಿ ಎರಡು ವರ್ಷ ಹತ್ತು ತಿಂಗಳ ಕಾಲ ಸೇವೆ ಸಲ್ಲಿಸಿ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಾಗಿ ವರ್ಗಾವಣೆಗೊಂಡಿರುವ ಮಹಾಂತೇಶ ಬೀಳಗಿ ಅವರನ್ನು ಜಿಲ್ಲಾಡಳಿತ ಭವನದ ತುಂಗಭದ್ರಾ ಸಂಭಾಂಗಣದಲ್ಲಿ ಜಿಲ್ಲಾಡಳಿತ, ಸಂಘ - ಸಂಸ್ಥೆಗಳಿಂದ ಇಂದು ಸಂಜೆ ಏರ್ಪಾಡಾಗಿದ್ದ ಸಮಾರಂಭದಲ್ಲಿ ಹೃದಯ ಸ್ಪರ್ಶಿ ಬೀಳ್ಕೊಡಲಾಯಿತು.

ಬೀಳ್ಕೊಡುಗೆ ಸ್ವೀಕರಿಸಿ ಮಾತನಾಡಿದ ಬೀಳಗಿ, ಜಿಲ್ಲೆಯಲ್ಲಿ ಮಾಡಿದ ಸೇವೆಯನ್ನು ಜೀವಮಾನ ಇರುವವರೆಗೆ ಮರೆಯುವಂತಿಲ್ಲ. ಅಂತಹ ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಸರ್ಕಾರ ಹಾಗೂ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳಿಗೆ ಸದಾ ಚಿರಋಣಿಯಾಗಿದ್ದೇನೆ. ಎಲ್ಲರ ಸಹಕಾರದಿಂದ ಜನರ ಜಿಲ್ಲಾಧಿಕಾರಿಯಾಗಿ ಕೆಲಸ ಮಾಡಲು ಸಾಧ್ಯವಾಯಿತು ಎಂದು ಹೇಳಿದರು.

ಜಿಲ್ಲೆಗೆ ಬಂದ ಕೆಲವೇ ತಿಂಗಳಲ್ಲಿ ಕೊರೊನಾ ಅಲೆ ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ಎಲ್ಲಾ ಅಧಿಕಾರಿಗಳೊಂದಿಗೆ ಬೆರೆತು ಹಾಗೂ ಎಲ್ಲಾ ಜನಪ್ರತಿನಿಧಿಗಳ ಸಹಕಾರದಿಂದ ಹೆಚ್ಚು ಹೆಚ್ಚು ಶ್ರಮವಹಿಸಿ ಕೆಲಸ ಮಾಡಲು ಸಾಧ್ಯವಾಯಿತು. ಎಂದಿಗೂ ಕೆಲಸ ಕೆಲಸ ಎನಿಸಲಿಲ್ಲ, ಪ್ರತಿ ದಿನವೂ ಮಹತ್ವದ ದಿನವೆಂದು ಅರಿತು ಕೆಲಸ ಮಾಡಿದ್ದರಿಂದ ಆರಂಭದಲ್ಲಿ ಹೇಳಿದ ಮಾತಿನಂತೆ ಜನರ ಜಿಲ್ಲಾಧಿಕಾರಿಯಾಗಲು ಬಯಸಿದ್ದೇನೆ ಎಂದಿದ್ದು ಅದರಂತೆ ಇಂದು ಜನರು ಮಾತನಾಡುವಂತೆ ಕೆಲಸ ಮಾಡಿ ನನ್ನ ಕೆಲಸವನ್ನು ನಿಮಗೆಲ್ಲರಿಗೂ ಬಿಟ್ಟು ಹೋಗುತ್ತಿದ್ದೇನೆ. ಜನರು ಹೇಳುವ ಒಳ್ಳೆಯ ಕೆಲಸದಲ್ಲಿ ಎಲ್ಲರ ಸಹಕಾರ ಇದೆ ಎಂದು ತಮ್ಮ ಅವಧಿಯಲ್ಲಿನ ಸೇವೆಯ ಬಗ್ಗೆ ಹಾಗೂ ಇಲ್ಲಿನ ಜನರು ತೋರಿಸಿದ ಪ್ರೀತಿಯ ಬಗ್ಗೆ ಸ್ಮರಿಸುತ್ತಾ ಮುಂದೆಯೂ ಸ್ಮರಿಸುವಂತಹ ಕೆಲಸ ಮಾಡುತ್ತೇನೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ನೂತನ ಜಿಲ್ಲಾಧಿಕಾರಿ ಶಿವಾನಂದ ಕಪಾಶಿ, ಒಳ್ಳೆಯ ಕೆಲಸ ಮಾಡಿದ್ದರಿಂದಲೇ ಜನರೇ ಹೇಳಿಕೊಂಡು ಕಚೇರಿಗೆ ಬರುತ್ತಿದ್ದಾರೆ, ಇದನ್ನು ಕಳೆದ ಒಂದು ವಾರದಿಂದ ಗಮನಿಸಿದ್ದೇನೆ. ಈ ಹಿಂದೆ ನೀಡಿದ ಸಹಕಾರವನ್ನು ಸಾರ್ವಜನಿಕರು ಸೇರಿದಂತೆ ಅಧಿಕಾರಿಗಳು ತಮಗೆ ನೀಡುವ ಮೂಲಕ ಜಿಲ್ಲೆಯ ಅಭಿವೃದ್ದಿಗೆ ಕೈಜೋಡಿಸುವಂತೆ ಕೇಳಿಕೊಂಡರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ. ಎ.ಚನ್ನಪ್ಪ, ಜಿಲ್ಲಾ ರಕ್ಷಣಾಧಿಕಾರಿ ಸಿ.ಬಿ.ರಿಷ್ಯಂತ್, ಶ್ರೀಮತಿ ರೇಖಾ ಮಹಾಂತೇಶ್ ಬೀಳಗಿ, ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಸ್ಮಾರ್ಟ್‌ಸಿಟಿ ಯೋಜನೆ ವ್ಯವಸ್ಥಾಪಕ ರವೀಂದ್ರ ಮಲ್ಲಾಪುರ, ಉಪವಿಭಾಗಾಧಿಕಾರಿ ಶ್ರೀಮತಿ ದುರ್ಗಶ್ರೀ, ಡಾ.ಹುಲ್ಲುಮನಿ ತಿಮ್ಮಣ್ಣ, ನಗರಾಭಿವೃದ್ದಿ ಪ್ರಾಧಿಕಾರದ ಆಯುಕ್ತ ಕುಮಾರಸ್ವಾಮಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪ ನಿರ್ದೇಶಕರಾದ ಶ್ರೀಮತಿ ನಜ್ಮಾ, ಭೂಸ್ವಾಧೀನಾಧಿಕಾರಿ ರೇಷ್ಮಾ ಹಾನಗಲ್, ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ಸೇರಿದಂತೆ ವಿವಿಧ ಅಧಿಕಾರಿಗಳು, ಮುಖಂಡರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಆಧುನಿಕ ಹೈನುಗಾರಿಕೆ : ರೈತರಿಗೆ ತರಬೇತಿ

ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ನಗರದ ಪಿ.ಬಿ. ರಸ್ತೆಯ ಅರುಣ ಚಿತ್ರಮಂದಿರದ ಎದುರು ಗಡೆ ಇರುವ ತರಬೇತಿ ಕೇಂದ್ರದಲ್ಲಿ ಇಂದಿನಿಂದ ಇದೇ ದಿನಾಂಕ 27 ರವರೆಗೆ ಆಧುನಿಕ ಹೈನುಗಾರಿಕೆ ಬಗ್ಗೆ ತರಬೇತಿ, ಕುರಿ ಮತ್ತು ಮೇಕೆ ಸಾಕಾಣಿಕೆ ಬಗ್ಗೆ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08192-233787 ಗೆ ಸಂಪರ್ಕಿಸಲು ತಿಳಿಸಲಾಗಿದೆ.

## ಬಣಜಿಗ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ದಾವಣಗೆರೆ,ಜು.20- ಜಿಲ್ಲಾ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘದಿಂದ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ಬಣಜಿಗ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಇದೇ ದಿನಾಂಕ 31 ರ ಒಳಗಾಗಿ ಸಮಾಜದ ವಿದ್ಯಾರ್ಥಿಗಳು ಅಂಕಪಟ್ಟಿ ಮತ್ತು ಭಾವಚಿತ್ರದೊಂದಿಗೆ ಅರ್ಜಿ ಸಲ್ಲಿಸಬೇಕು. ವಿವರಕ್ಕೆ 9742006166 ಸಂಪರ್ಕಿಸಬಹುದು.

## ಇಂದು ದಾವಣಗೆರೆ ಕ್ಲಬ್‌ನಿಂದ ಬೂಸ್ಟರ್ ಡೋಸ್ ಲಸಿಕಾ ಶಿಬಿರ

ದಾವಣಗೆರೆ ಕ್ಲಬ್ ವತಿಯಿಂದ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ಕ್ಲಬ್ ಆವರಣದಲ್ಲಿ ಬೂಸ್ಟರ್ ಡೋಸ್ ಲಸಿಕಾ ಶಿಬಿರ ಏರ್ಪಡಿಸಲಾಗಿದೆ. ಎರಡನೇ ಡೋಸ್ ಹಾಕಿಸಿಕೊಂಡು ಕನಿಷ್ಠ ಆರು ತಿಂಗಳಾಗಿರುವವರಿಗೆ ಬೂಸ್ಟರ್ ಡೋಸ್ ಹಾಕಲಾಗುವುದು. ಇದೇ ವೇಳೆ 18 ವರ್ಷ ಮೇಲ್ಪಟ್ಟವರಿಗೂ 1 ಮತ್ತು 2 ನೇ ಡೋಸ್ ಲಸಿಕೆ ಹಾಕಲಾಗುವುದು.

## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಈ ಕೆಳಕಂಡ ಸ್ಥಿರ ಸೊತ್ತು ನಿವೇಶನವನ್ನು ನನ್ನ ಕಕ್ಷಿಗಾರರು ಸ್ವತ್ತಿನ ಮಾಲೀಕರಾದ **ಶ್ರೀ ಸಂದೇಶ್ ಕೆ.ಎಂ. ಬಿನ್ ಬಸವರಾಜಯ್ಯ ಕೆ.ಎಂ.,** ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು, ಹರಪನಹಳ್ಳಿ ಟೌನ್, 1ನೇ ವಾರ್ಡ್ ಹೊಸಪೇಟೆ ರಸ್ತೆ, ಇವರಿಂದ ಖರೀದಿಸಲು ಇಚ್ಛಿಸಿರುತ್ತಾರೆ.

ಸದರಿ ಷೆಡ್ಯೂಲ್ ಸೊತ್ತನ್ನು ನನ್ನ ಕಕ್ಷಿಗಾರರು ಮೇಲ್ಕಂಡ **ಶ್ರೀ ಸಂದೇಶ್ ಕೆ.ಎಂ. ಬಿನ್ ಬಸವರಾಜಯ್ಯ ಕೆ.ಎಂ.,** ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು, ಹರಪನಹಳ್ಳಿ ಟೌನ್, 1ನೇ ವಾರ್ಡ್ ಹೊಸಪೇಟೆ ರಸ್ತೆ, ಇವರಿಂದ ಖರೀದಿಸುವ ಬಗ್ಗೆ ಯಾರದಾದರೂ, ಯಾವುದೇ ರೀತಿಯ ತಂಟೆ, ತಕರಾರು, ವ್ಯಾಜ್ಯ ಅಥವಾ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ 15 ದಿವಸಗಳ ಒಳಗಾಗಿ ಈ ಕೆಳಕಂಡವರಿಗೆ ಸೂಕ್ತ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು. ಸದರಿ 15 ದಿವಸಗಳ ಅವಧಿ ಮೀರಿ ಬರುವ ಯಾವುದೇ ತಂಟೆ, ತಕರಾರು, ವ್ಯಾಜ್ಯ ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸದರಿ 15 ದಿವಸಗಳ ಅವಧಿ ನಂತರ ನನ್ನ ಕಕ್ಷಿಗಾರರು ಮೇಲ್ಕಂಡ **ಶ್ರೀ ಸಂದೇಶ್ ಕೆ.ಎಂ. ಬಿನ್ ಬಸವರಾಜಯ್ಯ ಕೆ.ಎಂ.,** ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು, ಹರಪನಹಳ್ಳಿ ಟೌನ್, 1ನೇ ವಾರ್ಡ್ ಹೊಸಪೇಟೆ ರಸ್ತೆ, ಇವರಿಂದ ಷೆಡ್ಯೂಲ್ ನಿವೇಶನವನ್ನು ರಿಜಿಸ್ಟರ್ಡ್ ಕ್ರಯ ಪತ್ರ ಮಾಡಿಸಿಕೊಳ್ಳುವುದರ ಮೂಲಕ ಸೊತ್ತಿನ ಸ್ವಾಧೀನ ಹೊಂದುವರು.

ಸದರಿ ಅವಧಿ ಮೀರಿ ಬರಬಹುದಾದ ಯಾವುದೇ ತಂಟೆ, ತಕರಾರು, ವ್ಯಾಜ್ಯ ಆಕ್ಷೇಪಣೆ ವಗೈರೆಗಳು ನನ್ನ ಕಕ್ಷಿಗಾರರನ್ನು ಪ್ರತಿಬಂಧಿಸುವುದಿಲ್ಲ ಹಾಗು ನನ್ನ ಕಕ್ಷಿಗಾರರು ಸದರಿ **ಶ್ರೀ ಸಂದೇಶ್ ಕೆ.ಎಂ. ಬಿನ್ ಬಸವರಾಜಯ್ಯ ಕೆ.ಎಂ.,** ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು, ಹರಪನಹಳ್ಳಿ ಟೌನ್, 1ನೇ ವಾರ್ಡ್ ಹೊಸಪೇಟೆ ರಸ್ತೆ, ಇವರಿಂದ ಪಡೆದುಕೊಳ್ಳುವ ಶುದ್ಧ ಕ್ರಯಪತ್ರವನ್ನು ಎಳ್ಳಷ್ಟೂ ಬಾಧಿಸುವುದಿಲ್ಲ ತಿಳಿಯುವುದು.

**ಷೆಡ್ಯೂಲ್**

ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು, ಅಡವಿಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿದ ಅಡವಿಹಳ್ಳಿ ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಬರುವ ಅಡವಿಹಳ್ಳಿ ಗ್ರಾಮದಲ್ಲಿರುವ ಸ್ವತ್ತಿನ ವಿವರ ಆರ್‌ಡಿಪಿಆರ್ ನಂಬರ್ 151200400200220520 ಸ್ವತ್ತಿನ ಖಾತೆ ಗ್ರಾಮ ಪಂಚಾಯತಿ ದಾಖಲೆಗಳ ಪ್ರಕಾರ ಸೈಟ್ ನಂ. 37/14 (ಸೈಟ್ ನಂ.14) ವಾಸದ ಖಾಲಿ ನಿವೇಶನ, ಅಳತೆ ಪೂರ್ವ-ಪಶ್ಚಿಮ 9.14 ಮೀಟರ್, ಉತ್ತರ-ದಕ್ಷಿಣ 12.20 ಮೀಟರ್ ಒಟ್ಟು 111.51 ಮೀಟರ್‌ಗಳು ಇದ್ದು ಈ ಸ್ವತ್ತಿಗೆ ಚಕ್ಕುಬಂದಿ.

ಪೂರ್ವ- ಸೈಟ್ ನಂ.15
ಪಶ್ಚಿಮ-ಸೈಟ್ ನಂ.13
ಉತ್ತರ-ಸೈಟ್ ನಂ.5
ದಕ್ಷಿಣ-ರಸ್ತೆ

ದಾವಣಗೆರೆ
ದಿನಾಂಕ : 21.07.2022

**ಮಲ್ಲಿಕಾರ್ಜುನ ಕಣವಿ,** ಬಿ.ಎ. ಎಲ್‌ಎಲ್.ಎಂ. ವಕೀಲರು,
ನಂ.5 & 6, 1ನೇ ಅಂತಸ್ತು, ದಾವಣಗೆರೆ ಆಟೋಮೊಬೈಲ್ ಸೊಸೈಟಿ ಕಾಂಪ್ಲೆಕ್ಸ್, ಹೋಟೆಲ್ ಪೂಜಾ ಇಂಟರ್ ನ್ಯಾಷನಲ್ ಎದುರು,
ಪಿ.ಬಿ. ರಸ್ತೆ, ದಾವಣಗೆರೆ-577006

## ಡೈರಿ, ಗೋಶಾಲೆಗೆ ಪಾಲಿಕೆ ಪರವಾನಗಿ ಅಗತ್ಯ

ದಾವಣಗೆರೆ, ಜು.20-ಪಾಲಿಕೆ ವ್ಯಾಪ್ತಿಯಲ್ಲಿನ ಜನವಸತಿ ಪ್ರದೇಶಗಳಲ್ಲಿ ಡೈರಿ ಫಾರ್ಮ್, ಗೋಶಾಲೆಗಳನ್ನು ನಡೆಸುತ್ತಿರುವವರು ಸರ್ಕಾರದ ಆದೇಶ ಹಾಗೂ ಪಾಲಿಕೆ ನಿಯಮಗಳ ಪ್ರಕಾರ ಮಹಾನಗರ ಪಾಲಿಕೆಯಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕೆಂದು ಆಯುಕ್ತ ವಿಶ್ವನಾಥ ಮುದಜ್ಜಿ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.


**ಆಟೀ ಅಮಾವಾಸ್ಯೆಯ ವಿಶೇಷ ಔಷಧಿ ವಿತರಣಾ ಶಿಬಿರ**

ತುಳುನಾಡು ಎಂದೇ ಪ್ರಖ್ಯಾತಿಯಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ ಜನರು ನಾನಾ ಆರೋಗ್ಯ ವೃದ್ಧಿಸುವ ಆಹಾರಗಳನ್ನು ತಯಾರಿಸುವಲ್ಲಿ ಬಹಳಷ್ಟು ವೈಶಿಷ್ಟ್ಯತೆಯನ್ನು ಹೊಂದಿರುತ್ತಾರೆ. ಆಟೀ ಮಾಸದ ಆಟೀಯ ಅಮಾವಾಸ್ಯೆಯಂದು ಕಾಡಿಗೆ ಹೋಗಿ ವಿಶಿಷ್ಟ ಗಿಡ ಮೂಲಿಕೆಗಳನ್ನು ತಂದು ಮಳೆಗಾಲ ಪ್ರಾರಂಭದ ಮುನ್ನ ಯಾವುದೇ ರೋಗ ತಗುಲಬಾರದೆಂದು ಸೇವಿಸುತ್ತಾರೆ. ಆ ವಿಶಿಷ್ಟ ಗಿಡ ಮೂಲಿಕೆಯ ಹೆಸರು ಪಾಲೇ ಮರ / ಮದ್ದಾಳೆ ತುಂಬಾ ಕಹಿ ಇರುವ ಈ ಮರದ ಕಷಾಯ ಯಾರು ಸೇವಿಸುವರೋ ಅವರು ಮುಂದಿನ ಆಟೀ ಮಾಸದವರೆಗೂ ಯಾವುದೇ ರೋಗಕ್ಕೆ ತುತ್ತಾಗುವುದಿಲ್ಲವೆಂಬ ನಂಬಿಕೆ ಮತ್ತು ಇದನ್ನು ಖಾಲಿ ಹೊಟ್ಟೆಯಲ್ಲಿ ಸೇವಿಸುವುದರಿಂದ ರೋಗ ನಿರೋಧಕ ಶಕ್ತಿ ಹೆಚ್ಚಿಸುತ್ತದೆ.


**ಕಷಾಯ ವಿತರಿಸುವ ದಿನಾಂಕ ಮತ್ತು ಸಮಯ 28/07/2022ರಂದು ಬೆಳಿಗ್ಗೆ 6;00 ರಿಂದ 8;00 ರವರೆಗೆ**
**ಸ್ಥಳ: ಅನ್ವಯ ಆಯುರ್ವೇದ ಆಸ್ಪತ್ರೆ, 10 ನೇ ಕ್ರಾಸ್ ಎಂ.ಸಿ.ಸಿ 'ಎ' ಬ್ಲಾಕ್, ದಾವಣಗೆರೆ.**
**ಫೋನ್ : 08192 252228, 86186 42929**
(ವಿಶೇಷ ಸೂಚನೆ: ಮೊದಲೇ ಹೆಸರು ನೋಂದಾಯಿಸಿದ 200 ಜನರಿಗೆ ಮಾತ್ರ)

**ಬೇಕಾಗಿದ್ದಾರೆ**

ಕೆಳಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳವರು ಈ ಕೆಳಗಿನ ಮೇಲ್‌ಗೆ ತಮ್ಮ ವೈಯಕ್ತಿಕ ವಿವರಗಳನ್ನು ಕಳುಹಿಸುವುದು.
(For the degree college , academic year 2022-23)

| ಹುದ್ದೆ | ವಿದ್ಯಾರ್ಹತೆ |
|---|---|
| 1. ಉಪ ಪ್ರಾಂಶುಪಾಲರು | ಎಂ.ಕಾಂ /ಎಂ. ಸಿ.ಎ. ಜೊತೆಗೆ ನೆಟ್ / ಸ್ಲೆಟ್ /ಪಿ.ಹೆಚ್. ಡಿ. |
| 2. ಸಹಾಯಕ ಪ್ರಾಧ್ಯಾಪಕರು | ಎಂ.ಕಾಂ/ಎಂ.ಸಿ.ಎ ಜೊತೆಗೆ ನೆಟ್ / ಸ್ಲೆಟ್ |
| 3. ಗ್ರಂಥಪಾಲಕರು | ಎಂ. ಲಿಬ್ ಸೈನ್ಸ್ ಜೊತೆಗೆ ನೆಟ್ / ಸ್ಲೆಟ್ |
| 4. ಅಟೆಂಡರ್ ( ಪುರುಷರಿಗೆ ಆದ್ಯತೆ ) | ಓದು, ಬರಹ ಬಲ್ಲವರು |

**Email id : Jobonline@gmail.com**





- ಚಿತ್ರ: ಎಚ್.ಬಿ.ಮಂಜುನಾಥ್

ಬುಧವಾರ ಸಂಜೆ ದಾವಣಗೆರೆಯಲ್ಲಿ ಬಿಸಿಲು - ಮಳೆ ಬಿದ್ದಾಗ ಆಕಾಶದಲ್ಲಿ ಮೂಡಿದ ಸುಂದರ ಕಾಮನಬಿಲ್ಲು.
'ಕಾಮನಬಿಲ್ಲು ಕಮಾನು ಕಟ್ಟಿದೆ ಮೋಡದ ನಾಡಿನ ಬಾಗಿಲಿಗೆ, ಬಣ್ಣಗಳೇಳನು ತೋರಣ ಮಾಡಿದೆ ಕಂದನ ಕಣ್ಣಿಗೆ ಹಬ್ಬವ ತಂದಿದೆ'...

# 'ಶಾಸಕರ ನಡೆ, ಹಳ್ಳಿ ಕಡೆ' : ಸಾರ್ವಜನಿಕರ ಕುಂದು-ಕೊರತೆ ಆಲಿಸಿದ ಶಾಸಕ ಕರುಣಾಕರ ರೆಡ್ಡಿ

ಹರಪನಹಳ್ಳಿ, ಜು. 20 - ನಮಗೆ ಮನೆ ಇಲ್ಲ, ರಸ್ತೆ ಸರಿಪಡಿಸಿಕೊಡಿ, ಚರಂಡಿ ಹೂಳು ತೆಗೆಸಿ, ನಮಗೆ ಪಿಂಚಣಿ ಬಂದಿಲ್ಲ ಎಂಬುದೂ ಸೇರಿದಂತೆ, ವಿವಿಧ ಸಮಸ್ಯೆಗಳನ್ನು ಸಾರ್ವಜನಿಕರು ಶಾಸಕ ಜಿ. ಕರುಣಾಕರ ರೆಡ್ಡಿ ಅವರಲ್ಲಿ ತಮ್ಮ ಅಳಲು ತೋಡಿಕೊಂಡರು.

ತಾಲ್ಲೂಕಿನ ತೆಲಿಗಿ ತಿಮ್ಲಾಪುರ, ತೆಲಿಗಿ ಹಾಗೂ ದುಗ್ಗಾವತಿ ಗ್ರಾಮಗಳಲ್ಲಿ ಶಾಸಕರ ನಡೆ, ಹಳ್ಳಿ ಕಡೆ ಕಾರ್ಯಕ್ರಮದಲ್ಲಿ ಕರುಣಾಕರ ರೆಡ್ಡಿ ಆರಂಭದಲ್ಲಿ ತೆಲಿಗಿ ಗ್ರಾಪಂ ವ್ಯಾಪ್ತಿಯ ತೆಲಿಗಿ ತಿಮ್ಲಾಪುರ ಗ್ರಾಮದಲ್ಲಿ ಸಾರ್ವಜನಿಕರ ಕುಂದು ಕೊರತೆ ಆಲಿಸಿದರು.

ನಂತರ ತೆಲಿಗಿ ಗ್ರಾಮದಲ್ಲಿ ಪರಿಶಿಷ್ಟ ಜಾತಿ, ಪಂಗಡ ಕಾಲೋನಿಗಳಲ್ಲಿ ಸ್ಥಳೀಯರ ಸಮಸ್ಯೆಗಳನ್ನು ಕೇಳುತ್ತಿರುವಾಗ ಬಹುತೇಕರು ನಮಗೆ ರಸ್ತೆ ಮಾಡಿಸಿಕೊಡಿ, ಮನೆಗಳು ಇಲ್ಲ, ಮನೆಗೆ ಹಣ ಕಟ್ಟಲಿಕ್ಕೆ ಸಾಕಾಗುತ್ತಿಲ್ಲ, ಚರಂಡಿ ಹೂಳು ತೆಗೆಸಲು ಹೇಳಿ ಸಾರ್ ಎಂದು ಸಮಸ್ಯೆಗಳನ್ನು ಹೇಳಿಕೊಂಡರು.

ಶಾಸಕರು ಸ್ಥಳದಲ್ಲಿ ತಹಶೀಲ್ದಾರ್, ಕಂದಾಯ ಅಧಿಕಾರಿಗಳೊಂದಿಗೆ ಸಮಲೋಚಿಸಿ ಸರ್ಕಾರದ ಜಾಗವನ್ನು ಹದ್ದುಬಸ್ತು ಮಾಡಿಸಿ, ಖಾಸಗಿ ವ್ಯಕ್ತಿಗಳಿದ್ದರೆ ತೆರವುಗೊಳಿಸಿ ಮನೆ ಇಲ್ಲದವರಿಗೆ ಪಟ್ಟಿ ಮಾಡಿ ಎಂದು ಅಧಿಕಾರಿಗಳಿಗೆ ಸೂಚಿಸಿದರು. ಇನ್ನು ರಸ್ತೆ ಕಾಮಗಾರಿಗೆ ಇಂಜಿನಿಯರ್‌ರವರಿಗೆ ಅಳತೆ ಮಾಡಿ, ಕ್ರಿಯಾ ಯೋಜನೆ ರೂಪಿಸಲು ತಿಳಿಸಿದರು.

ತೆಲಿಗಿ ಮತ್ತು ತೆಲಗಿ ತಿಮ್ಲಾಪುರದಲ್ಲಿ ಕೆಲ ಮಹಿಳೆಯರು ರಸ್ತೆಯನ್ನು ನಿರ್ಮಿಸಲು ನಿರ್ಲಕ್ಷ್ಯ ಮಾಡಿದ್ದಾರೆ ಎಂದು ದೂರಿದರು. ಮತ್ತೆ ಕೆಲವು ಮಹಿಳೆಯರು ಚುನಾವಣೆಯಲ್ಲಿ ಗೆದ್ದು ಹೋದ ನಂತರ ಈಗ ಬಂದಿದ್ದಾರೆ, ಈಗ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಭೇಟಿ ನೀಡಿದ್ದಾರೆ ಎಂದು ಗ್ರಾಮದ ಮಹಿಳೆಯರು ಗೊಣಗುತ್ತಿದ್ದುದ್ದು ಕಂಡುಬಂತು.



**ಹರಪನಹಳ್ಳಿ**

ಮತ್ತೊಬ್ಬ ಅಲ್ಪಸಂಖ್ಯಾತ ಮಹಿಳೆ ನಮ್ಮ ಮನೆ ಕಟ್ಟಿಕೊಳ್ಳಲು ಸರ್ಕಾರದ ಆಶ್ರಯ ಯೋಜನೆಯಡಿ ಆರಂಭಿಸಿದ್ದೇವೆ. ಎರಡು ವರ್ಷಗಳಿಂದ ಕೇವಲ ಎರಡು ಕಂತುಗಳ ಹಣ ಮಾತ್ರ ಬಿಡುಗಡೆ ಯಾಗಿದೆ. ಆದುದರಿಂದ ನಮಗೆ ಮನೆ ಕಟ್ಟಿಕೊಳ್ಳಲು ಸಹಾಯ ಮಾಡಿರಿ ಎಂದು ಶಾಸಕರಲ್ಲಿ ಮನವಿ ಮಾಡಿಕೊಂಡರು. ಆಗ ಶಾಸಕರು ಪ್ರತಿಕ್ರಿಯಿಸಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯನ್ನು ಕರೆದು ಮಾಹಿತಿ ಕೇಳಿದರು. ಆಗ ಅಭಿವೃದ್ಧಿ ಅಧಿಕಾರಿ ಸರ್ ಈ ಮನೆಗೆ ಎರಡು ಕಂತು ಹಣ ಮಾತ್ರ ಬಿಡುಗಡೆ ಯಾಗಿರುತ್ತದೆ ಮನೆಯನ್ನು ಪೂರ್ತಿಗೊಳಿಸಿದರೆ ಉಳಿದಿರುವ ಕಂತುಗಳು ಬಿಡುಗಡೆ ಯಾಗುತ್ತವೆ ಎಂದು ಹೇಳಿದರು

ನಂತರ ದುಗ್ಗಾವತಿ ಗ್ರಾಮದಲ್ಲಿ ಜೆಜೆಎಂ ಕುಡಿಯುವ ನೀರಿನ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು. ನಂತರ ದುಗ್ಗಾವತಿ ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ಶಾಸಕರು ಸನ್ಮಾನ ಸ್ವೀಕರಿಸಿ ನಂತರ ಸಾರ್ವಜನಿಕರ ಕುಂದು - ಕೊರತೆಗಳನ್ನು ಆಲಿಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಡಾ. ಶಿವಕುಮಾರ್ ಬಿರಾದಾರ, ಇಓ ಪ್ರಕಾಶ, ಗ್ರಾಪಂ ಅಧ್ಯಕ್ಷ ವಿಶ್ವನಾಥ, ಎಇಇ ಸಿದ್ದರಾಜ, ಕೃಷಿ ಸಹಾಯಕ ನಿರ್ದೇಶಕ ಗೊಂದಿ ಮಂಜುನಾಥ, ಮುಖಂಡರಾದ ವಿಷ್ಣುವರ್ಧನ, ಆರ್.ಲೋಕೇಶ್, ಕಣಿವಿಹಳ್ಳಿ ಮಂಜುನಾಥ, ಕೆಂಗಳ್ಳಿ ಪ್ರಕಾಶ್, ಎಂ.ಮಲ್ಲೇಶ್, ಶಿರಗಾನಹಳ್ಳಿ ವಿಶ್ವನಾಥ, ತೋಟಗಾರಿಕೆ ರವಿ, ಹೇಮಂತಕುಮಾರ, ಕೆ.ಪ್ರಕಾಶ್, ಭಂಗಿ ಚಂದ್ರಪ್ಪ, ತೆಲಿಗಿ ಗಂಗಪ್ಪ, ಮಲ್ಲಪ್ಪ, ಫಕ್ಕೀರಪ್ಪ, ನಾಗರಾಜ, ಲಕ್ಕಪ್ಪ, ಹನುಮಂತಪ್ಪ, ವಿಠ್ಠಲ, ರಮೇಶ, ರಾಜಪ್ಪ, ಸುರೇಶಪ್ಪ, ಯೋಗೀಶ್, ಸಂತೋಷ, ಕೋಟೆಪ್ಪ, ಮಲ್ಲೇಶ್ ನಾಯ್ಕ್, ಸಿದ್ದರಾಮಪ್ಪ, ಗ್ರಾಮಸ್ಥರು, ಕಂದಾಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಇದ್ದರು.

# ಅಧಿಕಾರ ಕಳೆದುಕೊಂಡ 12 ಪ್ರಾಧಿಕಾರಗಳ ಅಧ್ಯಕ್ಷರು

ಬೆಂಗಳೂರು, ಜು.20- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಹೆಚ್.ವಿ. ರಾಜೀವ್, ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಕೆ.ಎಸ್. ರಮೇಶ್ ಕೊಳ್ಳ, ಚಾಮರಾಜನಗರ ಪ್ರಾಧಿಕಾರದ ಪಿ.ವಿ. ಶಾಂತಮೂರ್ತಿ ಸೇರಿದಂತೆ 12 ಪ್ರಾಧಿಕಾರಗಳ ಅಧ್ಯಕ್ಷರು ಅಧಿಕಾರ ಕಳೆದುಕೊಂಡಿದ್ದಾರೆ.

ತಡ ರಾತ್ರಿ ಈ ಆದೇಶವನ್ನು ಹೊರಡಿಸಿರುವ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ 56 ನಿಗಮ, ಮಂಡಳಿ ಮತ್ತು ಈ ಹನ್ನೆರಡು ಪ್ರಾಧಿಕಾರ ಗಳಿಗೆ ಹೊಸ ಅಧ್ಯಕ್ಷರ ನೇಮಕಾತಿಯನ್ನು ಜುಲೈ 28 ರ ನಂತರ ಮಾಡಲಿದ್ದಾರೆ.

**ಅಧಿಕಾರ ಕಳೆದುಕೊಂಡ ಇತರೆ ಪ್ರಾಧಿಕಾರದ ಅಧ್ಯಕ್ಷರುಗಳು:** ಶಿವ ಕುಮಾರ್ ಸಂಗೂರ-ಹಾವೇರಿ ನಗರಾಭಿ ವೃದ್ದಿ ಪ್ರಾಧಿಕಾರ, ಅಶ್ವಿನಿ-ಕೆಜಿಎಫ್, ನಾಗೇಶ್ ಪುಂಡಲೀಕ ಕಲಬುರ್ಗಿ-ಹುಬ್ಬಳ್ಳಿ ಧಾರವಾಡ, ಅಶೋಕ್ ಜಿರೆ - ಹೊಸ ಪೇಟೆ, ರವಿಶಂಕರ್ ಮಿಜಾರ್-ಮಂಗಳೂರು, ಆನಂದ್ ಚಿನ್ನತಂಬಿ-ಚಿಕ್ಕಮಗಳೂರು, ಲಲಾಟಮೂರ್ತಿ-ಹಾಸನ, ಬಸಲಿಂಗಪ್ಪ ಕಾಶಿನಾಥ ನಾವಲಗಿ -ಬಾಗಲಕೋಟೆ, ದಯಾಘನ್ ಪ್ರಲ್ಹಾದ್ ರಾವ್ ಧಾರವಾಡ್ಕರ್-ಕಲಬುರ್ಗಿ ಅಧ್ಯಕ್ಷರು ಅಧಿಕಾರ ಕಳೆದುಕೊಂಡಿದ್ದಾರೆ.

# ಬಾಪೂಜಿ ಮಕ್ಕಳ ಆಸ್ಪತ್ರೆಯಲ್ಲಿ ಅಪರೂಪದ ಶಸ್ತ್ರ ಚಿಕಿತ್ಸೆ

## ಅನ್ನನಾಳ ದೋಷದಿಂದ ಊಟ ಮಾಡಲೂ ಆಗದ ಮಗುವಿಗೆ ಪುನರ್ಜನ್ಮ ನೀಡಿದ ವೈದ್ಯರು



ದಾವಣಗೆರೆ, ಜು. 20- ಹುಟ್ಟುತ್ತಲೇ ಅನ್ನನಾಳ ದೋಷದಿಂದ ಬಳಲುತ್ತಿದ್ದ ಮಗುವಿಗೆ ಅಪರೂಪದ ಶಸ್ತ್ರ ಚಿಕಿತ್ಸೆ ನಡೆಸಿ, ಇದೀಗ ಮಗು ತಾನಾಗಿಯೇ ಊಟ ಮಾಡುವಂತೆ ಮಾಡುವಲ್ಲಿ ಬಾಪೂಜಿ ವೈದ್ಯರು ಯಶಸ್ವಿಯಾಗಿದ್ದಾರೆ.

ವೀರಣ್ಣ ಎಂಬ ಮಗು, ಹುಟ್ಟಿದಾಗಲೇ ಅನ್ನನಾಳ ಅಭಿವೃದ್ಧಿಯಾಗಿರಲಿಲ್ಲ. ಲಾಲಾರಸ ಹಾಗೂ ಹಾಲು ಸಹ ನುಂಗಲೂ ಸಾಧ್ಯವಾಗುತ್ತಿರಲಿಲ್ಲ. ಆದರೆ ನಮ್ಮ ವೈದ್ಯರು ಆ ಮಗುವಿಗೆ ಯಶಸ್ವಿಯಾಗಿ ಶಸ್ತ್ರ ಚಿಕಿತ್ಸೆ ನಡೆಸಿದ್ದಾರೆ ಎಂದು ಬಾಪೂಜಿ ಆಸ್ಪತ್ರೆ ಮಕ್ಕಳ ವಿಭಾಗದ ಮುಖ್ಯಸ್ಥ ಡಾ.ಮೂಗನಗೌಡ ಪಾಟೀಲ್ ತಿಳಿಸಿದರು.

ಆಸ್ಪತ್ರೆಯಲ್ಲಿ ಪತ್ರಕರ್ತರೊಂದಿಗೆ ಈ ಕುರಿತ ಸಂತಸ ಹಂಚಿಕೊಂಡ ಅವರು, 50 ಸಾವಿರ ಮಕ್ಕಳಲ್ಲಿ ಒಬ್ಬರಿಗೆ ಬರುವಂತಹ ಕಾಯಿಲೆ ಇದಾಗಿತ್ತು ಎಂದರು.

ಮಗುವನ್ನು ಉಳಿಸುವ ಪ್ರಥಮ ಕ್ರಿಯೆಗೆ ಹೊಸಪೇಟೆಯಲ್ಲಿ ದಾಖಲಿಸಲಾಗಿತ್ತು. ಅನ್ನನಾಳವನ್ನು ಗುತ್ತಿಗೆಯ ಭಾಗದಲ್ಲಿ ಅಳವಡಿಸಲಾಗಿತ್ತು. ಅವನ ಲಾಲಾರಸವು ಕುತ್ತಿಗೆಯಿಂದ ಹೊರಬರುತ್ತಿತ್ತು ಮತ್ತು ಹೊಟ್ಟೆಗೆ ಹಾಕಿದ ಟ್ಯೂಬ್ ಮೂಲಕ ಆಹಾರವನ್ನು ನೀಡಲಾಗುತ್ತಿತ್ತು ಎಂದರು.

1ನೇ ವರ್ಷದಲ್ಲಿ ನಿರ್ಣಾಯಕ ಕಾರ್ಯ ವಿಧಾನಕ್ಕಾಗಿ ಮಗುವನ್ನು ಹೊಸಪೇಟೆಯ ವೈದ್ಯರ ಸಲಹೆಯಂತೆ ದಾವಣಗೆರೆಯ ಬಾಪೂಜಿ ಮಕ್ಕಳ ಆಸ್ಪತ್ರೆಗೆ ಕರೆತರಲಾಗಿತ್ತು. ಒಪಿಡಿಯಲ್ಲಿ ನೋಡಿದ ನಂತರ 10 ಕೆ.ಜಿ. ತೂಕದ ನಂತರ ಶಸ್ತ್ರ ಚಿಕಿತ್ಸೆ ಮಾಡಲಾಗುವುದು ಎಂಬ ಸಲಹೆ ನೀಡಿದ್ದೆವು.

ಇದರಿಂದ 3 ವರ್ಷಗಳ ಕಾಲ ಮಗುವಿಗೆ ಟ್ಯೂಬ್ ಮೂಲಕ ಸ್ವಲ್ಪ ಹಾಲನ್ನು ಮಾತ್ರ ನೀಡಲಾಗುತ್ತಿತ್ತು. ತಾಯಿ ಬೇರೆ ಆಹಾರ ನೀಡಲು ಭಯ ಪಡುತ್ತಿದ್ದರು. ಆದ್ದರಿಂದ ದೊಡ್ಡ ಶಸ್ತ್ರ ಚಿಕಿತ್ಸೆ ತಡೆದುಕೊಳ್ಳುವಷ್ಟು ತೂಕವನ್ನು ಮಗು ಪಡೆದಿರಲಿಲ್ಲ. ಆದರೆ ನಾವು ಮಗುವನ್ನು 2 ತಿಂಗಳು ಕಾಲ ಎಸ್. ಎಸ್. ಕೇರ್ ಟ್ರಸ್ಟ್ ಅಡಿಯಲ್ಲಿ ಬಾಪೂಜಿ ಮಕ್ಕಳ ಆಸ್ಪತ್ರೆಗೆ ಸೇರಿಸಲಾಯಿತು. ನೀರಿನ ಬದಲಾಗಿ ಅನ್ನ, ಗಂಜಿ, ತುಪ್ಪ ಹೀಗೆ ಪೌಷ್ಟಿಕ ಆಹಾರ ನೀಡಿ ತೂಕವನ್ನು 10 ಕೆ.ಜಿ.ಗೆ ಹೆಚ್ಚಿಸಲಾಗಿತ್ತು.

ನಂತರ 6 ಗಂಟೆಗಳ ಕಾಲ ಸುದೀರ್ಘ ಶಸ್ತ್ರ ಚಿಕಿತ್ಸೆ ನಡೆಸಿ, ಹಿಂದಿನ ಶಸ್ತ್ರ ಚಿಕಿತ್ಸೆ ಬದಲಾಯಿಸಿ ಅನ್ನನಾಳದ ಅವಶೇಷವನ್ನು ಹೊರ ತೆಗೆಯಲಾಯಿತು. ಹೊಟ್ಟೆಯನ್ನು ಉದ್ದಗೊಳಿಸಿ, ಟ್ಯೂಬುಲರೈಸ್ ಮಾಡಲಾಯಿತು. ಹಾಗೆಯೇ ಹೃದಯ ಮತ್ತು ಶ್ವಾಸಕೋಶದ ಹಿಂದೆ ಎದೆಯ ಮೂಲಕ ತಂದು ಕುತ್ತಿಗೆಯಲ್ಲಿ ಅನ್ನನಾಳಕ್ಕೆ ಹೊಲಿಗೆ ಹಾಕಲಾಯಿತು. ನಂತರ ಮಗುವನ್ನು 48 ಗಂಟೆ ಐಸಿಯು ನಲ್ಲಿ ವೆಂಟಿಲೇಟರ್ ಮಾಡಿ ನಿಧಾನವಾಗಿ ಆಹಾರ ನೀಡಲು ಆರಂಭಿಸಲಾಯಿತು. ಇದೀಗ ಮಗು ತಾನಾಗಿಯೇ ಸ್ವತಃ ಆಹಾರ ಹಾಗೂ ನೀರನ್ನು ಸೇವಿಸುತ್ತಿದೆ ಎಂದು ಡಾ.ಮೂಗನಗೌಡ ವಿವರಿಸಿದರು.

ಜ.ಜ.ಮು. ವೈದ್ಯಕೀಯ ವಿದ್ಯಾಲಯದ ಅರಿವಳಿಕೆ ವಿಭಾಗದ ಪ್ರಾಧ್ಯಾಪಕಿ ಡಾ.ಉಮಾ, ಹಿರಿಯ ನಿವಾಸಿ ವೈದ್ಯಾಧಿಕಾರಿ ಡಾ.ಅಕ್ಷತಾ ಡಿ., ಸ್ನಾತಕೋತ್ತರ ವಿದ್ಯಾರ್ಥಿಗಳಾದ ಡಾ. ಹರಿತಾ ಎ.ಪಿ., ಡಾ. ದೇವರಾಜ್ ಕೊಪ್ಪದ್ ಅವರುಗಳು ಶಸ್ತ್ರ ಚಿಕಿತ್ಸೆ ವೇಳೆ ಉಂಟಾದ ಸವಾಲುಗಳ ಬಗ್ಗೆ ವಿವರಿಸಿದರು.

ಜ.ಜ.ಮು. ವೈದ್ಯಕೀಯ ವಿದ್ಯಾಲಯದ ಪ್ರಾಂಶುಪಾಲ ಡಾ.ಎಸ್.ಬಿ. ಮುರುಗೇಶ್ ಮಾತನಾಡಿ, ವೈದ್ಯರ ಶ್ರಮವನ್ನು ಶ್ಲಾಘಿಸುತ್ತಾ, ಬಾಪೂಜಿ ಮಕ್ಕಳ ಆಸ್ಪತ್ರೆಯಲ್ಲಿ ಇಂತಹ ಕಷ್ಟಕರವಾದ ಶಸ್ತ್ರ ಚಿಕಿತ್ಸೆಗಳನ್ನು ಕೈಗೆಟುಕುವ ದರದಲ್ಲಿ ಮಾಡಬಹುದಾದ ನುರಿತ ವೈದ್ಯರ ತಂಡವಿದೆ. ಜನ ಸಾಮಾನ್ಯರು ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಮಕ್ಕಳ ವೈದ್ಯ ಡಾ.ಕೌಜಲಗಿ, ಡಾ.ಉಮಾ ಪ್ರಸನ್ನ, ಡಾ.ಗುರುಪ್ರಸಾದ್, ಡಾ.ಪ್ರಕಾಶ್ ಎಸ್.ಎಸ್, ಡಾ.ಮಧು ಪೂಜಾರ್ ಮತ್ತು ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

### ಡಿಸೆಂಬರ್‌ಗೆ ಬೆಳ್ಳಿ ಹಬ್ಬ

ಬಾಪೂಜಿ ಮಕ್ಕಳ ಆಸ್ಪತ್ರೆ ಆರಂಭವಾಗಿದ್ದು 1994ರಲ್ಲಿ. 2019ಕ್ಕೆ 25 ವರ್ಷವಾಯಿತು. ಕೊರೊನಾ ಕಾರಣದಿಂದ ಬೆಳ್ಳಿ ಹಬ್ಬ ಆಚರಿಸಲಾಗಲಿಲ್ಲ. ಬರುವ ಡಿಸಂಬರ್ ತಿಂಗಳಲ್ಲಿ ಬೆಳ್ಳಿ ಹಬ್ಬ ಆಚರಿಸಲಾಗುವುದು ಎಂದು ಡಾ. ಮೂಗನಗೌಡ ಪಾಟೀಲ್ ತಿಳಿಸಿದರು.

### ಮಕ್ಕಳ ವಿಭಾಗದಲ್ಲಿ 280 ಬೆಡ್

ಬಾಪೂಜಿ ಮಕ್ಕಳ ವಿಭಾಗದಲ್ಲಿ 160 ಬೆಡ್‌ಗಳಿದ್ದವು. ಇದೀಗ 120 ಬೆಡ್‌ಗಳನ್ನು ಹೆಚ್ಚಿಸಿ 280 ಬೆಡ್‌ಗಳ ಆಸ್ಪತ್ರೆಯಾಗಿದೆ ಎಂದು ಡಾ. ಮೂಗನಗೌಡ ಹೇಳಿದರು.

# ಶ್ರೀಮದ್ ಸಾಧು ಸದ್ಧರ್ಮ ವೀರಶೈವ ಸಂಘದ ನೂತನ ಅಧ್ಯಕ್ಷರಿಗೆ ಶಿವಸೈನ್ಯದ ಅಭಿನಂದನೆ



ದಾವಣಗೆರೆ,ಜು.20- ಶ್ರೀಮದ್ ಸಾಧು ಸದ್ಧರ್ಮ ವೀರಶೈವ ಸಂಘದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿರುವ ಹೆಚ್.ಆರ್. ಬಸವರಾಜಪ್ಪ ಅವರನ್ನು ಶಿವ ಸಹಕಾರಿ ಬ್ಯಾಂಕ್ ಅಧ್ಯಕ್ಷ ಮಾಗನೂರು ಸಂಗಮೇಶ್ವರ ಗೌಡ್ರು, ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪದ ವ್ಯವಸ್ಥಾಪಕ ವೈ. ವಸಂತಪ್ಪ, ಶಿವಸೈನ್ಯ ಯುವಕ ಸಂಘದ ಗೌರವಾಧ್ಯಕ್ಷ ಶಶಿಧರ ಹೆಮ್ಮನಬೇತೂರು, ಕುಮಾರ್ ಮೆಳ್ಳೇಕಟ್ಟೆ, ಪ್ರಭು ಕಾವಲಹಳ್ಳಿ, ಸತೀಶ್ ಸಿರಿಗೆರೆ, ಕೊರಟಿಕೆರೆ ಶಿವಕುಮಾರ್, ಕೊಂಡಜ್ಜಿ ಶಿವಕುಮಾರ್ ಅವರುಗಳು ಅಭಿನಂದಿಸಿದ್ದಾರೆ.






# ಪ್ರಸ್ತುತ ರಾಜಕೀಯ ಉದ್ಯಮದಂತಾಗಿದೆ

## ಸಿಪಿಐ ರಾಷ್ಟ್ರೀಯ ಮಂಡಳಿ ಸದಸ್ಯ ಲೋಕೇಶ್‌ರಿಂದ ಕಾಂ. ಅಡಿವೆಪ್ಪ ಸಮುದಾಯ ಭವನ ಉದ್ಘಾಟನೆ



ದಾವಣಗೆರೆ, ಜು. 20 - ಪ್ರಸ್ತುತ ರಾಜಕೀಯವೆಂದರೆ ಸೇವೆಯಲ್ಲ, ಅದು ಉದ್ದಿಮೆ ಎನ್ನುವಂತಾಗಿದೆ. ದೇಶ ಸೇವೆಯ ಹೆಸರು ಹೇಳಿಕೊಂಡು ಬರುವ ರಾಜಕಾರಣಿಗಳು ಭ್ರಷ್ಟಾಚಾರ ಹಗರಣದಲ್ಲಿ ಮುಳುಗಿ ಹೋಗಿದ್ದಾರೆ. ಮೂರು ತಲೆಮಾರಿನ ಜನರು ತಿಂದರೂ ಕರಗದಷ್ಟು ಆಸ್ತಿ ಮಾಡುವಂತಹ ಸ್ಥಿತಿಗೆ ತಲುಪಿರುವುದು ಈ ದೇಶದ ದುರಂತ ಎಂದು ಸಿಪಿಐ ರಾಷ್ಟ್ರೀಯ ಮಂಡಳಿ ಸದಸ್ಯ ಪಿ.ವಿ. ಲೋಕೇಶ್ ಕಳವಳ ವ್ಯಕ್ತಪಡಿಸಿದರು.

ಅವರು, ಇಂದು ನಗರದ ಈರುಳ್ಳಿ ಮಾರುಕಟ್ಟೆ ರಸ್ತೆಯಲ್ಲಿನ ಶೇಖರಪ್ಪ ನಗರದ ಮುಖ್ಯ ರಸ್ತೆಯಲ್ಲಿನ ಕಾಂ. ಹೆಚ್. ಅಡಿವೆಪ್ಪ ಸಮುದಾಯ ಭವನ ಉದ್ಘಾಟಿಸಿ ಮಾತನಾಡಿದರು.

ಶಿಕ್ಷಣ ಸಂಸ್ಥೆಗಳು, ಸಿನಿಮಾ ಸಂಸ್ಥೆಗಳು, ನಾಟಕಗಳು, ಕಲಾ ಸೇವೆಗಳು ಈಗ ಉದ್ದಿಮೆಗಳಾಗಿವೆ. ಇವುಗಳು ಮಾತ್ರವಲ್ಲದೆ ಧಾರ್ಮಿಕ ಕೇಂದ್ರಗಳು ಸಹ ಉದ್ದಿಮೆಗಳಾಗಿ ಪರಿವರ್ತನೆಗೊಂಡಿರುವುದು ಉತ್ತಮ ಬೆಳವಣಿಗೆ ಅಲ್ಲ. ಇದೆಲ್ಲದರ ಮಧ್ಯೆ ಚುನಾವಣೆ ಕೂಡ ಉದ್ದಿಮೆಯಾಗಿ ಪರಿವರ್ತನೆಗೊಂಡಿರುವುದು ದೇಶದ ದುರಂತ ಎಂದು ತಿಳಿಸಿದರು.

ಸಿಪಿಐ ರಾಜ್ಯ ಮಂಡಳಿ ಸದಸ್ಯ ಸಾತಿ ಸುಂದರೇಶ್ ಮಾತನಾಡಿ, ಒಂದು ಕಾಲದಲ್ಲಿ ದಾವಣಗೆರೆ ಎಂದರೆ ಹೋರಾಟಗಳ ನಗರ ಎಂದೇ ಖ್ಯಾತಿಯಾಗಿತ್ತು. 50 ವರ್ಷಗಳ ಹಿಂದೆ ದಾವಣಗೆರೆಯಲ್ಲಿ ಹೊಸ ಇತಿಹಾಸವನ್ನೇ ನಿರ್ಮಿಸಿತು. ಅಂತಹ ಗತವೈಭವ ಮತ್ತೆ ಮರಳಿ ಬರಬೇಕಾಗಿದೆ. ಹೋರಾಟ, ಚಳುವಳಿಗಳ ಮೂಲಕ ನಮ್ಮ ಪಕ್ಷ ಜನರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕು. ಅಲ್ಲದೆ ನಗರದ ಅಭಿವೃದ್ಧಿಗೆ ಗಮನ ಹರಿಸಬೇಕು ಎಂದು ಹೇಳಿದರು.


ಪ್ರಸ್ತುತ ಆಡಳಿತ ನಡೆಸುವ ಸರ್ಕಾರಗಳು ತೆರಿಗೆ ಹೆಸರಿನಲ್ಲಿ ಬಡವರು, ಜನಸಾಮಾನ್ಯರು ಜೀವನ ಮಾಡಲಾರದಷ್ಟು ತೆರಿಗೆಗಳನ್ನು ಏರಿಕೆ ಮಾಡಿದ್ದಾರೆ. ದಿನ ನಿತ್ಯ ಬಳಕೆಯ ಅಗತ್ಯ ವಸ್ತುಗಳೂ ಸೇರಿದಂತೆ ಇಂಧನ ಬೆಲೆ ಏರಿಕೆಗಳಿಂದಾಗಿ ಜನರು ತತ್ತರಿಸಿದ್ದಾರೆ. ಇಂತಹ ಸರ್ಕಾರಗಳಿಗೆ ಜನ ತಕ್ಕ ಪಾಠ ಕಲಿಸಬೇಕಾಗಿದೆ ಎಂದು ಕರೆ ನೀಡಿದರು.

ದಾವಣಗೆರೆಯಲ್ಲಿ ಭಾರತೀಯ ಕಮ್ಯುನಿಷ್ಟ್ ಪಕ್ಷದ ಚಳವಳಿಗೆ ಹಿನ್ನಡೆಯಾಗಿದೆ. ಇದಕ್ಕೆ ಈಗಿರುವ ಸನ್ನಿವೇಶಗಳು ಕಾರಣ. ಈ ಹಿಂದಿನ ಹೋರಾಟದ ನೆನಪುಗಳನ್ನು ಮೆಲುಕು ಹಾಕುತ್ತಾ ಪಕ್ಷವು ಚಳುವಳಿ ಮತ್ತು ಹೋರಾಟಗಳನ್ನು ಸಂಘಟಿಸಿ, ಜನರಿಗೆ ನ್ಯಾಯ ಕೊಡಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿಪಿಐ ಖಜಾಂಚಿ ಆನಂದರಾಜ್ ವಹಿಸಿದ್ದರು. ವೇದಿಕೆಯಲ್ಲಿ ಹೆಚ್.ಜಿ. ಉಮೇಶ್, ಕೆ. ರಾಘವೇಂದ್ರ ನಾಯರಿ, ಟಿ.ಎಸ್. ನಾಗರಾಜ್, ಎಂ.ಬಿ. ಶಾರದಮ್ಮ, ಮಹಮ್ಮದ್ ಬಾಷಾ, ಚಿನ್ನಪ್ಪ, ಆವರಗೆರೆ ವಾಸು, ಆವರಗೆರೆ ಚಂದ್ರು, ಐರಣಿ ಚಂದ್ರು, ನಾಗರಾಜ್, ದಾದಾಪೀರ್, ಮುಹಮ್ಮದ್ ರಫೀಕ್, ಹೆಚ್.ಕೆ. ಕೊಟ್ರಪ್ಪ, ವಿ. ಲಕ್ಷ್ಮಣ್, ಭೀಮಾರೆಡ್ಡಿ, ಶಿವಕುಮಾರ್ ಶೆಟ್ಟರ್ ಸೇರಿದಂತೆ ಇತರರು ಇದ್ದರು.

### ಮಲೇಬೆನ್ನೂರಿಗೆ ರಾಮಪ್ಪ

ಶಾಸಕ ಎಸ್.ರಾಮಪ್ಪ ಅವರು ತಮ್ಮ ಹುಟ್ಟುಹಬ್ಬದ ಅಂಗವಾಗಿ ಪಟ್ಟಣದ ವಿವಿಧ ದೇವಸ್ಥಾನಗಳಲ್ಲಿ ಇಂದು ವಿಶೇಷ ಪೂಜೆ ಸಲ್ಲಿಸಲಿದ್ದಾರೆ.



JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte